# ॥ ಶ್ರೀ ಅಗಸ್ತ್ಯಮಹಾತ್ಮ್ಯ ॥

ಮೂಲ (ಮರಾಠಿ) : ಡಾ॥ ಅನಿಲ ಸಹಸ್ರಬುದ್ಧೇ


**ಕನ್ನಡ ಓವಿಬದ್ಧ ಅನುವಾದ**

**ಶ್ರೀಕಾಂತ ರ. ಘಾಟಕ**

ರಘುವಂಶ, ಮುರಲೀಧರ ಆಳೀ, ಪಾರನಾಕಾ-ಕಲ್ಯಾಣ (ಪ.) ಪಿನ್ - ೪೨೧೩೦೧.

ದೂರಧ್ವನಿ : ೦೨೫೧-೨೨೦೭೫೮೩

**ಅಗಸ್ತ್ಯ ಮಹಾತ್ಮ್ಯ** (Agastya Mahatmya)
*(ಮೂಲ ಮರಾಠಿ ಹೊತ್ತಿಗೆಯ ಕನ್ನಡ ಅನುವಾದ)*

**ಮೂಲ ಮರಾಠಿ ಲೇಖಕ**
ಡಾ॥ ಅನಿಲ ಸಹಸ್ರಬುದ್ಧೇ

**ಕನ್ನಡ ಅನುವಾದಕ :**
ಶ್ರೀ ಶ್ರೀಕಾಂತ ರಘುನಾಥ ಘಾಟಕ
ರಘುವಂಶ, ಮುರಲೀಧರ ಆಳೀ, ಪಾರನಾಕಾ,
ಕಲ್ಯಾಣ (ಪಶ್ಚಿಮ) - ೪೨೧ ೩೦೧.
ಜಿಲ್ಲಾ - ಠಾಣೆ (ಮಹಾರಾಷ್ಟ್ರ ರಾಜ್ಯ)

ಹಕ್ಕು : ಸೌ. ಉಷಾ ಸಹಸ್ರಬುದ್ದೇ
(ರೂಪಾಂತರ, ಭಾಷಾಂತರ ಪುನರ್ಮುದ್ರಣ)

ಇತ್ಯಾದಿ ಎಲ್ಲ ಹಕ್ಕು ಸ್ವಾಧೀನ

**ಪ್ರಕಾಶಕ :**
ಅನಂದೋತ್ಸ ಪ್ರಕಾಶನ ಮಂಚ
ಆನಂದೋತ್ಸವ ಚರಿಟೇಬಲ್ ಟ್ರಸ್ಟ್
ಅಹಮದನಗರ, ಮಹಾರಾಷ್ಟ್ರ
ವಿಳಾಸ : ' ಆಈ' ಸಮರ್ಥನಗರ, ಶ್ರೀರಾಮಚೌಕ,
ಪಾಯಿಪ್ ಲಾಯನ್ ರೋಡ್, ಅಹಮದನಗರ, ಮಹಾರಾಷ್ಟ್ರ-ಭಾರತ
ದೂರಧ್ವನಿ : (0241-2424167) ಮೊಬೈಲ್ : 9881500942
Isbn : 13-978-93-84887-05-6

ಪ್ರಥಮ ಪ್ರಕಾಶನ : ೧೯ ಎಪ್ರಿಲ್ ೨೦೧೫

ಪ್ರಿಂಟರ್ಸ್ : ಪಂಡಿತ ದೀಕ್ಷಿತ
ಮೇಘಾ ಆ್ಯಡ್ಸ್, ದೀನದಯಾಳ ರೋಡ್, ಗಣಪತಿ ನಿವಾಸ,
ಡೊಂಬಿವಲಿ (ಪಶ್ಚಿಮ) ೪೨೧ ೨೦೨.
ಮೊಬೈಲ್ : ೯೬೫೪೨೮೫೨೩೪
ಮೂಲ್ಯ ರೂ. ೫೧/- (51/-) ಕೇವಲ

ವಿಶೇಷ ನಿವೇದನ : 'ಅನಂದೋತ್ಸವ ಪ್ರಕಾಶನ ಮಂಚ, ಕೇವಲ ಪ್ರಕಾಶನಕ್ಕಾಗಿ ವಿನಾಮೂಲ್ಯ ಸೇವೆ ಉಪಲಬ್ಧ. ಗ್ರಂಥ ನಿರ್ಮಿತಿ, ವಿತರಣೆ, ಆಯ-ವ್ಯಯಗಳ ಬಗ್ಗೆ- ಆನಂದೋತ್ಸವ ಚರಿಟೆಬಲ್ ಟ್ರಸ್ಟ್ ಸಂಸ್ಥೆಯ ಯಾವದೇ ಪ್ರಕಾರದ ಸಂಬಂಧವಿಲ್ಲ. ಪ್ರಸ್ತುತ ಹೊತ್ತಿಗೆ ಸಂಪೂರ್ಣ ಖರ್ಚು ಮೂಲ ಲೇಖಕರೇ ಸೇವಾಭಾವನೆಯಿಂದ ಮಾಡಿದ್ದಾರೆ. ಈ ಗ್ರಂಥದಿಂದ ಪ್ರಾಪ್ತ ಉತ್ಪನ್ನವು ಶ್ರೀ ಅಗಸ್ತ್ಯ ಚರಣದಲ್ಲಿ ಸಮರ್ಪಿತ ಆಗಲಿದೆ.

ಪರಿಚಯ

# ಪ್ರಾಚಾರ್ಯ ಡಾ|| ಅನಿಲ ಸಹಸ್ರಬುದ್ಧೇ



ಮಾಜಿ (ಭೂತಪೂರ್ವ) ಪ್ರಾಚಾರ್ಯ ಹಾಗೂ ಮರಾಠಿ ವಿಭಾಗ ಪ್ರಮುಖ,ಪ್ರೇಮರಾಜ ಸಾರಡಾ ಮಹಾವಿದ್ಯಾಲಯ, ಅಹಮದನಗರ. 'ಜ್ಞಾನೇಶ್ವರೀ ತೀಲ' (ಜ್ಞಾನೇಶ್ವರಿಯಲ್ಲಿಯ) ಸಾಹಿತ್ಯ, ವಿಚಾರ, ಲೋಕೀ ಅಲೌಕಿಕ ತುಕಾರಾಮ, ಸಾರ್ಥಯೋಗ ಸಂಗ್ರಾಮ, ಸಾರ್ಥ ಬಾಳಾವಬೋಧ ಸಂತಾಚಿಯೇ ಸಂಗತಿ (ಸಂತರ ಸಂಗದಲ್ಲಿ), ಲೋಕ ನಿಷ್ಠ ಅಧ್ಯಾತ್ಮವಾದ, ಈ ಗ್ರಂಥಗಳ ಲೇಖಕ ಹಾಗೇ 'ಅಗಸ್ತ್ಯ', 'ನಾರದ' ಈ ಪೌರಾಣಿಕ ಕಾದಂಬರಿಗಳ ಲೇಖಕ.

ಕಾಂಚೀ ಕಾಮಕೋಟಿ ಪೀಠದ ವತಿಯಿಂದ ಶ್ರೀಮದ್ ಜಗದ್ಗುರು ಶಂಕರಾಚಾರ್ಯಸ್ವಾಮಿ ಜಯೇಂದ್ರ ಸರಸ್ವತಿ ಅವರು ಜ್ಞಾನೇಶ್ವರಿ ಲೇಖನ ಸಪ್ತ ಶತಾಬ್ದಿ ನಿಮಿತ್ತ ೧೯೯೨ರಲ್ಲಿ 'ವಿದ್ವತ್' ಪುರಸ್ಕಾರಕೊಟ್ಟು ಗೌರವಿಸಿದ್ದಾರೆ. ಅನೇಕ ಸನ್ಮಾನನೀಯ ಪುರಸ್ಕಾರ ಪ್ರಾಪ್ತ, ವೈಚಾರಿಕ ಸಂಶೋಧನ, ಸಮಿಕ್ಷಾ ಕಥಾ, ಕಾದಂಬರಿ, ನಾಟಕ, ಏಕಾಂಕಿಕಾ, ಕವಿತಾ ಸ್ಪುಟ ಲೇಖನ ಮತ್ತು ಸಂಪಾದಿತ ಇತ್ಯಾದಿ ನಾಲ್ವತ್ತೈದು ಗ್ರಂಥಗಳು ಪ್ರಸಿದ್ಧ.

iii

ಅನುವಾದಕರ ಪರಿಚಯ

ಈ ಗ್ರಂಥದ ಕನ್ನಡ ಅನುವಾದಕ

# ಶ್ರೀ ಶ್ರೀಕಾಂತ ಘಾಟಕ



ಅವರು ಬೈಲಹೊಂಗಲ (ಜಿ-ಬೆಳಗಾವಿ)ಯಲ್ಲಿ ೧೯೪೦ರಲ್ಲಿ ಹುಟ್ಟಿ ೧೯೬೫ರಿಂದ ಮುಂಬಯಿ ಮಹಾನಗರ ಪಾಲಿಕೆಯಲ್ಲಿ ಸೇವೆ ಆರಂಭಿಸಿ, ಉಪ-ಪ್ರಮುಖ ಲೇಖಾಪಾಲ (ಶಿಕ್ಷಣ)ರಾಗಿ ೧೯೯೪ರಿಂದ ಸ್ವೇಚ್ಛಾ ನಿವೃತ್ತರಾಗಿ, ಪೂರ್ಣಾವಧಿ ಸಾಹಿತಿ ಹಾಗೂ ಭಾವಗೀತೆ ಗಾಯಕರಾಗಿ-ಠಾಣೆ ಜಿಲ್ಹೆಯ (ಮಹಾರಾಷ್ಟ್ರ) ಕಲ್ಯಾಣದಲ್ಲಿ ವಾಸಿಸುತ್ತಿದ್ದಾರೆ.

ಮರಾಠಿಯಲ್ಲಿ (ಕುಂತಿಪುತ್ರ ಭೀಮನ ಮೇಲೆ ಅಪ್ರಮೇಯ, ವಾಯುಪುತ್ರ-ಮಾರುತಿಯ ಮೇಲೆ ಮಹಾರುದ್ರ, ಈ ಕಾದಂಬರಿ ಹಾಗೂ ಬಸವೇಶ್ವರ, ಅಖಂಡೇಶ್ವರ, ಅಕ್ಕಮಹಾದೇವಿ ಅವರ ವಚನಗಳ ಮರಾಠೀ ಅನುವಾದದ ಹಾಗೂ ಕನ್ನಡದಲ್ಲಿ ಜ್ಞಾನೇಶ್ವರ, ತುಕಾರಾಮ ಇತ್ಯಾದಿ ೨೭ ಸಂತರ ರಚನೆಗಳ ನಾಲ್ಕು ಹಾಗೂ ಸಮರ್ಥ ರಾಮದಾಸರ ದಾಸಬೋಧದ ಕನ್ನಡ ಅನುವಾದದ, ಹೀಗೆ ಹನ್ನೊಂದು ಗ್ರಂಥಗಳು ಪ್ರಕಟವಾಗಿವೆ.

೨೦೧೩ರಲ್ಲಿ ಅವರನ್ನು ಮುಂಬಯಿ ಕರ್ನಾಟಕ ಸಂಘದ ವತಿಯಿಂದ 'ವರದರಾಜ ಆದ್ಯ' ಪುರಸ್ಕಾರ ಕೊಟ್ಟು ಗೌರವಿಸಲಾಗಿದೆ.

iv

# ಅನುವಾದಕನ ಮನೋಗತ

ನಾನೇ ಆಯೋಜಿಸಿದ 'ನಮೋ ಗೀತ ಲೇಖನ' ಸ್ಪರ್ಧೆಯ ಪಾರಿತೋಷಕ ವಿತರಣೆಗಾಗಿ 'ಪ್ರಮುಖ ಅತಿಥಿಗಳೆಂದು ಬಂದ ಡಾ॥ ಅನಿಲ ಸಹಸ್ರಬುದ್ಧೇ ಅವರು ನನ್ನನ್ನು, ''ನಾನು ಅಗಸ್ತ್ಯ ಋಷಿಯ ಮೇಲೆ ಬರೆದ ಕಾದಂಬರಿ, ಮತ್ತು 'ಅಗಸ್ತ್ಯ ಮಹಾತ್ಮ್ಯ' ಈ ಹೊತ್ತಿಗೆಯ ಕನ್ನಡ ಅನುವಾದ, ಮಾಡುವಿರಾ ?'' ಎಂದು ಕೇಳಿದರು. ನಾನು, '' ಅಗಸ್ತ್ಯ ಮಹಾತ್ಮ್ಯ''ದ ಅನುವಾದ ಮಾಡುತ್ತೇನೆ ಎಂದು ಹೇಳಿದೆ.

ಈ ಕೆಲಸ ೨ ಡಿಸೆಂಬರ (ಗೀತಾ ಜಯಂತಿ) ೨೦೧೪ ರಿಂದ ಆರಂಭಿಸಿ ನಾನು ಮೂರು ತಿಂಗಳಲ್ಲಿ ಉಪಾಸನೆಯ ಶ್ರದ್ಧೆಯಿಂದ ಮುಗಿಸಿದೆ. ಈ ಗ್ರಂಥದ ಪೂಜನೆ, ಪಾರಾಯಣೆ ಮತ್ತು ಪ್ರಕಟಣನೆಯ ಸಮಾರಂಭ, ಡಾ। ಸಹಸ್ರಬುದ್ಧೇ ಅವರ ಭಕ್ತಿ, ಔದಾರ್ಯಗಳ ಮೂಲಕ, ೧೯ ಏಪ್ರಿಲ್ ೨೦೧೫ ಕ್ಕೆ ಅಕೋಲೆಯ 'ಅಗಸ್ತಿ ಆಶ್ರಮ'ದಲ್ಲಿ ಉತ್ಸವದಂಥ ಉತ್ಸಾಹದಲ್ಲಿ ಜರುಗಿತು.

ಸ್ವಂತ ಅಗಸ್ತ್ಯ ಋಷಿಗಳು ಶ್ರೀ ಸಹಸ್ರಬುದ್ಧೇ ಅವರಿಗೆ ಆದೇಶ ಕೊಟ್ಟು ಬರೆಸಿದ ಈ ಗ್ರಂಥವನ್ನು ನಾನು ಡಾ॥ ಸಹಸ್ರಬುದ್ಧೇ ಅವರ ಆಜ್ಞೆಯಂತೆ ಕನ್ನಡದಲ್ಲಿ ಅನುವಾದಿಸಿದ್ದೇನೆ.

ಈ ಗ್ರಂಥದ ಹಸ್ತ ಲಿಖಿತವನ್ನು ಓದಿ, ಅದರಲ್ಲಿಯ ಲೇಖನವನ್ನು ಶ್ರೀ ವಾಸುದೇವ ಗುರುರಾವ, ಸಾಂಗಿಲಿ (ಸಾ. ಡೊಂಬಿವಲಿ) ಅವರು ಶುದ್ಧಿಸಿ, ಸರಿಪಡಿಸಿ, 'ಇದೊಂದು ಅದ್ಭುತ ಕೃತಿ ಆಗಿದೆ!' ಎಂದು ಅಭಿಪ್ರಾಯ ಕೊಟ್ಟು, ನನ್ನನ್ನು ಹಾರೈಸಿದರು.

ಈ ಹೊತ್ತಿಗೆಯ ಅಕ್ಷರ ಹೊಂದಿಕೆ (ಡಿ.ಟಿ.ಪಿ.)ಮತ್ತು ಮುದ್ರಣೆಯನ್ನು ಅತ್ಯಂತ ಅಲ್ಪಾವಧಿಯಲ್ಲಿ ಆಕರ್ಷಕ ರೀತಿಯಲ್ಲಿ ಶ್ರೀ ಪಂಡಿತ ದೀಕ್ಷಿತ ಅವರು ಮಾಡಿದ್ದಾರೆ. ಮೇಲೆ ಬರೆದ ತ್ರಿಮೂರ್ತಿಗಳ ಹಾಗೂ, ಈ ಹೊತ್ತಿಗೆಯ 'ಪಾರಾಯಣ'ದಲ್ಲಿ ಭಾಗವಹಿಸಿದ 'ಕರ್ನಾಟಕ ಸಂಘ-ಅಹಮದನಗರ'ದ ಎಲ್ಲ ಸ್ತ್ರೀ-ಪರುಷ ಮಹಾನುಭಾವರಿಗೂ ನಾನು ಋಣಿಯಾಗಿದ್ದೇನೆ.

**ಶ್ರೀ ಶ್ರೀ. ರ. ಘಾಟಕ** (ದೂರಧ್ವನಿ : 0251-2207583)

॥ಓಂ॥

# ಶ್ರೀ ಅಗಸ್ತ್ಯ ಮಹಾತ್ಮ್ಯ

ಮೂಲ ಲೇಖಕ : ಪ್ರಾಚಾರ್ಯ ಡಾ॥ ಅನಿಲ ನಾಗೇಶ ಸಹಸ್ರಬುದ್ಧೇ ಕನ್ನಡ ಅನುವಾದ : ಶ್ರೀಕಾಂತ ರ. ಘಾಟಕ

ಮನೆಯಲ್ಲಿ ಪವಿತ್ರ ಭಾವನೆಯಿಂದ ಸಂಗ್ರಹಿಸಿ ಇಟ್ಟರೆ, ಎಲ್ಲ ಸಂಕಟಗಳ ನಾಶವಾಗಿ, ಸರ್ವ ಪ್ರಕಾರದ ಸುಖ-ಶಾಂತಿ, ಸಮೃದ್ಧಿ ಕೊಡುವಂಥ ಮೌಲಿಕ ಪ್ರಸಾದ-ಗ್ರಂಥ

ಮಹರ್ಷಿ ಅಗಸ್ತ್ಯರ ಸಾಕ್ಷಾತ್ಕಾರ ಆಯಿತು. ಗ್ರಂಥ ರೂಪದಲ್ಲಿ ಪ್ರಕಟಿಸುವ ಆಜ್ಞೆ ಆಯಿತು. ಬುದ್ಧಿ ಪ್ರಾಮಣ್ಯವಾದಿ ಮನದಲ್ಲಿ ಸಂಭ್ರಮ ಹುಟ್ಟಿತು. ಪರಮ ಪೂಜ್ಯ ಗೋವಿಂದಾಚಾರ್ಯ ಗಿರಿ-ಮಹಾರಾಜ (ಪೂರ್ವಾಶ್ರಮದ ಪ.ಪೂ. ಪಂಡಿತ ಶ್ರೀ ಕಿಶೋರಜೀ ವ್ಯಾಸ) ಅವರು ಆಶೀರ್ವಾದ ಕೊಟ್ಟು, ಮನದ ಸಂಭ್ರಮ ದೂರ ಮಾಡಿ, ಮಹರ್ಷಿ ಅಗಸ್ತ್ಯರ ಆಜ್ಞೆಯಂತೆ, ಗ್ರಂಥ ಲೇಖನ ಮಾಡುವ ಆದೇಶ ಕೊಟ್ಟರು, ಅದರಿಂದ ಆತ್ಮ ವಿಶ್ವಾಸ ಬೆಳೆಯಿತು ಮತ್ತು 'ಅಗಸ್ತ್ಯ ಮಹಾತ್ಮ್ಯ' ಹಾಗೂ 'ಸಿಂಧು ಸಮ್ರಾಟ್ ಮಾಂದಾರ್ಯ' ಈ ಗ್ರಂಥಗಳು ಸಿದ್ಧ ಆದವು.



ಶ್ರೀ 'ಅಗಸ್ತ್ಯ ಮಹಾತ್ಮ್ಯ' ಸಾಕ್ಷಾತ್ಕಾರದಿಂದ ಬರೆದ ಗ್ರಂಥ. ಇದು ಸಂಶೋಧನ ಅಥವಾ ಇತಿಹಾಸ ಗ್ರಂಥವಲ್ಲ. ವೇದ, ಉಪನಿಷತ್, ಪುರಾಣ, ರಾಮಾಯಣ, ಮಹಾಭಾರತ ಮತ್ತು ಅವುಗಳ ನಂತರ ಕಾಲ ಪ್ರವಾಹದಲ್ಲಿ ಹುಟ್ಟಿದ ಅನೇಕ ಗ್ರಂಥಗಳಲ್ಲಿ ಶ್ರೀ ಅಗಸ್ತ್ಯ -ಋಷಿಗಳ ಬಗ್ಗೆ, ವಿವಿಧ ಕಥೆ ಇವೆ. ಅವೆಲ್ಲ ಕಥೆಗಳು 'ಆ ಆ' ಸಂದರ್ಭಗಳಲ್ಲಿ ನಿಜವಾದವೇ', ಎಂದು ಮನ್ನಿಸಬೇಕಾಗುತ್ತದೆ. ಮತ್ತು ಈ ಸಂಬಂಧದಲ್ಲಿ 'ಆಗ್ರಹಿ' ಭೂಮಿಕೆಯೂ ಇರುತ್ತದೆ. ಇದಲ್ಲದೇ ಅಗಸ್ತ್ಯರ ವಿವಿಧ ಸ್ಥಾನಗಳಲ್ಲಿ ಸ್ಥಾನ ಮಹಾತ್ಮ್ಯದ ಸಂದರ್ಭಗಳಲ್ಲಿ ಭಕ್ತಿ-ಭಾವಗಳಿಂದೂ ಬೇರೆ ಬೇರೆ ಕಥೆ ಬಂದಿವೆ ! ಅವೆಲ್ಲವೂ ನಿಜವಾದವೇ ಎಂದು ಲೇಖಕನ ಶ್ರದ್ಧೆ. 'ಅಗಸ್ತ್ಯ ಮಹಾತ್ಮ್ಯ' ಈ ಗ್ರಂಥ (ಓವಿ ಬದ್ಧ ಹೊತ್ತಿಗೆ) ಮಾತ್ರ, ಶ್ರೀ ಅಗಸ್ತ್ಯ ಋಷಿಗಳ ಸಾಕ್ಷಾತ್ಕಾರದ ಅನುಸಾರ ಎಲ್ಲ ಕಥೆಗಳ ಸಂದರ್ಭತಕ್ಕೊಂಡು ಬರೆಯಲಾಗಿದೆ. ಇದನ್ನು ವಾಚಕರೆಲ್ಲರೂ ಶ್ರದ್ಧೆಯಿಂದೇ ಸ್ವೀಕರಿಸಬೇಕೆಂದು ಲೇಖಕನ ವಿನಂತಿ. !

# ‘ಶ್ರೀ ಅಗಸ್ತ್ಯ ಮಹಾತ್ಮ್ಯ’

(ಮೂಲ ಲೇಖಕ - ಪ್ರಾಚಾರ್ಯ ಡಾ। ಅನಿಲ ನಾಗೇಶ ಸಹಸ್ರಬುದ್ಧೇ ಅವರ ಮುನ್ನುಡಿಯ
ಶ್ರೀ. ರ ಘಾಟಕ ಕೃತ ಕನ್ನಡ ಅನುವಾದ)

ಶ್ರೀ ಅಗಸ್ತ್ಯ ಮಹಾತ್ಮ್ಯ ಈ ಗ್ರಂಥ, ಕೇವಳ ಚಿಂತಾಮಣಿ, ಓಂ ಶ್ರೀ ದೇವ, ಋಷಿ, ಮುನಿ, ಸಿದ್ಧ ಅಗಸ್ತ್ಯರು ಸಾಕ್ಷಾತ್ಕಾರ ಪೂರ್ವಕ ಆಜ್ಞೆ ಕೊಟ್ಟು, ಸರ್ವಲೋಕ ಹಿತಾರ್ಥ ಈ ಗ್ರಂಥ ಬರೆಯಲು ಹೇಳಿದರು. ಶ್ರೀ ಅಗಸ್ತ್ಯರ ಆಜ್ಞೆಯಂತೆ ಹಾಗೂ ಕೇವಳ ಅವರು ಹೇಳಿದಂತೇ ಈ ಗ್ರಂಥ ಬರೆದಿದ್ದೇನೆ. ಈ ಗ್ರಂಥವೆಂದರೆ ಪ್ರತ್ಯಕ್ಷ ಶ್ರೀಅಗಸ್ತ್ಯರ ವಾಙ್ಮಯ ಮೂರ್ತಿಯೇ ಹೌದು. ಈ ಗ್ರಂಥದ ವಾಚನದಿಂದ ಓದುವ ವ್ಯಕ್ತಿ, ಅಗಸ್ತ್ಯರ ಸಾನಿಧ್ಯದಲ್ಲಿ ಬರುತ್ತಾರೆ. ತಮ್ಮ ಸೇವೆ ಸಲ್ಲಿಸಿ, ಭಕ್ತಿ ಅರ್ಪಿಸಿ ತಮ್ಮ ಉದ್ದೇಶದ ನಿವೇದನ ಮಾಡಿ, ಕಲ್ಯಾಣದ ದಾರಿ ಪಡೆಯುತ್ತಾರೆ. ಸೃಷ್ಟಿ ಅಸಮತೋಲ ಆಯಿತು, ಪೃಥ್ವಿಯ ಪರ್ಯಾವರಣ ಪ್ರದೂಷಿತ ಆಯಿತು, ಋತುಚಕ್ರ ಅಸ್ಥಿರವಾಯಿತು, ಅನಾಚಾರ -ದಂಭಾಚಾರ, ಭ್ರಷ್ಟಾಚಾರ ಬೆಳೆಯಿತು. ಅಹಂಕಾರ -ದೈತ್ಯ ಕೊಬ್ಬಿದನು. ಅನಾರೋಗ್ಯ ಮತ್ತು ಕುಪೋಷಣೆ ಬೆಳೆಯಿತು. ಕೃಷಿ ಕರ್ಮ ಬಾಧಿಸಿತು. ಪಶು ಸೇವಾ-ರಕ್ಷಣೆ,

viii

ಪಶು ವ್ಯವಸ್ಥಾಪನೆ ಕೆಟ್ಟಿತು. ಇದೆಲ್ಲ ಅಗಸ್ತ್ಯರಿಗೆ ನೋಡದಂತಾಯಿತು. ಮೂಲತಃ ಯಾತಕ್ಕಾಗಿ ಅಗಸ್ತ್ಯರ ಜನ್ಮವಾಗಿತ್ತೋ ಅದೆಲ್ಲರದೇ ನಾಳವಾಗುತ್ತಿದ್ದುದನ್ನು ನೋಡದಾಗದೇ ಅಗಸ್ತ್ಯರು ಮತ್ತೆ ಪ್ರಕಟಿಸಿ, ಕಾರ್ಯಾನ್ವಿತ ಆಗಬೇಕೆಂದು ಮನದಲ್ಲಿ ನಿಶ್ಚಯ ಮಾಡಿ, ತಮ್ಮ ವ್ಯಕ್ತಿಮತ್ವದ ಮತ್ತು ಕಾರ್ಯದ ಜಾಗೃತಿ ಮಾಡುವದಕ್ಕಾಗಿ, ನನ್ನನ್ನು ‘ಸಾಧನೆ’ ಎಂದು ಉಪಯೋಗಿಸಲು ನಿಶ್ಚಯಿಸಿ, ನನಗೆ, ‘ ಗ್ರಂಥದ ಮೂಲಕ ನನ್ನನ್ನು ಪ್ರಕಟ ಮತ್ತು ಪ್ರವೃತ್ತ ಮಾಡು’ ಎಂದು ಆಜ್ಞೆ ಕೊಟ್ಟರು. ನನ್ನಂಥ ಅತಿಕ್ಷುದ್ರ ಮನುಷ್ಯನಿಗೆ ದೊರೆತ ಈ ಸಂಧಿ, ನನಗೆ ಪರಮ ಭಾಗ್ಯದ ಪ್ರಾಪ್ತಿಯೇ !.

ಶ್ರೀ ಅಗಸ್ತ್ಯ ಮುನಿಗಳು ಶಿವಸ್ವರೂಪರು (ಮೇಲೆ ಹೇಳಿದ ವಿಶಿಷ್ಟ ಕಾರ್ಯಗಳಿಗಾಗಿ ಅವರು ಜನ್ಮವೆತ್ತಿದ್ದಾರೆ). ಎಲ್ಲ ದೇವರ ತೇಜ ಅವರಲ್ಲಿ ಹೊಳೆದಿದೆ. ‘ಪರ್ಯಾವರಣ ವ್ಯವಸ್ಥಾಪನೆ, ಪರ್ಜನ್ಯ-ವ್ಯವಸ್ಥಾಪನೆ, ಜಲ-ವ್ಯವಸ್ಥಾಪನೆ, ಪಶು ವ್ಯವಸ್ಥಾಪನೆ, ಕೃಷಿ ವ್ಯವಸ್ಥಾಪನೆ, ಋತು ಚಕ್ರದ ಚಾಲನೆ ಇತ್ಯಾದಿ, ಉತ್ತಮ ರೀತಿಯಿಂದಾಗಬೇಕು, ವೈರ ಅಹಂಕಾರ, ಶತೃತ್ವಗಳ ನಾಶವಾಗಬೇಕು ಮತ್ತು ಸಮಸ್ತ ಭೂತ-ಮಾತ್ರರು ಸುಖದಿಂದ ಬಾಳಬೇಕು, ಈ ಉದ್ದೇಶದಿಂದ ಅವತರಿಸಿದ ದೇವರು ಅವರು ! ಮಾತ್ರ ಅಗಸ್ತ್ಯರು ಅನ್ಯದೇವರಿಗಿಂತ

ix

ಬೇರೆ ಇದ್ದಾರೆ. ಅವರು ಸಿದ್ಧರು. ಅವರ ಸಿದ್ಧಿಗಳ ಶಕ್ತಿ - ಪ್ರಯೋಗದಿಂದ ಎಲ್ಲ ಪ್ರಕಾರದ ವ್ಯವಸ್ಥಾಪನೆಗಳು ನೆಲೆಸಿದವು ಮತ್ತು ಅಪ-ಪ್ರವೃತ್ತಿಗಳ ಸಂಪೂರ್ಣ ನಾಶವಾಯಿತು. ಅದಕ್ಕೆ ಅವರ ಪ್ರೇರಣೆ ದೊರಕಿತು. ಮಾನವರಿಗೆ ಉತ್ತಮ ಆರೋಗ್ಯ ಲಭಿಸಬೇಕು, ಸ್ವ-ಸಂರಕ್ಷಣೆಗಾಗಿ ಯುದ್ಧ ಕೌಶಲ್ಯ ಪ್ರಾಪ್ತವಾಗಬೇಕು, ಆನಂದಕ್ಕಾಗಿ ಗಾಯನಾದಿ ಕಲೆ ಬೆಳೆಯಬೇಕು, ಮಾಯಾವರಣದಲ್ಲಿ ಬದುಕುವ ಮಾನವರಿಗೆ ಮಾಯಾವಿಗಳೊಂದಿಗೆ ಹೋರಾಡುವದಕ್ಕಾಗಿ ಅವರಷ್ಟೇ ಶಕ್ತಿ- ಅಥರ್ವಣದ ವಿದ್ಯೆ ಬರಬೇಕು. ಈ ಎಲ್ಲ ವಿಷಯಗಳ ಸಿದ್ಧತೆ ಅಗಸ್ತ್ಯರ ಬಳಿ ಇದೆ. ತಮ್ಮ ಉಪಯೋಗ ದೊಡ್ಡ ಪ್ರಮಾಣದಲ್ಲಿ ಮಾನವನಿಗೆ ಆಗುವದಕ್ಕಾಗಿಯೇ ಅಗಸ್ತ್ಯರ ಶಕ್ತಿ ಕ್ರಿಯಾಶೀಲ ಆಗಿದೆ. ಸೃಷ್ಟಿ-ವ್ಯಾಪಾರದಲ್ಲಿ ಮತ್ತು ಭೂತ-ಮಾತ್ರರಲ್ಲಿದ್ದ ವಿಷ ಹೋಗಿ, ಎಲ್ಲರಿಗೆ ಅಮೃತ ಲಭಿಸಲಿ, ಎಂದೇ ಪರಮಾತ್ಮನು ಅಗಸ್ತ್ಯರನ್ನು ಕಳಿಸಿದ್ದು! ಬ್ರಹ್ಮಾಂಡದ ಮೇಲಿನಂತೇ ಆಕಾಶದಲ್ಲಿಯೂ ಸಂಚರಿಸುವ ವಿದ್ಯೆ, ಪಂಚ ತತ್ವಗಳನ್ನು ನಿಯಂತ್ರಿಸುವ ಮತ್ತು ಅತಿ ವಿಕೃತ ಪ್ರವೃತ್ತಿಯ ದಾನವರನ್ನು ದಂಡಿಸಿ, ಅವರನ್ನು ಸತ್-ಪ್ರವೃತ್ತ ಮಾಡಿಸುವ ತ್ರಿದೇವ ಶಕ್ತಿ ಅವರಲ್ಲಿದೆ. ಶಕ್ತಿ ಸ್ವರೂಪಿಣಿ ಮಾತೆಯರ ಸಾಮರ್ಥ್ಯ ಆಮಂತ್ರಿಸಿ ಸರ್ವ ಸಿದ್ಧರ ಸಿದ್ಧಿಗಳನ್ನು ಕರೆಯುವ ಶಕ್ತಿಯೂ ಅವರಲ್ಲಿದೆ. ಮುಮುಕ್ಷುವಿಗೆ ಮೋಕ್ಷ, ಸಾಧಕರಿಗೆ ಸಿದ್ಧಿ, ಪ್ರಾಪಂಚಿಕನಿಗೆ ಸಂಸಾರ ಸುಖ ಕೊಡುವ ಶಕ್ತಿ, ಈಶ್ವರನು



ಅಗಸ್ತ್ಯರಲ್ಲಿಟ್ಟು ಶ್ರೀ ಸಿದ್ಧಿ ವಿನಾಯಕ, ಮತ್ತು ಕಾರ್ತಿಕೇಯರ ಸ್ಥಾನವನ್ನು ಅಗಸ್ತ್ಯರಿಗೆ ಕೊಟ್ಟಿದ್ದಾನೆ! ಅಂತೇ ದೇವ, ಋಷಿ, ಮುನಿ ಮತ್ತು ಸಿದ್ಧ ಈ ವ್ಯಕ್ತಿಮತ್ವ ಧರಿಸಿದ ಸ್ವಯಂಪ್ರಕಾಶಿ, ಅವಿನಾಶಿ ಶಕ್ತಿ ಇದೆ! ಇವರು ತಾರಕಾ, ತ್ರಿದೇವ ಮತ್ತು ಪಂಚ-ತತ್ವ-ರೂಪ ಇದ್ದಾರೆ. ಹಾಗೆಯೇ ಅವರು ದೇವ-ತಥಾ-ಮಾನವ ರೂಪರೂ ಇದ್ದಾರೆ. ಶಾಪ ಕೊಡುವ, ಮತ್ತು ಶಾಪಮುಕ್ತ ಮಾಡುವ ಸಾಮರ್ಥ್ಯವೂ ಅವರಲ್ಲಿದೆ. ಕಲಿಯುಗದ ಈ ಪರ್ವವನ್ನು ಸರ್ವಪ್ರಕಾರದಿಂದ ರಕ್ಷಿಸುವಂಥ ಪರಮ ದೈವತವೇ ಅಗಸ್ತ್ಯರು! ದೇವ, ಋಷಿ ಮತ್ತು ಸಿದ್ಧರನ್ನು ಆಮಂತ್ರಿಸಿದ ಹೊರತು ಅವರು ಮಾನವ ಸೃಷ್ಟಿಯಲ್ಲಿ ಕಾರ್ಯಾನ್ವಿತರಾಗರು. ಅಂತೇ ಅಗಸ್ತ್ಯರು ನನ್ನಂಥ ಓರ್ವ ಅಜ್ಞಾನಿ ಭಕ್ತನನ್ನು ಪ್ರೇರಿಸಿದರು. ಪರ್ಯಾವರಣ, ಆರೋಗ್ಯ ಮತ್ತು ಐಶ್ವರ್ಯ ಪ್ರಾಪ್ತಿಗಳಿಗಾಗಿ ಅಗಸ್ತ್ಯರಿಗೆ ಶರಣು ಹೋಗುವದೊಂದೇ ನಮ್ಮ ಕೈಯಲ್ಲಿದೆ.

'ಅಗಸ್ತ್ಯ ಮಹಾತ್ಮ್ಯ' ಓದುವ ಮೊದಲು - ಶ್ರೀ ಅಗಸ್ತ್ಯರ ಪೂಜೆ ಮಾಡಬೇಕು. ಅದರ ವಿಧಿ (ರೀತಿ) ಹೀಗೆ :- ಗ್ರಂಥ ವಾಚನಕ್ಕೆ ವೇಳೆ ಅಥವಾ ಕಾಲ ಇತ್ಯಾದಿ ಯಾವ ಬಂಧನೆ ಇಲ್ಲ. ಅಗದಿ ಅಶುಭ ಕಾಲವೂ ಈ ಕಾರ್ಯಕ್ಕೆ 'ಶುಭ'ವೆಂದೇ ತಿಳಿಯಿರಿ. ಶ್ರೀ ಅಗಸ್ತ್ಯರು ಬ್ರಹ್ಮಾಂಡದ ಎಲ್ಲ ಪ್ರಕಾರದ ವ್ಯವಸ್ಥಾಪನೆಗಳು ಚನ್ನಾಗಿ ಸಾಗುತ್ತಿದ್ದ

ಸುಮಾರು ಲಕ್ಷ-ಎರಡು ಲಕ್ಷ ವರ್ಷಗಳ ಮೊದಲಿನ ಅಸ್ತಿತ್ವ ಇದ್ದ ಕಾರಣ, ಆ ವೇಳೆ ಇಂದಿನ ತಥಾ-ಕಥಿತ ಧರ್ಮ, ಪಂಥ, ಜಾತಿಗಳಾವವೂ ಇದ್ದಿಲ್ಲ. ಅದಕ್ಕಾಗಿ ಸ್ತ್ರಿ, ಪುರುಷ, ಆಬಾಲವೃದ್ಧ ಹೀಗೆ ಯಾರೂ ಈ ಗ್ರಂಥದ ಪೂಜನೆಯ ನಂತರ, ಯಾವಾಗಲೂ ವಾಚನ ಮಾಡಿ, ತಮ್ಮ ಸಂಕಲ್ಪದ ಪೂರ್ತತೆಯನ್ನು ಶ್ರೀ ಅಗಸ್ತ್ಯ ಭಗವಾನರ ಕೃಪೆಯ ಮೂಲಕ ಮಾಡಿಸಿಕೊಳ್ಳಬಹುದು. ಈ ಹೊತ್ತಿಗೆಯ ವಾಚನ ಶಕ್ಯ ಇದ್ದಲ್ಲಿ ಪ್ರಕಟವಾಗಿ ಉಚ್ಚ ಸ್ವರದಲ್ಲಿ ಮಾಡಬೇಕು. ಮೂಕವಾಚನ ಮಾಡಿದರೂ ಅದು ಫಲದಾಯಿ ಆಗುತ್ತದೆ.

ಶ್ರೀ ಅಗಸ್ತ್ಯ ಪೂಜನೆಗಾಗಿ ಮಂಡನೆ ಹೀಗೆ ಮಾಡಬೇಕು: ಹೊಲದಿಂದ ಒಂದು ಬುಟ್ಟಿ ಸ್ವಚ್ಛ ಮಣ್ಣು ತಂದು, ಅದರಲ್ಲಿ ಒಂದು ಅಥವಾ ಅನೇಕ ಪ್ರಕಾರಗಳ ಸ್ವಲ್ಪ-ಸ್ವಲ್ಪ ಧಾನ್ಯ ಬೆರೆಸಬೇಕು. ಈ ಮಿಶ್ರಣದ ಕಟ್ಟೆ ಮಾಡಬೇಕು. ಅದು ವೇದಿಕೆಯಂತೆ ವಿಸ್ತೀರ್ಣ ಮತ್ತು ವರ್ತುಳಾಕಾರ ಬೇಕು. ಅದರ ಮೇಲೆ ಮಣ್ಣಿನ, ತಾಮ್ರದ, ಅಥವಾ ಯಾವದೇ ಧಾತುವಿನ ಕಲಶ (ಕೊಡ)ದಲ್ಲಿ ಸ್ವಚ್ಛ ನೀರು ತುಂಬಿ ಇಡಬೇಕು. ಈ ಕಲಶವನ್ನು ಚಂದನ ಗಂಧ ಹಚ್ಚಿ ಸುಶೋಭಿತ ಮಾಡಬೇಕು. ಕಲಶದಲ್ಲಿ ಮಾವಿನ, ತಿನ್ನುವ ಎಲೆ ಅಥವಾ ಸಹಜ ಉಪಲಬ್ಧ ಯಾವದೇ ಎಲೆ ಸ್ವಚ್ಛ ತೊಳೆದು ಹಚ್ಚಬೇಕು. ಕಲಶದಲ್ಲಿ ಅಡಿಕೆ ಅಥವಾ ಯಾವದೇ ಹಣ್ಣು ಇಡಬೇಕು. ಆ ಎಲೆಗಳ ಮೇಲೆ ಒಂದು ಅಗಲವಾದ ತಾಟು (ತಟ್ಟೆ) ಅಥವಾ ಪತ್ರಾವಳಿ, ವಾ ಬಾಳೆ ಎಲೆ ಇಡಬೇಕು. ತಟ್ಟೆಯ ಮೇಲೆ ಧಾನ್ಯದ



ಆಸನ ಮಾಡಬೇಕು. ಆ ಆಸನದ ಮೇಲೆ ಅಗಸ್ತ್ಯರ ಮೂರ್ತಿ (ಅರ್ಥಾತ್ ಶಿವಲಿಂಗ) ನಟ್ಟು ನಡುವೆ ಸ್ಥಾಪಿಸಬೇಕು. ಶಿವಲಿಂಗವು ಮಣ್ಣಿನ ವಾ ಮಳಲಿನದು ಇರಬೇಕು. ತಟ್ಟೆಯ ಮೇಲೆ - ಲೋಪಾಮುದ್ರಾ, ನವಗ್ರಹ ೧೦, ಸಪ್ತರ್ಷಿ೭, ದಿಕ್‌ಪಾಲ ೧೦, ಕಾಲಭೈರವ ಸಿದ್ದೇಶ್ವರ ೨, ಇಂದ್ರ, ಮರುತ, ಪಾರ್ವತಿ, ಕಾರ್ತಿಕೇಯ, ನಾರದ, ಅಗ್ನಿ, ಸೂರ್ಯ-ಚಂದ್ರ, ಮಿತ್ರ, ವರುಣ, ೧೦ ವಿಷ್ಣು, ಲಕ್ಷ್ಮೀ ಸರಸ್ವತಿ, ಬ್ರಹ್ಮ, ವೃಷಭ, ಊರ್ವಶಿ, ಸೋಮ, ಕುಲದೈವತ ಮತ್ತು ಗುರು ಹೀಗೆ ಒಟ್ಟು ೪೯ ಅಡಿಕೆ - ಅಥವಾ ಹರಳು ಮಂಡಿಸಬೇಕು. ಈ ವೇದಿಕೆಯ ಮುಂದೆ-ಎಡಕ್ಕೆ ಮತ್ತು ಬಲಕ್ಕೆ ಹೀಗೆ ಎರಡು ಸಣ್ಣ ಆಸನ ಹಾಸಬೇಕು. ಅದರಲ್ಲಿಯ ಬಲದ ಆಸನದ ಮೇಲೆ ಅಡಿಕೆ ಅಥವಾ ದೊಡ್ಡ ಹರಳು, ಗಣೇಶ ಅರ್ಥಾತ್ 'ಸಿದ್ಧಿ ವಿನಾಯಕ' ನೆಂದು ಸ್ಥಾಪಿಸಬೇಕು. ಕಲಶದ ಎಡ ಭಾಗದಲ್ಲಿಯ ಆಸನದ ಮೇಲೆ ಮಣ್ಣಿನ ವಾ ಧಾತುವಿನ ಪಾತ್ರೆಯಲ್ಲಿ ಕೆಂಡ, ಕಪ್ಪರ ಮತ್ತು ಸಮಿಧಾ ಹಾಕಿ, ಅಗ್ನಿಯ ಸ್ಥಾಪನೆ ಮಾಡಬೇಕು. ಆಸನದ ಮೇಲೆ ಆವಾಹನಕ್ಕಾಗಿ ಎಲೆ (ಪಾನಪಟ್ಟಿ) ಮಂಡಿಸಬೇಕು. ಎಲೆ ಒಂದು, ಮೂರು, ಐದು ಹೀಗೆ ಇರಬೇಕು. ಸೋಮರಸ ಅಥವಾ ಹಾಲು ನೈವೇದ್ಯಕ್ಕಾಗಿ ಇಡಬೇಕು. ಸಹಜ ದೊರೆಯುವ ಹಣ್ಣು ಇಡಬೇಕು. ನಂತರ ಅರಿಷಿಣ, ಕುಂಕುಮ, ಗುಲಾಲ, ಪತ್ರಿ, ಪುಷ್ಪ ಇತ್ಯಾದಿ ಪೂಜಾ ಸಾಹಿತ್ಯಗಳಿಂದ ಭಕ್ತಿ-ಭಾವದಿಂದ ಆವಾಹನ

ಪೂರ್ವಕ ಪೂಜೆ ಮಾಡಬೇಕು. ಸ್ನಾನದ ಬದಲು, ದೇವರಿಗೆ ಕೇವಲ ಹೂವಿನಿಂದ ನೀರು ಸಿಂಪಡಿಸಿ ಪ್ರೋಕ್ಷಣೆ ಮಾಡಬೇಕು. ಹಾಗೇ, ಪಂಚಗವ್ಯ, ಪಂಚಾಮೃತಗಳದೂ ಪ್ರೋಕ್ಷಣೆ ಮಾಡಿ, ನೈವೇದ್ಯ ತೋರಿಸಬೇಕು. ಈ ಪೂಜನೆಯ ನಂತರ, ಅಗ್ನಿ ಪ್ರದೀಪ್ತಮಾಡಿ, ಅದರ (ಅಗ್ನಿಯ) ಪೂಜೆ ಮಾಡಬೇಕು. ಅನಂತರ ಗ್ರಂಥದ ಪೂಜೆ ಮಾಡಬೇಕು. ಈ ಪೂಜೆ ಆರಂಭಿಸುವ ಮೊದಲು ಸ್ಪಷ್ಟ -ಸಂಕಲ್ಪ ಬಿಡಬೇಕು. ಅಂದರೇನೆ ಅದರಂತೆ ಫಲ ದೊರೆಯುವದು.

ವಿಶ್ವಕಲ್ಯಾಣ, ಸಮೃದ್ಧಿ, ಪುತ್ರ ಪ್ರಾಪ್ತಿ, ರೋಗ ನಿವಾರಣೆ, ವಿಷ ನಿವಾರಣೆ, ಹೊರಗಿನ ಭೂತ, ಪಿಶಾಚ್ಚ್ಯ ಹತ್ತುವಿಕೆ, ಭಾವಿಗೆ ನೀರು ಹತ್ತುವಿಕೆ, ಮಳೆ ಬೀಳಲು, ಪಶು ಧನ ಸಂರಕ್ಷಣೆ, ಹೊಲ ಬಿತ್ತಲು ಯೋಗ್ಯ-ಮಾಡುವ ಕರ್ಮ, ವಿವಾಹ ಹೊಂದಿಕೆ, ಶತ್ರುನಾಶ, ಅಶುಭ ನಾಶ, ಇತ್ಯಾದಿಗಳಿಗಾಗಿ ಸಂಕಲ್ಪ ಮಾಡಿದರೆ ಫಲ ನಿಶ್ಚಿತ ಲಭಿಸುವದು.

ಹೊತ್ತಿಗೆಯ (ಗ್ರಂಥದ) ವಾಚನ ಒಂದೇ ವೇಳೆ ಮಾಡುವದು ಉತ್ತಮ. ಇಲ್ಲದಿರೆ ಒಂದೇ ದಿವಸದಲ್ಲಿ ಮೂರು ಸತ್ರಗಳಲ್ಲಿ ಅಥವಾ ಮೂರು ದಿವಸಗಳಲ್ಲಿ ಮಾಡಿದರೂ ನಡೆಯುತ್ತದೆ.

xiv

ಗ್ರಂಥ ಪಾರಾಯಣ (ವಾಚನ)ದ ನಂತರ ಯಥಾಯೋಗ್ಯ, ಮಹಾ ನೈವೇದ್ಯ ಇರಬೇಕು. ಅನ್ನದಾನ ಮಾಡುವದೂ ಉತ್ತಮ, ತಮ್ಮ ಸೌಕರ್ಯದ ಅನುಸಾರ ಉತ್ಸವ, ಸುಶೋಭನೆ, ಮಹಾಪ್ರಸಾದದ ಆಯೋಜನೆಯನ್ನೂ ಮಾಡಬಹುದು. ಇವೆಲ್ಲ ಕೃತಿ ಮಾಡುವಾಗ, ಸ್ವ-ಶುಚಿರ್ಭೂತತೆ ಮತ್ತು ಪಾವಿತ್ರ್ಯ ಪಾಲಿಸುವದು ಆವಶ್ಯಕ !

ಶ್ರೀ ಗಣೇಶ, ದೇವಿ, ಶಿವ, ವಿಷ್ಣು, ವಿಠ್ಠಲ ಅಥವಾ ದತ್ತ ಈ ದೇವರ ಆರತಿಗಳೊಂದಿಗೆಯೇ, **ಅಗಸ್ತ್ಯರ ಆರತಿಯನ್ನೂ ಮಾಡಬೇಕು. ಈ ಆರತಿಯನ್ನು ಗ್ರಂಥದ ಕೊನೆಗೆ ಕೊಡಲಾಗಿದೆ.** ಪೂಜೆ, ಮಂತ್ರಪುಷ್ಪಾಂಜಲಿ ಇತ್ಯಾದಿ ವಿಧಿ ನಿತ್ಯ ನೇಮದಂತೇ ಮಾಡಬೇಕು. ಪೂಜೆಗಾಗಿ ಪುರೋಹಿತರನ್ನೂ ಕರೆಯಬಹುದು. ಮಾತ್ರ ಸ್ವಂತ ಮಾನಸಪೂಜೆಮಾಡಿ, ಸಂಕಲ್ಪ ವ್ಯಕ್ತಮಾಡಿ ವಾಚನ ಮಾಡುವದು ಅತಿ ಉತ್ತಮ.

ಶ್ರದ್ಧೆಯಿಂದ ಪಠನ (ಬಾಯಿಪಾಠ) ಮಾಡಿದೊಡೆ ಶ್ರೀಅಗಸ್ತ್ಯರು ನಿಮ್ಮ ಯತ್ನ-ಇಚ್ಛೆ, ಸಿದ್ಧಿಗೆ ಒಯ್ಯುತ್ತಾರೆ.

ಶುಭಂ ಭವತು ! ಅಗಸ್ತ್ಯೆನಮಃ

xv

## ‘ಓವಿ’ ಈ ಛಂದ (ವೃತ್ತ)ದ ಬಗ್ಗೆ:

‘ಅಗಸ್ತ್ಯ ಮಹಾತ್ಮ್ಯ’ ಈ ಮೂಲ ಮರಾಠಿ ಗ್ರಂಥವು ‘ಓವಿ’ ಈ ಛಂದದಲ್ಲಿ ಬರೆಯಲಾಗಿದೆ. ಅಂತೇ ಈ ಗ್ರಂಥದ ಅನುವಾದವನ್ನೂ ‘ಓವಿ’ ಛಂದದಲ್ಲಿಯೇ ಮಾಡಲಾಗಿದೆ. ಇದು ಮಾತ್ರಾವತ್ತವಲ್ಲ.

ಕನ್ನಡ ತ್ರಿಪದಿಗೆ (ಉದಾ: ಸರ್ವಜ್ಞನ ವಚನ) ಓವಿಯ ರಚನೆ ಹೋಲುತ್ತದೆ. ಮೂರು, ನಾಲ್ಕು, ನಾಲ್ಕೂವರೆ, ಐದು, ಚರಣಗಳ ಹೀಗೆ ಓವಿಯ ಪ್ರಕಾರಗಳಿವೆ.

ಇಲ್ಲಿ ಉಪಯೋಗಿಸಿದ ‘ಓವಿ’ಯ ಪ್ರಕಾರದಲ್ಲಿ ಮೊದಲಿನ ಮೂರು ಚರಣಗಳ ಕೊನೆಗೆ ಪ್ರಾಸವಿರುತ್ತದೆ. ನಾಲ್ಕನೇ ಚರಣವು ಪ್ರಾಸ ವಿರಹಿತ ಇರುತ್ತದೆ.

ಉದಾ : ಓಂ ನಮಿಸಿದೆ **ಪ್ರಥಮ** ।
ನಿರ್ಗುಣ ನಿರಾಕಾರ **ಬ್ರಹ್ಮ** ।
ಶಬ್ದಬ್ರಹ್ಮದಿ ಸಾಕಾರಿಸಿ **ನಮ್ಮ** ।
ವೇದಗಳದೂ ವೇದ ಆದವ ॥

ಈ ಗ್ರಂಥದಲ್ಲಿಯೂ ಓವಿ ಛಂದದ ಎಲ್ಲ ನಿಯಮಗಳ ಪಾಲನೆ ಮಾಡಲಾಗಿದೆ.

ಅನುವಾದಕ

॥ಓಂ॥

# ಶ್ರೀ ಅಗಸ್ತ್ಯ ಮಹಾತ್ಮ್ಯ

## ಒಂದನೇ ಅಧ್ಯಾಯ

॥ ಓಂ ಶ್ರೀ ಗಣೇಶಾಯ ನಮಃ ॥ ॥ ಓಂ ಶ್ರೀ ಸರಸ್ವತ್ಯೈ ನಮಃ ॥ ॥ ಓಂ ಶ್ರೀ ಅಗಸ್ತ್ಯೈ ನಮಃ ॥

ಓಂ ನಮಿಸಿದೆ ಪ್ರಥಮ । ನಿರ್ಗುಣ ನಿರಾಕಾರ ಪರಬ್ರಹ್ಮ । ಶಬ್ದ-ಬ್ರಹ್ಮ ದಿ ಸಾಕಾರಿಸಿ ನಮ್ಮ । ವೇದಗಳದೂ ವೇದ ಆದವ ।೧॥ ವಂದಿಸುವೆ ಶ್ರೀ ಗಣೇಶ ಸಿದ್ಧ ವಿನಾಯಕ । ಬ್ರಹ್ಮ ವಿವರಿಸುವ ಸಮ್ಯಕ್ । ತೋರಿಸಿ ವಿಶ್ವದ ಮುಖ । ನನ್ನಿಂದ ಕಥೆ ಬರಿಯಿಸುವ ।೨॥ ಶ್ರೀ ವಿದ್ಯಾ ಸರಸ್ವತಿ ಶಾರದಾ । ನಮಿಸುವಗೆ ಕೊಡುವಳು ಆಶೀರ್ವಾದ। ಬೆಳೆಸುವಳು ಸಕಲ ಕಲಾ, ವಿನೋದದಿಂದ । ಚಿತ್ತ ಶಾಂತಿಸಿ ।೩॥ ಬ್ರಹ್ಮ ವಿಷ್ಣು ಮಹೇಶ । ನೇಮದಿಂದ ನಮಿಸಿದೆ ಮೂರೂ ಈಶ । ತ್ರಿಗುಣಗಳ ಇತಿಹಾಸ । ವಾಸ-ಕಾಲ ಕೈವಲ್ಯ ಮುಗಿಲಲ್ಲಿ ।೪॥ ಶ್ರೀ ಗುರುಗಳನ್ನು ನಮಿಸಿ ಕರೆದೆನು । ಕುಲದೇವತೆ, ದೇವ, ದೈತ್ಯರನ್ನೂ -। ಹಾಗೇ ಎಲ್ಲ ಮಾನವರನ್ನೂ । ಚರಾಚರದ ಕೂಡ ।೫॥ ವಂದಿಸಿ ಸರ್ವಜ್ಞ ಶ್ರೋತೃಗಳನ್ನು । ಲಕ್ಷ್ಯ ಕೊಟ್ಟು ಕಥೆ ಕೇಳಲು, ವಿನಂತಿಸುವೆನು । ದೂರ ಇಟ್ಟು ಅಹಂಭಾವವನ್ನು । ಸಾಧಿಸಲು ತಮ್ಮ ಕ್ಷೇಮ ।೬॥ ದೇವ, ಮುನಿ, ಬ್ರಹ್ಮರ್ಷಿ ಸಿದ್ಧರನ್ನು । ಸಮ್ಯಕ್ ಬುದ್ಧಿಯ ಅಗಸ್ತ್ಯರನ್ನು । ಲೋಕ ಕಲ್ಯಾಣ ಕಾರಕ ।೭॥ ಹಾಡುವನು ರಾಮ-ಕೃಷ್ಣ ಶಿವನೂ । ಗಣೇಶ, ಕಾರ್ತಿಕ, ನಾರದರಕೂಡ ಮರುತನೂ। 'ಅಮೃತ



ವಾಹಿನಿ'ದಂಡೆಯ ಮೇಲೆ ಕುಳಿತು ।೮॥ ಕೇಳಿ, ಓದಿ ಕಥಾ, ತೀರುವವು ಎಲ್ಲ ಸಂಶಯ ವ್ಯಥಾ । ಅಸಾಧ್ಯವೂ ಸಾಧಿಸುವದು ತಥಾ । ಅಗಸ್ತ್ಯರಿಂದ ಸ-ಹಾಸ್ಯ ।೯॥ ಈ ಪವಿತ್ರ ಕಥೆಯ ಮೇಲೆ ಅವಲಂಬಿಸಿ। ಅಗಸ್ತ್ಯರ ಮೇಲೆ ಭಾರ ಹಾಕಿಸಿ, । ಆಗುವಿರಿ ಪ್ರಪಂಚದಿ-ಕರ್ತವ್ಯ ಪಾಲಿಸಿ-।-ವಿಜಯಿ, ಐಶ್ವರ್ಯ ಭೋಗಿಸಿ ।೧೦॥ ಕೊಡುವೆ ಸ-ಪ್ರತಿಜ್ಞೆ ಖಾತರಿ । ಅಗಸ್ತ್ಯರಿಗೆ ಶರಣ ಹೋಗಿರಿ । ಯಶ, ಧನ, ಆಯು ಆರೋಗ್ಯ ಪಡೆಯಿರಿ । ಪ್ರಪಂಚ, ಪರಮಾರ್ಥ ಸುಖ ಲಭಿಸಿ ।೧೧॥ ಅಗಸ್ತ್ಯ ಕಥೆ ಇಹುದು ಅತಿ ಗೂಢ। ಸಾಧಿಸಲು ವಿಶ್ವೋತ್ಪತ್ತಿಯ ಕೂಡ-।- ಸಮತೋಲ ಸೃಷ್ಟಿ ಜೀವನದ । ಇಹರು ಅಗಸ್ತ್ಯ ಯುಗ-ಯುಗಾದಿ ।೧೨॥ ಕಂಡೆ ಸಪ್ತರ್ಷಿ ಮತ್ತು ಋಷಿಗಣ-।-ಗಳ ಸಹ ಅಗಸ್ತ್ಯರ ಮೀಲನ । ಅಮೃತವಾಹಿನಿ ತೀರದ ಮೇಲಿನ। ಅಗಸ್ತ್ಯ ಆಶ್ರಮದಲ್ಲಿ ।೧೩॥ ತಲೆಯ ಮೇಲೆ ಸೂರ್ಯನಿದ್ದಾಗ। ಪ್ರವರಾಜಲ ಕ್ರೀಡೆಯಲ್ಲಿ ತಲ್ಲೀನ ಆದಾಗ । ' ಓಂ ಅಗಸ್ತ್ಯಯೆ ನಮಃ।' ಎಂದು ಜಗಿದು ಈಸುವಾಗ । ಮೀನಿನಂತೆ ೧೪॥ ಮುಳುಗಿ ಮೇಲೆ ಬರುವಾಗ ನಾನು । ಕಂಡೆ ಸಾಕ್ಷಾತ್ -ದೇವ ಋಷಿ ಅಗಸ್ತ್ಯರನ್ನು । 'ಚರಿತ್ರ ಕಥೆ ಬರೆದು ಸಾಧಿಸು ಲೋಕ ಹಿತ'ವನ್ನು । ಎಂದು ಆಜ್ಞೆ ಕೊಟ್ಟ ।೧೫॥ ಆ ದಿವ್ಯ ಆಜ್ಞೆ 'ಶಿರೋಧಾರ್ಯ' ಮನ್ನಿಸಿ । 'ಬರೆಯುತ್ತೇನೆ ಕತೆ ಪ್ರಯತ್ನಿಸಿ' । ಬರೆವ-ಬರೆಸುವ ಋಷಿ । ಇಹರು ಸಿದ್ಧ ಅಗಸ್ತ್ಯರೇ ।೧೬॥ ''ಯುಗ ಅನೇಕ ಕಳೆದರೂ, ಅವನ-।-ಕಥೆ ಈಗ ಬರೆಯುವದೇನು ಪ್ರಯೋಜನ ? ।' ''ಮಾಡಲು ಸೃಷ್ಟಿ, ಮಾನವರ ಸಂತುಲನ।ಯೋಗಿ ಜಾಗೃತ ಇರುತ್ತಾನೆ।'' ।೧೭॥ ಅನಾಚಾರ, ದಂಭ, ಭ್ರಷ್ಟಾಚಾರ। ಷಡ್-ರಿಪುಗಳ ಅತಿ ಸಂಚಾರ । ಬೆಳೆದು, ದಾನವವೃತ್ತಿಯ

ಪ್ರಸಾರ । ಸೃಷ್ಟಿ ಅಶಾಂತ ಆಗಿದೆ ।।೧೮।। ದಾನವವೃತ್ತಿ ದಂಡಿಸಲು । ಸತ್-ಪ್ರವೃತ್ತಿ ಸ್ಥಾಪಿಸಲು । ಸತ್ವಗುಣ ಎಚ್ಚರಿಸಲು । ಇಹನು ಸಿದ್ಧ ಅಗಸ್ತ್ಯನು ।।೧೯।। ಎಚ್ಚರಿಸಿ ಜನ ಸಾಗರವನ್ನು । ಅಗಿದು ಅವಿದ್ಯೆರೂಪ ಪರ್ವತವನ್ನು । ತೋರಿ ಜ್ಞಾನರವಿಯನ್ನು । ಪ್ರಕಟಿಸುವನು।।೨೦।। ಅಗಸ್ತ್ಯ ಜನ್ಮ ಕತೆ ಇಹುದು ಅದ್ಭುತ। ಹೇಳುತಿಹನು ಪಂಚತತ್ವ ತಾತ । ಕೇಳಿರಿ ಆಗಿ ಸಾವಧಾನ ಭರಿತ । ಸಮೃದ್ಧ ಸಂಸಾರಿಗಳೇ।।೨೧।। ಗೋದಾ ಗಂಗಾ ಕ್ಷೇತ್ರ ತ್ರ್ಯಂಬಕ । ದಕ್ಷಿಣ ಕಾಶಿ ಎನಿಸಿದ – ನಾಶಿಕ । ಆ ಪರಿಸರದ ಪಕ್ಕ ಪ್ರದೇಶಕ್ಕೆ । ಅಗಸ್ತ್ಯಪುರ ಅನ್ನುವರು ।।ಸಹ್ಯ ಪರ್ವತದ ಬದಿಯಲ್ಲಿದ್ದ । ಸಮುದ್ರ-ಮಂಥನ-ರತ್ನ ಪೂಜನ ಸ್ಥಾನದ। ರತ್ನ ಗಡದಿಂದ ಹರಿವ, ಅಮೃತ ಸ್ವಾದದ। ಪ್ರವರಾನದಿ ಹರಿಯುತಿದೆ ।।೨೩।। ಪ್ರವರಾ ತೀರದಿ 'ಅಕೋಲೆ' ಅಗಸ್ತ್ಯ ಗ್ರಾಮ। ಆಚೆ ದಂಡೆಗೆ ಸಿದ್ಧ ಅಗಸ್ತ್ಯ-ಋಷಿ ಮಹಾತ್ಮ । ಆಶ್ರಮದಲ್ಲಿ ಚೈತನ್ಯಮಯ ಸೂಕ್ಷ್ಮ । ಅಗಸ್ತ್ಯದೇವ ಸದಾ ಸಂಚರಿಸುವನು ।।೨೪।। ಸಮಾಧಿಸ್ಥ ಅಮರ ಋಷಿವರ । ಕಲ್ಯಾಣಕ್ಕಾಗಿ ತನ್ನ ಭಕ್ತರ । ಸಮಾಧಿಯಿಂದ ಬಂದು ಸತ್ವರ । ಸಾಕುವನು ।।೨೫।। ಇಹವು ಅಗಸ್ತ್ಯಸ್ಥಾನ ವಿವಿಧ । ಭಾರತದಿ, ವಿಶ್ವದಿ, ಅಂತರೀಕ್ಷದ-।- ಮುಗಿಲಲ್ಲಿ ಮತ್ತು ಕಣ್ಣಿಗೆ ಕಾಣಿಸದ । ಮಾತ್ರ ಅಕೋಲೆ ಆಕ್ರಮ ಎಲ್ಲರಲ್ಲೂ ಅನನ್ಯ ।।೨೬।। ಅಲ್ಲಿಂದಲೇ ನಿಯಂತ್ರಣ ವಿಶ್ವದ । ಮಾಡುವರು ಸಿದ್ಧಿ ಬಲದಿಂದ । ಸಿದ್ಧ್ಯೇಶ್ವರ ಅಕೋಲೆ ಆಶ್ರಮದ । ಪ್ರತಾಪಿ ಅಗಸ್ತ್ಯರು ।।೨೭।। ಆಶ್ರಮದಲ್ಲಿ ಅಗಸ್ತ್ಯಪೂಜಾ ಸ್ತವನ ।ಅಸಾಧಾರಣ ಮಹಾತ್ಮ್ಯದ ವಾಚನ । ಫಲದಾಯಕ ಸಕಲರಕಾರಣ । ಸ್ವಂತ ಅಗಸ್ತ್ಯರು ಮಾಡಿಸುವರು ।।೨೮।। ಓದಬೇಕು ಮಹಾತ್ಮ್ಯ ಹೇತು ಸಹವರ್ತಮಾನ। ಅಥವಾ ಉದ್ದೇಶ ವಿಹೀನ। ಸಿದ್ಧ ಋಷಿ-ಮುನಿ ಅಗಸ್ತ್ಯ ಭಗವನ್ । ಪೂರೈಸುವರು ತತ್ಕಾಲ ।।೨೯।। ಮಾತ್ರಬೇಕು ನಿಃಸೀಮ ಭಕ್ತಿ-ಭಾವ । ಶುದ್ಧ ಹೇತು, ಅನಿಶ್ಚಯದ ಅಭಾವ। ಅಗಸ್ತ್ಯ ಮಹಾತ್ಮ್ಯದ



ವಾಚನ ಏಕಚಿತ್ತಯಾವ। ಅವಗೇ ಸಿದ್ಧ ಅಗಸ್ತ್ಯರು ಹಾರೈಸುವರು।।೩೦।। ಇದು ಲೇಖಕನ ಕೌಶಲ್ಯ ಅಲ್ಲ । ಪ್ರತ್ಯಕ್ಷ ಕೃಪಾಲು ಅಗಸ್ತ್ಯರೇ ಹೇಳಿದ್ದು ಇದೆಲ್ಲ । ಅಗಸ್ತ್ಯ ಮಹಾತ್ಮ್ಯ ವಸ್ತು ಸಾಮರ್ಥ್ಯದ ಬಲ । ಅನುಭವಿಸಿರಿ ಯಥಾಮತಿ ।।೩೧।। ಇನ್ನು ಕೇಳಿರಿ ಅಗಸ್ತ್ಯ ಜನ್ಮ ಕಥೆ ಗಹನ। ಮಾಡಿರಿ ಏಕ ಚಿತ್ತದಿಂದ ಶ್ರವಣ । ಅದ್ಭುತ ಅತಿ ಹಿತ-ಪ್ರದಾನ । ಪ್ರತ್ಯಕ್ಷ ತತ್ವ ಪ್ರಾಪ್ತಿಯ ।।೩೨ ।। ಇವಗೆ ಪ್ರಜಾಪತಿ ದತ್ತ ಪ್ರಸಾದ ಅಭಯ । ಮಿತ್ರ-ವರುಣ, ಊರ್ವಶೀಯ। ಈ ಪುತ್ರ ವಿಖ್ಯಾತ ಅಗಸ್ತ್ಯ ಮಹಾಶಯ । ಲೋಕ ಕಲ್ಯಾಣಕಾರಿ ।।೩೩। ಮುಗಿಲಲ್ಲಿಂದ ಶಿವತತ್ವ । ಶಿವ ತತ್ವದಿಂದ ವಿಷ್ಣು ತತ್ವ । ಅದರಿಂದ ಬ್ರಹ್ಮ ತತ್ವ । ಬ್ರಹ್ಮ ತತ್ವದಿ ಪ್ರಜಾಪತಿ ।।೩೪।। ಅಂತೇ ಅಗಸ್ತ್ಯ ಋಷಿಯು । ಶಿವ-ಬ್ರಹ್ಮ-ವಿಷ್ಣು ಸ್ವರೂಪಿಯು । ಶಿವನ ತ್ರಿನೇತ್ರ ಅಗ್ನಿ-ಹಲಾಹಲ-ವಿಷದಲ್ಲಿಯೂ । ಅಗಸ್ತ್ಯನ ಸಹಭಾಗ ವಿಶೇಷವಾಗಿ ।।೩೫।। ಬ್ರಹ್ಮ ಮಾಯೆ ವಿಷ್ಣು ತತ್ವ । ಸ್ವೀಕರಿಸಿ ಪೂರ್ಣ ಪ್ರಕಾಶತತ್ವ । ಮಾನ, ಮಾನ್ಯ, ಮಾಂದಾರ್ಯ ಇವು ಸರ್ವ । (ಅಗಸ್ತ್ಯನ ಹೆಸರು।) ಪ್ರಕಟಿಸಿದವು ದಿವ್ಯ ಶುಭ ಕುಂಭದಿ ।।೩೬।। ಕುಂಭೋಜ ಕತೆ ಇದೆ ಅದ್ಭುತ । ಮಾತ್ರ ಇದಕೆ ದೇವೇಂದ್ರನಾದನು ನಿಮಿತ್ತ । ಅಹಂಕಾರ ಭೇದಿಸಿ ಪಡೆಯಲು (ಬ್ರಹ್ಮ) ತತ್-ಸತ್ । ಪಂಚ ತತ್ವ ಹುಟ್ಟುವವು।।೩೭।। ನಿರ್ದಾಲಿಸಿ (ಕೊಂದು) ಸಮೂಲ ದಾನವ ತತ್ವ । ನಿತ್ಯ ಪಾಲಿಸಲು ದೇವ ತತ್ವ । ಅಗ್ನಿ-ವಾಯುವಿಗೆ ಹಚ್ಚಿದರು ಕರ್ತವ್ಯ ವ । ದೇವೇಂದ್ರ ಯಥಾಮತಿ।।೩೮।। ಸಾಗರದಲ್ಲಿ ಅಡಗಿದ್ದರು ರಾಕ್ಷಸರು । ಜಲಚರರ ನಡುವೆ ಗುರುತಿಸದಂತೆ ಯಾರೂ । ಅಗ್ನಿ-ವಾಯುಗಳು ಕಾದಾಡಿದರು। ಜಲಚರರನ್ನು ರಕ್ಷಿಸಲು ।।೩೯।। ದಾನವರನ್ನು ಕೊಲ್ಲಲು ಅಗ್ನಿ ಮರುತ ಇಬ್ಬರೂ । ಕೇವಳ ಅಸಮರ್ಥರಾದರು । ಆಗ ದೇವೇಂದ್ರ ಕೋಪಿಸಿ ಶಾಪಿಸಿದರು ।

ಅವರ ಮೇಲೆ ।೪೦॥ ''ಅಗ್ನಿ-ವಾಯುಪಡೆದು ಶಿವಶಕ್ತಿ । ಮೈಯಲ್ಲಿ ಲಭಿಸಿ ಶಾಪ ಉಕ್ತಿ । ಮಾಡಿರಿ ಬ್ರಹ್ಮರ ಕಾರ್ಯಪೂರ್ತಿ'' । ಹೀಗೆ ವರ ಕೊಟ್ಟರು ತ್ರಿದೇವರು ।೪೧॥ ಅಗ್ನಿ ತಾಳಿತು ಮಿತ್ರ ರೂಪ। ವಾಯು ಧರಿಸಿತು ವರುಣ ರೂಪ। ಇಂದ್ರರು ತೆತ್ತರು ಅಪರೂಪ-।- ವಾದ ಶಾಪ ಶಕ್ತಿ ।೪೨॥ ಸಾಧಿಸಲು ವಿಶ್ವ-ಕಲ್ಯಾಣ। ಸಿದ್ಧ ಪಂಚತತ್ವ ಬ್ರಹ್ಮ ಮಾಯೆ ಘನ । ಮಿತ್ರ-ವರುಣ ಋಷಿಯರಲ್ಲಿ ಪ್ರೇರಿಸಿದರು ವರ-ದಾನ । ಅದ್ಭುತ ಶಕ್ತಿಯ॥೪೨॥ ಇಂದ್ರ ತ್ರಿದೇವರ ಲೀಲೆ ॥ ಶೃಂಗಾರ ಸೃಜನದ ಕಲೆ । ರಂಭೆ ಊರ್ವಶಿಯರ ಮೇಲೆ । ಪ್ರಭಾವ ಬೀರಲು ।೪೩॥ ಮಿತ್ರ-ವರುಣ ಹೋಗಿದ್ದರು ವಾಸಿತವರ ಸತ್ರದಲ್ಲಿ । ಸೋಮ ಯಾಗನಡೆದಿತ್ತು ಎಲ್ಲಿ । ಊರ್ವಶಿಯ ಕಾಮಚೇಷ್ಟೆ ನಡೆಯಿತು ರಭಸದಲ್ಲಿ । ಮಿತ್ರ ವರುಣರನ್ನು ಆಕರ್ಷಿಸಲು ।೪೫॥ ಊರ್ವಶಿಯ ಕಾಮಚೇಷ್ಟೆಯ ಕಾರಣ । ಮೋಹಿತರಾದರು ಮಿತ್ರ -ವರುಣ । ಆಯ್ತು ಅದ್ಭುತ ವೀರ್ಯದ ಸ್ಖಲನ । ದಿವ್ಯ ಪ್ರತಾಪಿಗಳ ।೪೬॥ ಕುಂಭದಲ್ಲಿ ವಿಸರ್ಜಿಸಿದರು। ವೀರ್ಯವನ್ನು ಮಿತ್ರ-ವರಣರು । ಎಲ್ಲಿ ಉದ್ಭವಿಸಿದರು ಮುನಿ ಇಬ್ಬರು । ತೇಜಸ್ವಿ -ಅಗಸ್ತ್ಯ-ವಶಿಷ್ಠರು ।೪೭॥ ಕುಂಭದಿಂದ ಪ್ರಕಟಿಸಿದರು । ಮಾನ, ಮಾನ್ಯ-ಮಾಂದಾರ್ಯ (ಈ ಮೂರು ಹೆಸರಿನ) ಅಗಸ್ತ್ಯ ದೇವರು । ಅವಶಿಷ್ಟದಿಂದ ಹುಟ್ಟಿದರು ವಶಿಷ್ಠರು । ಮಾನವರೂಪಧಾರಿ ಋಷಿ।೪೮॥ ಬ್ರಹ್ಮಲೀಲೆ ಆಯಿತು ಹಿಮಾಲಯದಲ್ಲಿ । ಮಾನ ಮಾನಸ ಸರೋವರದಲ್ಲಿ । ಅವರೇ ಈ ಕುಂಭಜ ಅವಳಿ-ಜವಳಿ। ಸಹ ಕುಂಭೋದರರು।೪೯॥ ಅದು ಕೇವಳ ಶುಭ-ಕುಂಭವಲ್ಲ । ಮಾನ-ಮಾನಸ ಸರೋವರ ಮಂಗಲ । ಪ್ರಕಟವಾಯ್ತು ಶಿವತತ್ವ ಸಕಲ। ದೈವಿ-ಮಾನವಿ ಜನ್ಮವಿದು ।೫೦॥ ದೇವರೆರಡು, ಪುತ್ರ ಇಬ್ಬರು। ಒಬ್ಬ ಮಾನ, ಮಾನ್ಯ ಮಾಂದಾರ್ಯ ಮಾನಸರು। ದ್ವಿತೀಯ ಬ್ರಹ್ಮಭೂತ ಮಾನವ ಅವತಾರರು। ತ್ರಿಲೋಕದಿ ಸನ್ಮಾನ್ಯರಾದ।೫೧॥



ಶಿವ-ಪಾರ್ವತಿ ಹರ್ಷಿತರಾದರು । ನಮ್ಮ ಅದ್ಭುತ ಪುತ್ರದ್ವಯರು । ಒಬ್ಬ ಪ್ರಸಿದ್ಧ ಅಗಸ್ತ್ಯ ದಿವ್ಯರ್ಷಿಯರು । ಇನ್ನೊಬ್ಬ ವಿಶ್ವ ವಿಖ್ಯಾತ ವಶಿಷ್ಠರು ।೫೨॥ ಪಾರ್ವತಿಗೆ ಶಿವ ಅಂದರು. । ''ಅಗಸ್ತ್ಯ ನನ್ನ ಅವತಾರರು । ನಿಮಿತ್ತ ಮಿತ್ರ -ವರುಣರು । ಕೇವಲ ಲೌಕಿಕದ ಜನಕರು ।೫೩॥ ದೇವ -ಮಾನವರನ್ನು ಸಾಕಲು । ದಾನವರ ಸೊಕ್ಕು ಇಳಿಸಲು। ತ್ರಿದೇವರ ಶಕ್ತಿ ಬಳಿಸಲು । ಹುಟ್ಟಿದರು ವಿಶ್ವಯೋದ್ಧಾ ಅಗಸ್ತ್ಯ।೫೪॥ ಮಿತ್ರ-ವರುಣಿ ಪುತ್ರ ಅಗಸ್ತ್ಯನು । ಊರ್ವಶಿಯಲ್ಲಿ ಹುಟ್ಟಿಹನು । ಪರಶಿವ ತತ್ವ ನಾರಾಯಣನು । ಋಷಿರೂಪ ತ್ರಿದೇವ।೫೫॥ ನೋಡಿ ಅಗಸ್ತ್ಯ-ವಶಿಷ್ಠ-। ಮಾಡಿದಳು ತಾಯಿ ಹರ್ಷ-ಪ್ರಕಟ। ಸುರಾಸುರ ನರ ಎಲ್ಲರೂ ಒಟ್ಟ। ಕುಣಿದರು ಹಿಗ್ಗಿ ।೫೬॥ ಹೂಮಳೆ ಸುರಿದರು । ನಾನಾ ಸೋಮರಸ ಕುಡಿದರು । ಆನಂದೋತ್ಸವ ಮಾಡಿದರು । ಹಿಮಾಲಯದಲ್ಲಿ ।೫೭॥ ಆಶೀರ್ವಚನ ನುಡಿದು ಎಲ್ಲರೂ । ಇದು ಶಿವನ ಲೀಲೆ' ಅಂದರು । 'ಪರತತ್ವದ ವಿಲಾಸವಿದು ಮೇರು । ಮೃತ್ಯು-ಲೋಕದ ।೫೮॥ ಕುಂಭೋಜ, ಮಾನ, ಮಾನವ ಮಾಂದಾರ್ಯ-।- ಗಳಿದ್ದರೂ ಖ್ಯಾತ, ನಾಮ-'ಅಗಸ್ತ್ಯ' । ಇಹುದು ಕೌತುಕದ ಪಾರ್ವತಿಯ । ಮುಖದಿ ಇದೇ ।೫೯॥ ಅಗ್ನಿ ಹುಟ್ಟುತ್ತಲೇ ಕುಂಭದಿಂದ । ಹೊಳೆದವು ತ್ರಿಲೋಕ ಬೆಳಕಿನಿಂದ । ರವಿಯೂ ಮಂದ ಕಾಣಿಸಿದ । ಅಗಸ್ತ್ಯನ ಮುಂದೆ ।೬೦॥ ಪ್ರಕಟ ಆಗುತ್ತಲೇ ತೇಜಸ್ವಿ ಬಾಲಕನು । ವಿಶ್ವ ನೋಡಲಸಮರ್ಥ ಆಯ್ತು ಅವನನ್ನು । ತತ್ಕಾಲ ಋಷಿ ರೂಪ ತಾಳಿದನು । ಮಿತ್ರಾ-ವರುಣಿ ಪುತ್ರನು ।೬೧॥ ಮಿತ್ರಾ-ವರುಣಿ ಹರ್ಷಿಸಿದರು । ಸ್ವಂತದ ಪುತ್ರನನ್ನು ವಂದಿಸಿದರು। ತ್ರಿದೇವ ಸ್ವರೂಪ ಪಂಚರೂಪ ತತ್ವರು । ಪುತ್ರನೆಂದು ಪ್ರಕಟಿಸಿದರು ।೬೨॥ ಮಾನ, ಮಾನ್ಯ, ಮಾಂದಾರ್ಯರು। ಹತ್ತೂ ದಿಕ್ಕು ಮೀರಿ

ಹೋದರು । ಶಿವ, ಪಾರ್ವತಿ, ಕೈಲಾಸ ನೋಡಿ ಮುಂದುವರೆದರು । ಆಕಾಶ ಮಾರ್ಗದಿಂದ॥೧೩॥ ಬಾಲರೂಪ ಋಷಿ ಅದ್ಭುತ। ನೋಡಿ ಆದಳು ಪಾರ್ವತಿ ತೃಪ್ತ । ಅಂದಳು, ''ಮಾನ, ಮಾನ್ಯ, ಮಾಂದಾರ್ಯ ( ಈ ತ್ರಿನಾಮಯುಕ್ತ) ಸುತ ।ಕಂಡನು ಬರುವಾಗ'' ॥೧೪॥ ಶಿವ-ತೇಜರೂಪ ಪುತ್ರನ ನೋಡಿದರು। ಕೈಲಾಸ ಪತಿ ಶಿವ-ರಾಯರೂ । 'ಸ್ವಯಂ ನಾನೇ ಬಂದಿಹೆನು ' ಅಂದರು, । 'ಸಿದ್ಧನಾಗಿ!' ॥೧೫॥ ''ಕುಂಭೋಜ, ಮಾನ, ಮಾನ್ಯ-ಮಾಂದಾರ್ಯ। ಆದರು ಸಿದ್ಧ ಅಗಸ್ತ್ಯ' । ಹೀಗೆ ನುಡಿದು, ಕೊಟ್ಟಳು ದಿವ್ಯ-।-ಶಕ್ತಿಯನ್ನು ಅಗಸ್ತ್ಯರಿಗೆ ॥೧೬॥ ಶಿವ-ಪಾರ್ವತಿಯ ಕುಲದಲ್ಲಿ ಜನನ। ಶಿವ-ರೂಪ ದಿವ್ಯ ಅಗಸ್ತ್ಯನ । ದಿವ್ಯ ಲೀಲೆಯಿಂದ ರಕ್ಷಣ । ಮಾಡುವನು ಶಿವ-ಅವತಾರಿ ॥೧೭॥ ಒಂದಾಗಿ ತ್ರಿದೇವ ಪಂಚತತ್ವ ಶಕ್ತಿ । ಶಿವರೂಪ ಪ್ರಕಟಿಸಿತು ವೀರ ವೃತ್ತಿ । ಅಂತೇ ಇವನು ಶಿವ-ಸಿದ್ಧ ವ್ಯಕ್ತಿ । ಹುಟ್ಟಿದನು ಸ್ವಯಂ ॥೧೮॥ ಸ್ಥಾಪಿಸಲು ಶಿವ-ಅಗಸ್ತ್ಯ ಗೋತ್ರ। ರಕ್ಷಿಸಲು ಮಾನವ -ಧರ್ಮ ಪವಿತ್ರ । ಹುಟ್ಟಿಸಿದರು ಲೋಪಾ ಮುದ್ರೆಯನು ಕಲತ್ರ। (ಪತ್ನಿ) ಎಂದು ಅಗಸ್ತ್ಯರ ॥೧೯॥ ಲಕ್ಷ್ಮೀ, ಪಾರ್ವತಿ, ಸರಸ್ವತಿ -ಸಮಾನ । ಇದ್ದಳು ಲೋಪಾಮುದ್ರೆ ಪತಿ-ಪರಾಯಣ। ಮಾಡುವಳು ದಿವ್ಯಲೀಲೆಪೂರ್ಣ । ವಿಶ್ವ-ಕಲ್ಯಾಣಕ್ಕಾಗಿ ॥೨೦॥ ಅಂತೇ ಸಿದ್ಧ ಅಗಸ್ತ್ಯನು । ಅಗ್ನಿ, ವರುಣ ಬ್ರಹ್ಮರೂಪನು । ಇಹನು ನಿತ್ಯ ಶಿವ ರೂಪನೂ । ದೇವ ಋಷಿ ಸಿದ್ಧನು ॥೨೧॥ ಈ ಅಗಸ್ತ್ಯ ಜನ್ಮ ಕತೆ ಮಹನ । ಸರ್ವ ಶಕ್ತಿ ರೂಪ ದೇವ ಸುತನ । ಇಹುದು ದಿವ್ಯ ಶಕ್ತಿ ಪ್ರದಾನ । ತ್ರಿಲೋಕಕ್ಕೇ ॥೨೨॥ ಶ್ರದ್ಧೆ ಬೇಕು ಅಪರಂಪಾರ। ಜನ ಕಲ್ಯಾಣದ ಶುದ್ಧ ವಿಚಾರ । ಹೋಗಿರಿ ಬಿಟ್ಟು ಅಜ್ಞಾನ-ಅಹಂಕಾರ । ಶರಣ ಅಗಸ್ತ್ಯರಿಗೆ ॥೨೩॥ ಆಗಲು ಸರ್ವವೇ ಕಲ್ಯಾಣ । ಸಾಧಿಸಲು ಪುರುಷಾರ್ಥ ಯಶಪೂರ್ಣ। ಹೋಗಿರಿ ಅಗಸ್ತ್ಯರಿಗೆ ಅನನ್ಯ ಶರಣ । 'ಅಕೋಲೆ ಆಶ್ರಮಕೆ ಹೋಗಿ ॥೨೪॥ ಎಲ್ಲ ತೀರ್ಥಗಳ



ಅಧಿಷ್ಠಾನ । ಇಹುದು ಅಕೋಲಾ ಆಶ್ರಮ ಸ್ಥಾನ । ಸೂಕ್ಷ್ಮ ಚೈತನ್ಯ ಸ್ವರೂಪ ಅಗಸ್ತ್ಯನ । ನಿತ್ಯ ವಾಸವೆಲ್ಲಿ ॥೨೫॥ ಸರ್ವ ತೀರ್ಥಗಳ ಪುಣ್ಯ ಸಂಪಾದನ । ಸಾಧ್ಯ, ಮಾಡಿ ಅಗಸ್ತ್ಯ ಜನ್ಮ ಕಥಾ ಶ್ರವಣ । ಆಗಿ ಅಗಸ್ತ್ಯ ಋಷಿಯರ ದರ್ಶನ । ಜನ್ಮ ಸಫಲ ಖಂಡಿತ ॥೨೬॥ ಹೀಗಿಹುದು ಪ್ರಥಮ ಅಧ್ಯಾಯ । ಸ್ಥಾನದ ಹಿರಿಮೆ ಚೈತನ್ಯಮಯ ಆಗುವದು ಹೇಳಿ ಅಗಸ್ತ್ಯ ಕಥೆಯ ।ಭಕ್ತರ ಮನ ಶಾಂತ ॥೨೭॥ ಇಲ್ಲ ಐಶ್ವರ್ಯ ಇಂಥ । ಪ್ರಕಟಿಸುವದು ಪರತತ್ವ ಸತ್ । ಹುಟ್ಟಿಸುವದು ಬಲ-ಪುರುಷಾರ್ಥ । ಚರಾಚರದಲ್ಲಿ ॥೨೮॥ ಮುಂದೆ ಇಹುದು ಅಗಸ್ತ್ಯ ಆಖ್ಯಾನ । ಅದ್ಭುತ ದಿವ್ಯ ಕಥಾ ನಿರೂಪಣ । ಶ್ರೋತಾರರು ಆಗಲಿ ಸಾವಧಾನ । ಕಥೆ ಕೇಳಲು ॥೨೯॥ ಮಹಾಕಾವ್ಯ ವೇದ-ಪುರಾಣ । ಹಾಡಿಹವು ಅಗಸ್ತ್ಯ ಮಹಿಮೆಯನ್ನ । ಹೇಳಿ ಕೊಡುವರು ಸಾಮರ್ಥ್ಯ ಘನ । ಸ್ವಂತ ಅಗಸ್ತ್ಯರು ॥೩೦॥ ಇತಿ ಪ್ರಥಮೋಧ್ಯಾಯ ಃ ಓಂ ತತ್-ಸತ್ ಅಗಸ್ತ್ಯಾರ್ಪಣಮಸ್ತು । ಶುಭಂ ಭವತು।

॥ ಮೊದಲನೇ ಅಧ್ಯಾಯ ಸಮಾಪ್ತ ॥

॥ ಓಂ ॥

# ಅಗಸ್ತ್ಯ ಮಹಾತ್ಮ್ಯೆ

## ಎರಡನೇ ಅಧ್ಯಾಯ

॥ ಓಂ ಶ್ರೀ ಗಣೇಶಾಯ ನಮಃ ॥ ಓಂ ಸರಸ್ವತ್ತ್ಯೈ ನಮಃ ॥ ಓಂ ಶ್ರೀ ಅಗಸ್ತ್ಯ ನಮಃ ॥

ಓಂ ಶ್ರೀ ಗಣೇಶಾಯ ನಮಃ । ಶ್ರೀ ಸರಸ್ವತ್ಯೈನಮಃ । ಓಂ ಕರವೀರ ನಿವಾಸಿನಿಯೈ ನಮಃ । ಶ್ರೀ ಗುರುಭ್ಯೋ ನಮಃ॥ ಓಂ ಶ್ರೀ ಪರಮಾತ್ಮನಿಗೆ ಮಾಡಿ ನಮನ । ತ್ರಿದೇವ ಋಷಿ ಮುನಿ ಸಿದ್ಧರಿಗೆ ಅಭಿವಂದನ । ಶ್ರೀ ಸದ್ಗುರು ಅಗಸ್ತ್ಯರಿಗೆ ಹೋಗಿ ಶರಣ । ಅಗಸ್ತ್ಯಮಹಾತ್ಮ್ಯ ಬರಿವೆನು ।೧॥ ಮಾಂದಾರ್ಯ ಪ್ರಕಟವಾಗುತ್ತಲೇ ಕುಂಭದಲ್ಲಿ। ದೇವರ ಸಂಧಾನ ಆಯ್ತು ಮುಗಿಲಲ್ಲಿ । ದೇವೇಂದ್ರ ಅಂದರು ತ್ರಿದೇವರ ಸಮ್ಮುಖದಲ್ಲಿ । ''ನಾವು ಧನ್ಯರಾದೆವು'' ।೨॥ ಬಾಲರೂಪಧಾರಿ ಮಾಂದಾರ್ಯನು । ಶಿವ-ಪಾರ್ವತಿಯ ಮುಂದೆ ಹೋದನು । ಪಡೆದು ತಂದೆ-ತಾಯಿಯ ಆಶೀರ್ವಾದಗಳನ್ನು । ಕಾರ್ಯಕ್ಕೆ ಸಿದ್ಧನಾದನು ।೩॥ ಶ್ರೀ ಗಣೇಶ, ಸ್ಕಂದ, ನಾರದರನ್ನು। ನಂದಿಕೇಶ್ವರ, ಶಿವಗಣ-ಸಮಸ್ತರನ್ನು । ಆಲಂಗಿಸಿದನು ಮಾಂದಾರ್ಯನು । ವಂದಿಸಿದನು ಪಾರ್ವತಿಯನ್ನು ।೪॥ ಪಾರ್ವತಿ ಸದ್ಗದಿತ ಆದಳು,। 'ಮಗು ಮಾಡುವನು ಅಪೂರ್ವ ಕಾರ್ಯ'- ಅಂದಳು । ಪರ್ವತದಂಥ ಸಂಕಟ

೯

ಬಲು। ನಿವಾರಿಸುವನು ।೫॥ ನೀನು ಪರಮ ಪರಾಕ್ರಮ ಮಾಡುವಿ। ಈ ಸಮಸ್ತ ಸೃಷ್ಟಿಯನ್ನು ತಾರಿಸುವಿ । ಅಹಂಕಾರಿ ರಾಕ್ಷಸರನ್ನು ವಧಿಸಿ ಆಗುವಿ । ವಿಖ್ಯಾತ ಮೂರು ಲೋಕಗಳಲಿ ।೬॥ ಶಿವ-ಪಾರ್ವತಿಯರ ಶಿವಗಣ । ಸಹಾಯ ಮಾಡುವರು ನಿನ್ನ । ಯೋಜಿಸಿ ಗುದ್ದಲಿ ತ್ರಿಶೂಲಗಳನ್ನ। ಸೃಷ್ಟಿ ಪಾಲಿಸುವಿ ।೭॥ ದೇವ ಋಷಿ -ಮುನಿಯೋಗಿ ಸಿದ್ಧನು । ಅತಿಶಯ ಕರುಣಾಮೂರ್ತಿ ನೀ ಅಗಸ್ತ್ಯನು। ಸಾಧಿಸಲು ಸೃಷ್ಟಿಯ ಸಮತೋಲವನ್ನು । ದಂಡಿಸುವಿ ಸರ್ವ ಶೋಷಕರನ್ನು ।೮॥ ಉಗ್ರ ಇದ್ದೂ, ಉದಾರ ಶಿವರೂಪ ನೀನು । ಶರಣ ಬಂದ ದೇವ ದಾನವ ಮಾನವರನ್ನು-।-ಉದ್ಧರಿಸುವಿ, ವಿಷ್ಣು ತತ್ವವನ್ನೂ। ಅವಲಂಬಿಸಿ ।೯॥ ಕೇಳಿರಿ ಅಗಸ್ತ್ಯ ಕತೆ ಅದ್ಭುತ । ನಿಸರ್ಗ ಚಕ್ರಕ್ಕೆ ಪ್ರೇರಕವತ್। ಕೊಡುವಿ ಯಜ್ಞ-ಸತ್ರ ಯೋಜಿಸಿ ಸತತ। ಬಲಿಕೊಟ್ಟು ಪ್ರೇರಿಸುವಿ ।೧೦॥ (ಈ ವೊದಲು) ನಿಸರ್ಗ, ಋತುಚಕ್ರಗಳಿದ್ದಿಲ್ಲ ಸ್ಥಿರ । ಪ್ರಲಯಗಳಾಗುತ್ತಿದ್ದವು ಅಪಾರ। ಸೃಷ್ಟಿ ತೂಗಾಡುತ್ತಿದ್ದಿತು ವಾರಂವಾರ । ಬ್ರಹ್ಮ-ವಿಷ್ಣು-ಕೊರಗುತ್ತಿದ್ದರು ।೧೧॥ ಬ್ರಹ್ಮ-ವಿಷ್ಣು ಕೋರಿದರು ಶಿವತತ್ವವನ್ನು । ಅಂತೇ ಶಿವರಾಜರು ಆಮಂತ್ರಿಸಿದರು ಅಗಸ್ತ್ಯರನ್ನು। ಸಾಧಿಸಿ ಪರ್ಯಾವರಣ, ನಿಯಮಿಸು ಋತುಚಕ್ರವನ್ನು ।ಸೃಷ್ಟಿ ನಿಯಮಿತ ಮಾಡಲು।೧೨॥ ರವಿ ವಾಯು ದೇವೇಂದ್ರರ ದಾಸ ಇದ್ದರು । ರಾಕ್ಷಸರ ನಾಶಕ್ಕಾಗಿ ಪ್ರಕಟಿಸಿದ್ದರು । ಅದಕ್ಕಾಗಿ ಮಿತ್ರ-ವರುಣರ ಪುತ್ರರಾಗಿ ಹುಟ್ಟಿದರು । ಪೃಥ್ವಿಯ ಮೇಲೆ ಮಾಂದಾರ್ಯರು (ಅಗಸ್ತ್ಯರು )

।।೧೩।। ಶಿವತತ್ವವು ಮೂಲ ಮಾಂದಾರ್ಯರ । ಶಕ್ತಿಸ್ರೋತ ಸಕಲ ದೇವರ । ಒಕ್ಕಟ್ಟಿಸಿ ಶಕ್ತಿ ತ್ರಿದೇವರ । ದಿವ್ಯ ಸಿದ್ಧರಾದರು ।।೧೪।। ಶಿವ ತತ್ವವು ಕೊಟ್ಟಿತು ಆಜ್ಞೆಯನ್ನು । ''ನಿಯಮಿತ ಮಾಡು ಇಂದ್ರ ಮರುತರನ್ನು'' । ಯೋಜಿಸು ಯಜ್ಞ ಸತ್ರವನ್ನು'' । ಅಗಸ್ತ್ಯರು ಆಜ್ಞೆ ಪಾಲಿಸಿದರು ।।೧೫।। ಅದ್ಭುತ ಸೋಮರಸ ನಿರ್ಮಿಸಿದರು । ಪುರೋಹಿತರು ಶತಾರ್ಚನೆ ಸಹಿತ ಯಜ್ಞ ಆರಂಭಿಸಿದರು । ಶ್ರೇಷ್ಠ ಆಹುತಿ ಸಿದ್ಧ ಮಾಡಿಸಿದರು। ಉತ್ತಮ, ಪುಷ್ಟ ಹೋರಿಯ।।೧೬।। ಯಜ್ಞ-ಅಗ್ನಿ ಪ್ರಕಟಿಸಿತು । ಋಷಿಗಣ ಅದಕೆ ವಂದಿಸಿತು । 'ಸ್ವಾಹಾ' ಕಾರ ಮಾಡಲು ಸಿದ್ಧವಾಯಿತು । ಯಜ್ಞಕ್ಕಾಗಿ।।೧೭।। ರೂಢಿಯಂತೆ 'ಅಧಿಕಾರ ಇಂದ್ರನಿಗಿದ್ದರೂ । ಮರುತನಿಗಾಗಿ ಆಹುತಿ ಸಿದ್ಧ ಮಾಡಿದರು । ಋತುಚಕ್ರ ನಿರ್ಮಿಸಲು ಹೇಳಿದರು ।ಶ್ರೇಷ್ಟ ಮುನಿ ಅಗಸ್ತ್ಯರು ।।೧೮।। ಇಂದ್ರ ಮತ್ತು (ಮರುತ) ಪ್ರಭಂಜನ। ಪ್ರಿಯ ಅಗಸ್ತ್ಯರಿಗೆ ಸಮಾನ । ಇಂದ್ರನಲ್ಲಿ ವಿಶೇಷ ಮನ ।ಇದ್ದೂ ಮರುತನ ಕರೆದರು ।।೧೯।। ಸನ್ಮಾನೋತ್ಸುಕ ಇಂದ್ರ ಕ್ರೋಧಿಸಿದನು । ಮರುತ ಹೆಜ್ಜೇ ಕೋಪಿಸಿದನು । ಇಂದ್ರ, 'ನನ್ನ ಅಧಿಕಾರ ಇದು' ಅಂದನು। 'ಪ್ರಥಮ ಆಹುತಿ ನಮಗೇ!' ।।೨೦।। ''ನನಗಾಗಿಯೇ ಆಗಿದೆ ಸಿದ್ಧ ಸಂಪನ್ನ । ಅಂತೇ - ಈ ಆಹುತಿ ಇಹುದು ನನ್ನ । ಅಧಿಕಾರ ಹೇಗೆ ದೇವೇಂದ್ರನ ?।। ಆಹುತಿ ಕೊಡಿ ನನಗೇ !'' ।।೨೧।। ಇಬ್ಬರೂ ಜಗಳಾಡ ಹತ್ತಿದರು । ಅಗಸ್ತ್ಯ ವಿಚಾರದಲ್ಲಿ ಬಿದ್ದರು, । 'ಹುಟ್ಟಿನಿಂದೇ ಇಹುದು ಸೃಷ್ಟಿ ಅಪಾರ। ಅಸಮತೋಲದ್ದು'।।೨೨।। ಆಹುತಿಗಾಗಿ ಸಂಘರ್ಷ ಬೆಳೆಯಿತು। ಮತ್ತೆ ಉಗ್ರರೂಪ ತಾಳಿತು। ಶಾಂತಿಸಲು ಕೈ-ಕಾಲು ಹಿಡಿದು ಆಯಿತು । ಅಗಸ್ತ್ಯರಿಂದ



।।೨೩।। ಉಗ್ರರೂಪ ತಾಳಿತು ಸಂಘರ್ಷಣ।। ಆಹುತಿ ಕಸಿದು ನಡೆದ ಇಂದ್ರ ಭಗವನ್ । ಅಗ್ನಿ ಮುಖ ಬಿಟ್ಟಿತು ಪಾವಿತ್ರ್ಯವನ್ನ । ಸಮಸ್ತ ದೇವರ ಸಮಕ್ಷ।।೨೪।। ಬ್ರಹ್ಮ-ವಿಷ್ಣು ಮಹೇಶರು । ಔತ್ಸುಕ್ಯದಿಂದ ಅವಲೋಕಿಸ ತೊಡಗಿದರು ।'ಹೇಗೆ-ಇಂದ್ರ-ಮರುತರ ಸಾಧಿಸುವರು-।- ಸಂಬಂಧ ಅಗಸ್ತ್ಯರು ಇನ್ನು !' ।।೨೫।। ಇಂದ್ರರಾದರು ಅತಿ ಕ್ರೋಧಿತ ।'ಕೊಡಿ ಆಹುತಿ ಸ-ಸನ್ಮಾನ ಯಥೋಚಿತ..।- ಅಗ್ನಿ ಮುಖದಿಂದ ಹವಿ ಸಾಂಪ್ರತ । ಯಥಾ ವಿಧಿ ನಮಗೆ' ಅಂದರು।।೨೬।। ಆಗಿ ಕ್ರೋಧಿತ ಮರುದ್ಗಣ । ಆವೇಶದಿಂದ ಮುತ್ತಿದವು ಇಂದ್ರನ। ಅನಿಸಿತು ಆಯ್ತು ಸೃಷ್ಟಿ ದೋಲಾಯ ಮಾನ। ಅಂದವು, 'ಆಹುತಿ ಕೊಡಿ ನಮಗೇ' ।।೨೭।। ಮರೆತು ಅಗಸ್ತ್ಯರ ಗೆಳೆತನ । ಮಾಡುವರು ಪರಸ್ಪರರಿಗೆ ಅಪಶಬ್ದ ತಾಡನ । ಕ್ರೋಧಿಸಿ, ಹೇಳುವರು ಸ್ವಂತದ ದೊಡ್ಡಸ್ತನ । (ಇದನ್ನು ನೋಡಿ- ಕೇಳಿ) ಎಲ್ಲ ಸುರರು ಚಿಂತಿತರಾದರು ।।೨೮।। ದ್ವಂದ್ವ ನಡೆಯಿತು ಭರದಿಂದ । ಮಾಡರು ಅನ್ಯರ ಕೂಡ ಸಂವಾದ । ಬಡೆದಾಟಕ್ಕೆ ಉಳಿಯಲಿಲ್ಲ ಬಂಧ । ಕ್ರೋಧಿತರಾದರು ಎರಡೂ ಸುರರು ।।೨೯।। ಪ್ರಲಯಂಕರ ಹಬ್ಬಿತು ಗಾಳಿ । ಭಯಂಕರ ಜಡೆಯಿತು ಮಳೆ। ಸೃಷ್ಟಿ ಮಬ್ಬಿತು ಪ್ರಲಯವನು ತಾಳಿ । ಚಿಂತೆಯಲಿ ಬಿದ್ದರು ತ್ರಿದೇವರೂ ।।೩೦।। ಹೀಗಿದ್ದೂ ಸುರರು ನೋಡಿದರು ಔತ್ಸುಕ್ಯದಿಂದ । ಅಗಸ್ತ್ಯರದೇನು ಉಪಾಯ ಪ್ರಬಂಧ।। ದಿಗ್ಮೂಡರಾದರು ಋಷಿ ಭಯದಿಂದ । ಅಗ್ನಿಜ್ವಾಲೆ ಮುಗಿಲೇರಿದವು ।।೩೧।। ಕೇಳಹತ್ತಿದರು ಪ್ರದೀಪ್ತ ಅಗ್ನಿಗಣ । 'ಅಗಸ್ತ್ಯ

ಇದೆಂಥದು ಯಜ್ಞ? । ನಿಲ್ಲಿಸಿದ್ದೀ ಸಮ್ಮುಖ ನಮ್ಮನ್ನ। ಆಹುತಿ ಮುಂದಿಟ್ಟು? ॥೩೨॥ ಕುಶಲ ವಾಕ್‌ಪಟು
ಅಗಸ್ತ್ಯನು । ತಕ್ಕೊಂಡು ಅಗ್ನಿಯ ಆದೇಶವನ್ನು । ಇಂದ್ರನ ಎದುರಿಗೆ ನಿಂತು ಅಂದನು, । ವಿನಮ್ರನಾಗಿ ॥೩೩॥
''ದೇವಾ, ನೀವು ದೇವೇಂದ್ರರು। ಸಮಸ್ತ ಸುರರ ಸುರರು । ದಯಪಾಲಿಸಬೇಕು ಸ್ವಾಮಿಯವರು । ಜ್ಯೇಷ್ಠತ್ವ
ಸ್ವೀಕರಿಸಿ ॥೩೪॥ ನಿಮ್ಮ ಆಧೀನ ಮರುತ್‌ಗಣ । ತಾವು ಅವರ ಸಹವರ್ತಮಾನ । ಮಾಡಿರಿ ಅಂತರಾಳಕ್ಕೆ ಪಯಣ
। ಸೃಷ್ಟಿ ಹಿತಕ್ಕಾಗಿ ॥೩೫॥ ನಿಮಗೇ ವಶವಾಗಲೆಂದು ಮರುತ್ಗಣ । ನಾನು ಮಾಡುತಿಹೆನು ಈ ಯಜ್ಞ । ಅದಕ್ಕಾಗಿಯೇ
ಇಹುದು ಪ್ರಯೋಜನ । ಈ ಆಹುತಿಯ ॥೩೬॥ ಆಹುತಿ ಯಾವದೇ ದೇವರ । ಸಲುವಾಗಿ ಇದ್ದರೂ, ಹೇ ಸುರ।
ಪ್ರಥಮ ನಿಮ್ಮದೇ ಅಧಿಕಾರ । ಅದರ ಮೇಲೆ ॥೩೭॥ ಮರುದ್ಗಣ ಸಿಟ್ಟಾಗಿಹರು । ಅತಿ ಕ್ರೋಧಾಯಮಾನರಿದ್ದರೂ।
ಅವರನ್ನು ಪಾಲಿಸಬೇಕು ದೇವರೂ -।- ನೀವೇ ಹಿರಿಯರಾಗಿ ॥೩೮॥ ಅರಸನು ವಿಚಾರಿ ಇರಬೇಕು । ಸ್ವಾಗತ
ಶೀಲ ಉದಾರ ಬೇಕು । ಪ್ರಜಾಹಿತ ಸಾಕಬೇಕು । ಕೊಟ್ಟು ಅನ್ಯರಿಗೇ ದೊಡ್ಡತನ ''। ೩೯॥ ಇಂದ್ರದೇವ ಆದರು
ಪ್ರಸನ್ನ । ಅಂದರು, 'ಮಾಂದಾರ್ಯ (ಅಗಸ್ತ್ಯ)ನೇ ನೀನಿದ್ದೀ ಚತುರ ಘನ । ಮಾಡಿದಿ ವಶ ನನ್ನ ಮನ । ಹೋಗು,
ಸಾಕು ಮರುದ್ಗಣ' ॥೪೦॥ ಇಂದ್ರವಚನದಿಂ ಅಗಸ್ತ್ಯ ಹರ್ಷಿತನಾದನು । ಮರುತನನ್ನು ಶಾಂತಿಸಲು ಹೋದನು
। ದೀರ್ಘ ಆಲಿಂಗನ ಕೊಟ್ಟು ಅಂದನು, । 'ಕ್ರೋಧ ತಡಿಸಿರಿ ॥೪೧॥ ಇಂದ್ರ-ಮರುತ ಇಬ್ಬರೂ । ಇಹರಿ ಉತ್ತಮ
ಸೃಷ್ಟಿ ನಿಯಂತ್ರಕರು। ನಿಮ್ಮ ದ್ವಂದ್ವದಿಂ ಸೃಷ್ಟಿ-ದೇವರು । ಬಹಳ ದುಃಖಿಸುವರು ॥೪೨॥ ತಾವು



ನಮ್ಮ ತಾತ-ಆಪ್ತರು । ಇಹರಿ ಸಂಪೂರ್ಣ ಶಿವ-ಸ್ವರೂಪರು । 'ಏಕಾದಶ ರುದ್ರ'ರೆಂದು ಖ್ಯಾತರು । ಮೂರು
ಲೋಕಗಳಲ್ಲಿ ॥೪೩॥ ನಾನಿಹೆನು ಶಿವನ ಅಂಕಿತನು। ನಿಮ್ಮ ಅತಿ ನಿಕಟದ ಗೆಳೆಯನು । ನಿಮ್ಮಿಬ್ಬರಿಗಾಗಿಯೇ ಯಜ್ಞ
ನಡೆಸಿಹೆನು । ಶಿವಾಜ್ಞೆಯಿಂದ!' ॥೪೪॥ 'ನೀವು ಆಗಿರಿ ಆಹುತಿ ಅಧಿಕಾರಿ ' । ಹೀಗೆ ಇಂದ್ರನನ್ನು ವಿನಂತಿಸಿರಿ ।
ಅನ್ಯೋನ್ಯರಿಗೆ ಸಹಾಯ ನೀಡಿರಿ । ಸೃಷ್ಟಿಯ ಹಿತ ಸಾಧಿಸಲು'' ॥೪೫॥ (ಈ ವಿನಂತಿ) ದೇವೇಂದ್ರರು ಮನ್ನಿಸಿದರು
। 'ನಮ್ಮ ಸನ್ಮಾನ ಆಯಿತು' ಎಂದರು । ನಿಮ್ಮಿಬ್ಬರ ಸಂವಾದದಿಂದ ದೇವರೂ ।- ಯಜ್ಞ ಸಫಲ ಆಗುವದು ॥೪೬॥
ಹರ್ಷಿಸುವರು ಖಂಡಿತ ತ್ರಿದೇವರು । ನಿಮ್ಮಿಬ್ಬರನ್ನೂ ಗೌರವಿಸುವರು । ಸಂತುಷ್ಟ ಆಗುವರು ಸೃಷ್ಟಿ
ದೇವತೆಯರೂ। ನಿಮ್ಮಿಬ್ಬರ ಐಕ್ಯದಿಂದ ॥೪೭॥ ಇಂದ್ರನೆಂದರೆ ಸೃಷ್ಟಿ ಜೀವನ । ನೀವು ಸೃಷ್ಟಿಯ ಪ್ರಾಣ । ಪರಸ್ಪರಿಗೆ
ಮಾಡಿ ಸಾಹ್ಯ ಚೆನ್ನ । ನಿರ್ಭಯ ಮಾಡಿರಿ ಸೃಷ್ಟಿ ॥೪೮॥ ಆಹುತಿ ತಕ್ಕೊಳ್ಳಿರಿ ಅಗ್ನಿ-ಮುಖದಿಂದ । ಪ್ರದೀಪ್ತ ಉತ್ಸುಕ
ಆಗಿಹ ಚಂದ। ಬೇಗ ದಯಪಾಲಿಸಿರಿ ಮುಂದ-।- ಬನ್ನಿರಿ ಇಬ್ಬರೂ ॥೪೯॥ ಮರುತ ಅಂದ, 'ಪುತ್ರ-ಮಿತ್ರ ಸಮಾನ
। ಸಾಧಿಸಲು ಸೃಷ್ಟಿ ಹಿತವನ್ನ-।- ಮರೆವೆವು ನಮ್ಮ ಶತ್ರುತನ। ಅಭಯ ಕೊಡುತ್ತೇನೆ' ॥೫೦॥ ಕೇಳಿ ಮರುತನ
ಭಾಷಣ । ತ್ರಿದೇವ, ಋಷಿ ದೇವಗಣ । ಸಂತುಷ್ಟರಾಗಿ ಸೃಷ್ಟಿದೇವೀ ಸಹ ವರ್ತಮಾನ। ಸ್ತುತಿಸಿದರು ಅಗಸ್ತ್ಯರನ್ನು
॥೫೧॥ ಸಮಸ್ತ ಋಷಿಗಣ ಸಹ ಅಗಸ್ತ್ಯರು । ಇಂದ್ರ ಮರುತರನ್ನು ಸನ್ಮಾನಿಸಿದರು । ಅಗ್ನಿ ನಾರಾಯಣರಿಂದ

ಸ್ವೀಕರಿಸಿದರು । ಅರ್ಪಿತ ಆಹುತಿಯನ್ನು  (ಇಂದ್ರ, ಮರುತರು)॥೩೨॥ ಆಯ್ತು ವಿಜಯ-ಶಂಖಧ್ವನಿ ಗಗನದಿ,। ದೇವ-ಋಷಿ ಲೋಕದಿ। ಮುಗಿಯಿತು ಚಿಂತಾ-ವ್ಯಾಧಿ। ಮಾನವ ಲೋಕ ಹಿತದ ॥೩೩॥ ಸೋಮರಸ ಪ್ರಾಸಿಸಿ ಇಬ್ಬರೂ । ಅಗಸ್ತ್ಯರ ಯಜ್ಞದಲ್ಲಿ ಭಾಗವಹಿಸಿದರು । ಪರಸ್ಪರರನ್ನು ಅಪ್ಪಿದರು । ಶುಭ ನುಡಿದಾಡಿದರು ॥೩೪॥ ಅಗಸ್ತ್ಯ ನಮಿಸಿದರು ಅಗ್ನಿನಾರಾಯಣರನ್ನು । ತ್ರಿದೇವ- ಸಹಿತ ಋಷಿಗಣರನ್ನು । ಸಮವೇತ ಬಂದ ಇಂದ್ರ-ಮರುತರನ್ನೂ । ಶುಭ-ಕಲ್ಯಾಣ ಇಚ್ಛಿಸಿ  ॥೩೫॥ ಉಭಯ ದೇವರಾದರು ಪ್ರಸನ್ನ ॥ ಅಭಿವಂದಿಸಿದರು ಅಗಸ್ತ್ಯರನ್ನ । 'ಹೇಳು, ಇಚ್ಛೆ ಏನು ನಿನ್ನ ?' ಪೂರೈಸಲು ನಾವಿಹೆವು ತತ್ಪರ ॥೩೬॥ ಅಗಸ್ತ್ಯ ಅಂದರು, ಅಪ್ಪಿ ಇಬ್ಬರನ್ನೂ। ''ನನಗೆ ಬೇಡ ತತ್ವ ತಾ ಏನೇನೂ। ಬೇಡುವೆ ಅಖಂಡ ಮಾನವ ಹಿತವನ್ನು। ಕೊಡಿ ಅನುಮಾನಿಸದೇ ''॥೩೭॥ ನಮಗಿದೆ ಆಜ್ಞೆ ಲೋಕಲ್ಯಾಣದ । ಅಂತೇ ಬೇಡಿಕೆ - ಈ ಪ್ರಕಾರದ। ಮಾಡಿರಿ ಪಂಚತತ್ವ ನಿಯಮನದ । ಕಾರ್ಯ ಈ ಮುಂದೆ ॥೩೮॥ ಕೇಳಿ ಅಗಸ್ತ್ಯರ ಭಾಷಣ । ಹೆಚ್ಚೇ ಹರ್ಷಿಸಿದರು ಇಂದ್ರ-ಮರುದ್ಗಣ। ಅಂದರು, ''ಪ್ರಕಟಿಸು ನಿನ್ನ ಮನ। ಏನು ಮಾಡಬೇಕು, ನಾವು''॥೩೯॥ ''ಋತುಚಕ್ರ ಮಾಡಬೇಕು ಸ್ಥಾಪಿತ । ಮಳೆಗಾಲ ಬರಲಿ ನಿಯಮಿತ । ಸೃಷ್ಟಿಆಗಲಿ ಪುಲಕಿತ, ಸುಫಲಿತ। ಇದೊಂದೇ ಆಕಾಂಕ್ಷೆ''॥೪೦॥ 'ತಥಾಸ್ತು' ಅಂದರು, ಇಂದ್ರ-ಮರುದ್ಗಣ। ಸ್ಥಾಪಿಸಿದರು ಸೃಷ್ಟಿ ಚಕ್ರ ಚೆನ್ನ । ನಿಶ್ಚಯಿಸಿದರು ಪರ್ಜನ್ಯ ಕಾಲವನ್ನ । ಎಲ್ಲರ ಸಾಕ್ಷಿಯಿಂದ ॥೪೧॥ ನೀವು ಪ್ರಾರ್ಥಿಸಿದೊಡೆ ಆದೀತು ವೃಷ್ಟಿ। ನಿಮ್ಮ ಇಚ್ಛೆಯಿಂದೇ ಆದೀತು ಸಮಾಪ್ತಿ। ಆಜ್ಞೆಯಂತೇ ಓಡೀತು



ಸೃಷ್ಟಿ । ನೀವು ಇಚ್ಛಿಸಿದ॥೪೨॥ ಸಾನಂದ, ಸನ್ಮಾನಯುಕ್ತ  । ಆಗಿ ಪ್ರಸನ್ನ ಇಂದ್ರ -ಮರುತ । ಅಭಿವಂದಿಸಿದರು ಸಫಲ ಯಜ್ಞದ ಪ್ರೀತ್ಯರ್ಥ । ಅಗಸ್ತ್ಯ ಋಷಿಯರನ್ನು  ॥೪೨॥ ದೇವರು, ಋಷಿಯರು ಪುನಃ ಪುನಾಃ । ಮಾಡಿದರು ವೃಷ್ಟಿ ಹೂಗಳ ನಾನಾ । ಕೊಟ್ಟು ಹರ್ಷದಿಂ ಅಗಸ್ತ್ಯರಿಗೆ ಮಾನವಂದನಾ । ಪೃಥ್ವಿ, ನಭ, ರವಿ, ಸರ್ವರೂ ॥೪೪॥ ಅಗಸ್ತ್ಯರು ನೇಮಿಸಿದರು ಪರ್ಜನ್ಯ ಚಕ್ರವನ್ನು । ಸ್ವ-ಸಾಕ್ಷಿಯಿಂ ನಿಯಮಿಸಿದರು ಅವುಗಳನ್ನು  । ಸೃಷ್ಟಿಗೆ ಕೊಟ್ಟರು ಆಶ್ವಾಸನವನ್ನು । ಕೃತಜ್ಞ ಮಾನವರು ಹರ್ಷಿತರಾದರು ॥೪೫॥ ಶ್ರೇಷ್ಠ ದೇವರ ಸಹ ಋಷಿಗಣ। ಮಾಡಿದರು ಅಗಸ್ತ್ಯರ ಗುಣಗಾನ । ಸಾಕ್ಷಾತ್ ಪರಬ್ರಹ್ಮ ದೇವರೂ ಆಶೀರ್ವಚನ । ಕೊಟ್ಟರು ಅಗಸ್ತ್ಯರಿಗೆ ॥೪೬॥ ಸ್ವ-ತಪನಿರ್ಮಿತ ಮುಂಜಿಯ ದಾರವ । ಅಗಸ್ತ್ಯರಿಗೆ ಕೊಟ್ಟರು ಬ್ರಹ್ಮದೇವ । ಸೃಷ್ಟಿ ಕಲ್ಯಾಣ ಸಾಧಿಸಲಿಚ್ಛಿಸುವ । ಋಷಿ ಶ್ರೇಷ್ಠರಿಗೆ ॥೪೭॥ ದೇವೇಂದ್ರ  ಆದರು ಅತಿ ಪ್ರಸನ್ನ । ಅಂದರು, ' ತಕ್ಕೊಳ್ಳು ಗಾಯತ್ರ್ಯುಪನಿಷದವನ್ನ । ಮಾಡು ಸೃಷ್ಟಿ ಪಾಲನೆ, ಕಲ್ಯಾಣ । ಸಾನಂದ ನೀನು॥೪೮॥ ಅಗಸ್ತ್ಯರು ನಮ್ರರಾಗಿ ಸರ್ವರನು ವಂದಿಸಿದರು । ಶಿವಾಜ್ಞೆಯ ಪಾಲನೆ ಮಾಡಿದರು । 'ಇದರಲ್ಲಿ ನನ್ನ ಶ್ರೇಯ ಶೂನ್ಯ' ಅಂದರು । ಕೃತಜ್ಞನು ನಾನು ನೀವೆಲ್ಲರಿಗೂ ॥೪೯॥ ಪಾಲಿಸಿ ಶಿವತತ್ವ ಅಜ್ಞೆಯ । ಸ್ಮರಿಸಿ ಬ್ರಹ್ಮದೇವ, ರಚಿಸಿದರು ಸೃಷ್ಟಿಯ  । ಒಪ್ಪಿಸಿದರು ಲೋಕ ಪಾಲನೆಯ । ಕಾರ್ಯ, ವಿಷ್ಣು ತತ್ವಕ್ಕೆ ॥೫೦॥ ತ್ರಿದೇವರಿಂದ ತತ್ವತಾ । ಪಡೆದರು ಕಾರ್ಯ ತತ್ಪರತಾ । ಪಂಚತತ್ವಯುಕ್ತ

ಸ್ವರೂಪತಾ। ಸಿದ್ಧ ಅಗಸ್ತ್ಯರು ॥೨೧॥ ಹುಟ್ಟುತ್ತಲೇ ಸಿದ್ಧ ತತ್ವಗಳು । ಕೂಡುವವು ಅವಕ್ಕೆ ಅಂತರಿಕ್ಷ ಶಕ್ತಿಗಳು । ಸಿದ್ಧರಿಂದ ಲೋಕ ಕಾರ್ಯಗಳು । ಸಾಧಿಸುವವು ತ್ರಿದೇವರವು ॥೨೨॥ ಮಹಾಕಾಲಿ-ಲಕ್ಷ್ಮೀ-ಶಕ್ತಿಗಳ ಯುತಿ-।-ಯಿಂದಲೇ ಲೋಕ ಕಲ್ಯಾಣದ ಕೃತಿ । ಸಾಧಿಸುವವು, ಸಿದ್ದರಿಗೆ ಶಕ್ತಿ-।-ಕೊಟ್ಟು ಸರ್ವ ಕಾರ್ಯ ॥೨೩॥ಇದೇ ಹಿರಿಮೆ ಋಷಿವರರ! । ಸಾಧಿಸುವರು ಆತ್ಮೋದ್ಧಾರ - ಲೋಕೋದ್ಧಾರ । ತಪ, ವಿದ್ಯೆಯಿಂದ ನಿರಂತರ । ತ್ರಿದೇವ ಪ್ರಸಾದದಿಂದ ॥೨೪॥ ಮಾಡಿ ಬ್ರಹ್ಮದೇವರು ಹೊಸ ಮನು ನಿರ್ಮಾಣ । ಸಾಧಿಸಿದರು ಅದ್ಭುತ ಸೃಷ್ಟಿಯ ಸ್ಥಾಪನ । ದೇವ, ಪ್ರಜಾಪತಿ ಋಷಿಗಣ। ನಿರ್ಮಿಸಿದರು ಕ್ರಮವಾಗಿ ॥೨೫॥ ಹುಟ್ಟಿಸಿದರು ಹೊಸ ಮನುಜನ । ಮಾಡಲು ತ್ರಿದೇವರ ಆತ್ಮ ಚಲನ । ಒಪ್ಪಿಸಿದರು ಕಾರ್ಯ ಲೋಕ ಕಲ್ಯಾಣ। ಋಷಿ, ಪ್ರಜಾಪತಿ, ದೇವ-ದೈತ್ಯರಿಗೆ ॥೨೬॥ ದೇವ-ದೈತ್ಯ ಕಾದಾಡುವರು ಘನ । ಕಾರ್ಯ ತ್ಯಜಿಸಿ 'ಲೋಕ ಕಲ್ಯಾಣ' ।ಆಗುವದು ಅಪಾರ ಶಕ್ತಿ ಪತನ । ತ್ರಿದೇವ ಚಿಂತಿಸುವರು ॥೨೭॥ ಬ್ರಹ್ಮದೇವರು ನಿರ್ಮಿಸಿ ಋಷಿಗಣ । ಒಪ್ಪಿಸಿದರು ಲೋಕ ಕಲ್ಯಾಣ । ಹೂಡಿ ಅದ್ಭುತ ಆಟಘನ। ನೋಡುವರು ಕೌತುಕದಿಂದ ॥೨೮॥ ಋಷಿ ಆದರು ಮೂರು ಪ್ರಕಾರ । ಒಂದು, ತ್ರಿದೇವರ ಅವತಾರ । ಎರಡು, ನಭಶಕ್ತಿ-ಪಂಚತತ್ವ-ಪರ । ಮೂರು, ಮನುಜರೂಪ ॥೨೯॥ ಮರೀಚಿ ಪ್ರಜಾಪತಿಯಿಂದ । ಆದಿತಿ, ಕಶ್ಯಪರು ಮರೀಚಿಯಿಂದ । ಮಿತ್ರ-ವರುಣೆ ಕಶ್ಯಪರಿಂದ। ಮಿತ್ರ-ವರುಣರಿಂದ-ಅಗಸ್ತ್ಯ-ವಶಿಷ್ಠರು ॥೩೦॥ ಅಗಸ್ತ್ಯರು ದೈವಿ-ಮಾನವ ಸ್ವರೂಪ। ಅಗ್ನಿ-ವಾಯು, ಆದಿಶಕ್ತಿ ಏಕರೂಪ। ಪ್ರತ್ಯಕ್ಷ ತ್ರಿದೇವ ಶಕ್ತಿ ರೂಪ। ಇಂದ್ರ



ಸ್ಪರ್ಶದಿಂ ಹುಟ್ಟಿದ ॥೩೧॥ ಅಗಸ್ತ್ಯ ಸಿದ್ಧರೂಪ ಸಂಪೂರ್ಣ । ಅತರ್ಕ್ಯ ಆದಿಶಕ್ತಿ, ಶಕ್ತಿಘನ। ಪ್ರತ್ಯಕ್ಷ ಶಿವತತ್ವ ಗಹನ । ಸರ್ವಶಕ್ತಿಯುತ ಮಹಾಋಷಿ-ಮುನಿ ॥೩೨॥ ದೇವ, ದಾನವ, ಮಾನವಕಾರಣ । ಅಗಸ್ತ್ಯ -ತತ್ವಸಿದ್ಧ ಋಷಿ ಮಹಾನ್। ಸಾಕ್ಷಾತ್ ತ್ರಿದೇವರ ಸಘನ । ಮಾನಸ ಪುತ್ರರು ॥೩೩॥ (ಮಾನಸ ಸರೋವರ ತೀರದ ಮೇಲೆ ಹುಟ್ಟಿದವರು, ಅಂತೇ-ಮಾನ, ಮಾನ್ಯ ಮಾಂದಾರ್ಯ ಮತ್ತು ಮಾನಸ ಈ ಹೆಸರಿನಿಂದಲೂ ಅವರನ್ನು (ಅಗಸ್ತ್ಯರನ್ನು) ಸಂಬೋಧಿಸಲಾಗಿದೆ.) ಸಕಲ ಸಿದ್ಧರ ಸಿದ್ಧ। ಅಂತೇ ಅಗಸ್ತ್ಯ ಸಿದ್ಧೇಶ್ವರನೂ ಆದ। ಗುರುತಿಸುವರು ಸರ್ವ ಅವಗೆ ಶಕ್ತಿ ಪ್ರದ । ಸೃಷ್ಟಿ ನಿಯಂತ್ರಕನೆಂದೂ ॥೩೪॥ ಅಗಸ್ತ್ಯರ ಆಜ್ಞೆ ಪಂಚತತ್ವಮನ್ನಿಸುವವು । ದೇವ -ದಾನವರಿಗೂ ಶಿರೋಧಾರ್ಯ ಅವು। ಅಗಸ್ತ್ಯ ಪ್ರತ್ಯಕ್ಷ ಕರುಣಾ ಸಾಗರವು। ಮಾಯಾಶಕ್ತಿ ವಶಯಾರಿಗೆ ॥೩೫॥ ಸೃಷ್ಟಿಯನ್ನು ಮಾಡಲು ನಿಯಮಿತ । ಲೋಕ ಕಲ್ಯಾಣ ಸಾಧಿಸಲು ತ್ವರಿತ । ಭೌತಿಕ, ಆದಿ ಭೌತಿಕ ಸಾಮರ್ಥ್ಯಯುಕ್ತ । ಸಿದ್ಧಿಗಾಗಿ ತಪಿಸುವರು ॥೩೬॥ ಈ ಸಿದ್ಧ ಶಿರೋಮಣಿಯ ಅಧಿಕಾರ । ಅರಿವರು ವಿನಾಯಕ ಸ್ವರೂಪ-ಓಂಕಾರ । ಕಾರ್ತಿಕೇಯ, ನಾರದ ಋಷಿವರ । ಸರ್ವರಲ್ಲಿ ಪರ(ಶ್ರೇಷ್ಠ) ಅಗಸ್ತ್ಯ ! ॥೩೭॥ 'ವಶಿಷ್ಠ' ಬಂಧು ಅಗಸ್ತ್ಯರೇ ಮಾನವರಿಗೆ ಗತಿ । ಅವರಿಂದೇ ಮಾನವ ಹಿತದ ನಿಶ್ಚಿತಿ। ಅವರೇ ಪಾಲಿಸುವರು ಸಂಪ್ರತಿ। ಸಮಸ್ತ ಮಾನವ ಜಾತಿಯನ್ನು ॥೩೮॥ ಇಂದ್ರ, ಮರುತರನ್ನು ವಶ ಮಾಡಿಸಿ । ಅದ್ಭುತ ಋತುಚಕ್ರ

ನಿರ್ಮಿಸಿ । ವೈವಸ್ವತ  ಮನು ಯಥೋಚಿತ ಆರಂಭಿಸಿ । ಸೃಷ್ಟಿ ತತ್ವ ಪಾಲಿಸುವರು ।।೮೯।। ಅಗಸ್ತ್ಯ ಮಹಿಮೆ (ಇಹುದು) ಅಪರಂಪಾರ। ಬ್ರಹ್ಮ, ವಿಷ್ಣು, ಮಹೇಶ್ವರ ಸಾಕ್ಷಾತ್ಕಾರ (ಆಗಿಹ-ಅಗಸ್ತ್ಯರೇ) । ಸ್ವಂತ ಕಥಿಸುವರು ಈ ಮಹಿಮೆ ಪರ। ಅವರ ಆಜ್ಞೆಯಂತೇ ಬರಿಯುವೆನು ನಾನು ।।೯೦।। ಇದು ನನ್ನ ಸ್ವಂತದ್ದೇನೂ ಇಲ್ಲ । ತ್ರಿಕಾಲಜ್ಞ -ಪ್ರೇರಕ ಅಗಸ್ತ್ಯರದೇ ಎಲ್ಲ! । ಪಾದದಲಿ ಅನನ್ಯ ಶರಣ ನಾ ಅಬಲ । ಅವರೇ ಸಿದ್ಧನಾಥ ಸರ್ವ ।।೯೧।। ವೇದ, ಇತಿಹಾಸ, ಪುರಾಣ । ಹಾಡಿಹವು ಕಥಾ ಸೂತ್ರ .. ಗಾನ । ಯುಗಾನುಯುಗ ಕೊಡುತಿಹರು ದರ್ಶನ । ಮಾನವ ಕಲ್ಯಾಣ ಸಾಧಿಸಲು ।।೯೨।। ಯುದ್ಧ ಇಂದ್ರ -ಮರುತರಂಥ । ಕೌಶಲ್ಯದಿಂ ಬಿಡಿಸಿಹರು ಅಗಸ್ತ್ಯ ಸಮರ್ಥ । ಖ್ಯಾತ ಆಗಿಹರು ಸಮನ್ವಯ ಪಾಂಥಸ್ಥ।-ರೆಂದು ನಾಥ-ಅಗಸ್ತ್ಯರು ।।೯೩।। ಈ ಆಖ್ಯಾನದ ಮಹತಿ ಹೀಗಿಹುದು -।- ಆಪ್ತ ನೆಂಟರ ಸಂಘರ್ಷ ಮುಗಿವುದು । ದ್ವಂದ್ವ-ಜಗಳ ತೀರುವದು । ಒಂದೇ ಆಖ್ಯಾನ ಓದಿ ।।೯೪।। ಜೀವನ ಸುಸಹ್ಯ, ನಿಯಮಿತ ಆಗುವದು । ದ್ವೇಷಭಾವ ಮಾಯವಾಗುವದು । ಒಕ್ಕಟ್ಟಿನ ಅನುಭವ ಬರುವದು ಹೊಸ ಸೋಜಿಗದ ।।೯೫।। ಈ ಕಥೆ ಕೇಳಿದರೆ ಗಹನ । ರುಷ್ಟ ಮನುಷ್ಯ ಬಿಡುವ ಸಿಟ್ಟು ತನ್ನ । ಹಾರೈಸುವರು ಮಾಡಿ ಚಿತ್ತ ಪ್ರಸನ್ನ । ದಯತೋರಿ ಅಗಸ್ತ್ಯರು ।।೯೬।। ಅಮೋಘ ವಾಕ್ ಪಟುತ್ವ ಸಾಧಿಸುವದು । ಚಾತುರ್ಯ ಸಹಜ ಲಭಿಸುವದು । ತತ್ಕಾಲ ಮಧ್ಯಸ್ತಿಕೆ ಸಫಲಿಸುವದು । ಸಿದ್ಧ ಅಗಸ್ತ್ಯರ ಕೃಪೆಯಿಂದ ।।೯೭।। ಈ ಕಥೆಯ ಮಹಿಮೆ ಅದ್ಭುತ । ಅದೃಶ್ಯ ಶತ್ರು ಆಗುವರು ಗುಪ್ತ। ಮಾರ್ಗ-ಆಗಿ ಸರಳ ನಿರ್ವಿಘ್ನಯುಕ್ತ। ಯಶ ಬರುವದು ಬಾಗಲಲಿ।।೯೮।। ಕಥೆ ಓದಿದರೆ



ಮಧ್ಯಾನ್ಹದಲ್ಲಿ ।ಅನಿವಾರ್ಯ ಸಂಕಟ ಬರವು ಬಳಿ । ಶತ್ರು ಖಂಡಿತ ಮಿತ್ರರಾಗಿ ಮರಳಿ-।- ಅಪ್ಪುವರು ಪ್ರೇಮದಿಂ ।।೯೯।। ಅಗಸ್ತ್ಯರಿಗೆ  ಒಪ್ಪಿಸಿರಿ ಜೀವನ । 'ಆಜ್ಞೆ' ತಿಳಿದು ಮಾಡಿರಿ ಯತ್ನ । ಸಫಲ ಆಗುವವು ಯತ್ನ ಯಜ್ಞ। ಸಫಲತೆ ಕ್ರಮಿಸುವದು ಸನ್ಮಾರ್ಗ ।।೧೦೦।। ಇಹುದು ಇದು ಸೃಷ್ಟಿ ನಿಯಮನದ ಕಥಾ। ಪ್ರಪಂಚ ಆಗುವದು ಸುಖ-ದಾತಾ। ಅಗಸ್ತ್ಯರಿಹರು ಸಂಘರ್ಷ ಮೋಚಕ ತತ್ವತಾ।ದೃಢ ಶ್ರದ್ಧೆ ಬೇಕು।।೧೦೧।। ಅಗಸ್ತ್ಯರೇ ಮಾಡಿದರು ಪ್ರೇರಿತ । (ಅಂದರು) ''ಹೇಳು ಮಹಿಮೆ ಫಲಸಹಿತ। ಕೇಳುಗ (ಶ್ರೋತೃ) ಆಗಬೇಕು ಅನುಭೂತ । ಸಿದ್ಧೈಶನಿಹನು ಸಾಕ್ಷಿ ಸಕಲರಿಗೆ ''।। ೧೦೨।। ವೇದ, ಮಹಾಕಾವ್ಯ, ಪುರಾಣ। ಮಾಡಿಹವು ಹರ್ಷದಿಂ ಗುಣಗಾನ ।। ಮಾಡಿದ್ದಾರೆ ಸ್ವಯಂ ಆಗಸ್ತ್ಯರೇ'' ಕಥನ । ನಾನು ಕೇವಳ ಲೇಖಕನು ।।೧೦೩।। ಇತಿ, ದ್ವಿತೀಯೋಧ್ಯಾಯ ಸಮಾಪ್ತಃ।। ಓಂ ಶ್ರೀ ಮುನಿ, ಋಷಿ, ಸಿದ್ಧ, ಯೋಗಿ, ಅಗಸ್ತ್ಯಾರ್ಪಣಮಸ್ತು, ಅಸ್ತು । ಶುಭಂ ಭವತು ।

।। ಎರಡನೇ ಅಧ್ಯಾಯ ಸಮಾಪ್ತ ।।

෨෦

෨෧

॥ ಓಂ ॥

# ಅಗಸ್ತ್ಯ ಮಹಾತ್ಮ್ಯ

## ಮೂರನೇ ಅಧ್ಯಾಯ

॥ ಓಂ ಶ್ರೀ ಗಣೇಶಾಯ ನಮಃ ॥ ಓಂ ಸರಸ್ವತ್ಯೈ ನಮಃ ॥ ಓಂ ಶ್ರೀ ಅಗಸ್ತ್ಯ ನಮಃ ॥

ಓಂ ಶ್ರೀ ಗಿರಿಜಾತ್ಮಜ ಗಜಾನನ । ಸಿದ್ಧಿ ವಿನಾಯಕ ಭಗವನ್ । ಸಿದ್ಧ ಶಿವಗಣರಾಜ ಮಹಾನ್ । ಸರ್ವಾತ್ಮಕ ಸರ್ವೇಶ್ವರನೇ ॥೧॥ ಶಿವತತ್ವ ಸ್ವಯಂ ಸಿದ್ಧ । ಸರ್ವಾತ್ಮಕ ಆದ್ಯ ಪ್ರಸಿದ್ಧ । ಅವರಲ್ಲಿ ಸಿದ್ಧ ಪ್ರಥಮ ಇದ್ದ । ವಿನಾಯಕ ವಿಘ್ನಹರನೇ ॥೨॥ ಕಾರ್ತಿಕೇಯನು ನಿನ್ನ ಬಾಂಧವ ।'ಸ್ಕಂದ' ನಾಮದಿಂದ ಖ್ಯಾತ ಇದ್ದವ । ಅವನೂ ನಿನ್ನಂತೇ ಸಿದ್ಧಿ ಪಡೆದವ । ಅಗ್ರ-ಗಿರಿಜಾತ್ಮಕ ॥೩॥ ಮಿತ್ರ-ವರುಣರ ಪುತ್ರ ಅಗಸ್ತ್ಯನು । ಶಿವರೂಪ ನಿನ್ನ ಬಾಂಧವನು ॥ ಅಗಸ್ತ್ಯನು ಮಹಾಸಿದ್ಧಿ ಪ್ರತಾಪನು । ಅವನ ಹಿರಿಮೆ ಬಣ್ಣಿಸಲು ಶಕ್ತಿಕೊಡು ॥೪॥ ಶ್ರೀ ಅಗಸ್ತ್ಯರೇ ನೇಮಿಸಿಹರು ನನ್ನನ್ನು । ಈ ಸಿದ್ಧ ಶಿರೋಮಣಿಯ ವರ್ಣಿಸಲು ಹಿರಿಮೆಯನ್ನು । ಅಂತೇ ಬರೆಯುತಿಹೆನು ನಾ ಇನ್ನು । ಕುಲದೇವಿ ಅಂಬಾ, ಶ್ರೀ ಗುರುವಿಗೆ ನಮಿಸಿ ॥೫॥ ತ್ರಿದೇವರ ಆಶೀರ್ವಾದ ಲಭಿಸಿ । ಮಾನ, ಮಾಂದಾರ್ಯ ಅಗಸ್ತ್ಯ ಋಷಿ । ಸಿದ್ಧಿ ಯೋಗದಿಂ ಗರ್ವ ಭಂಗಿಸಿ । ಕಾರ್ಯ ತತ್ಪರರಾದರು ॥೬॥ ಬ್ರಹ್ಮದೇವರ ಮಾನಸ ಪುತ್ರ।



ಸಪ್ತರ್ಷಿಗಳಂತೇ ಶ್ರೇಷ್ಠತರ । ಅಗಸ್ತ್ಯರು, ಪರಮ ಕಾರ್ಯತತ್ಪರ-।-ರಲ್ಲಿ ಪಡೆದರು ಉಚ್ಚ ಸ್ಥಾನ ॥೭॥ ಭೂತ ಮಾತ್ರಗಳಲಿ, ಭೂಲೋಕದ-।-ಜನ ಇಹರು ಶತ್ರು, ಸ್ವಾರ್ಥ ಗರ್ವದ । ಅಂತೇ ಮರೆವು ಹೆಚ್ಚು-ಸ್ವ-ಸ್ವರೂಪದ। ಭೂಲೋಕದ ಜನರಲ್ಲಿ ॥೮॥ ಗರ್ವಿ-ಸ್ವಾರ್ಥಿ ರಾಕ್ಷಸರನ್ನು । ಉದರದಲ್ಲಿ ಜೀರ್ಣಿಸಿದ ಅಗಸ್ತ್ಯರನ್ನು । ದೇವರೂ ಹೋಲರು, ಯಾರೂ ಇನ್ನು-।-ಮುಂದೆಯೂ, ಕೃತಿ ಶೀಲತೆಯಲ್ಲಿ ॥೯॥ ಇಹುದು ಅಲೌಕಿಕ ಔದಾರ್ಯ ಅಗಸ್ತ್ಯರ। ಯಾರು ಸಾಕ್ಷಾತ್ ರುದ್ರರದೇ ಅವತಾರ । ಶಾಪಿಸಿ, ದಂಡಿಸಿದ ನಂತರ । ಕ್ಷಮಿಸುವರು ಸಪ್ರೇಮ॥೧೦॥ ಕ್ರೋಧ, ಗರ್ವ, ಸ್ವಾರ್ಥ, ವೈರ -।- ಇತ್ಯಾದಿಗಳ ಪ್ರಭಾವ ಇದ್ದರೂ, ಇವೆಲ್ಲರ । ಪರಾಭವ ಮಾಡುವರು, ಅಪಾರ-।-ಅದ್ಭುತ ಸಿದ್ಧಿಯಿಂದ ॥೧೧॥ ಕೃತಯುಗದಲ್ಲಿಯ ಕಥೆ ಗಹನ। ದಾನವರು ಕಾಡುತ್ತಿದ್ದರು ದೇವರನ್ನ। ಆಯಿತು ಸಂಗ್ರಾಮ ದಾರುಣ। ದೇವರು ಆದರು ತ್ರಸ್ತ ॥೧೨॥ ಉನ್ಮತ್ತ ವೃತ್ರಾಸುರ ದಾನವನು । ಮುತ್ತಿದನು ಸಕಲ ದೇವರನ್ನು । ಅಸ್ಥಿರ ಮಾಡಿದನು ಇಂದ್ರ-ಪದವನ್ನೂ । ಸುರರೆಲ್ಲ ಅಂಜಿದರು ॥೧೩॥ ದೇವರೆಲ್ಲ ಬ್ರಹ್ಮನಡೆ ಹೋದರು । ''ಚೆನ್ನ ದೇವರನ್ನು ಕಾಡುತಿಹರು -।- ನೀವು ನಿರ್ಮಿಸಿದ ದಾನವರು ! । ಇದೆಂಥ ಸೃಷ್ಟಿ ನಿಮ್ಮದು? ॥೧೪॥ ನಾವು ಬಂದಿಹೆವು ನಿಮಗೆ ಶರಣ । ಸಹಿತ ದೇವೇಂದ್ರ -ನಾರಾಯಣ । ದಯವಿಟ್ಟು ಮಾಡಿರಿ ನಮ್ಮ ರಕ್ಷಣ । ದಾರಿ ತೋರಿ ನಮಗೆ'' ॥೧೫॥ (ಬ್ರಹ್ಮದೇವ) ಅಂದರು, 'ಸಾಹ್ಯದಿಂದ ನಾರಾಯಣನ । ಮಾಡಿರಿ

‘ದಧೀಚಿ’ ಋಷಿಯ ಕಡೆ ಗಮನ । ಆಗುವದು ವೃತ್ರಾಸುರನ ದಮನ । ದಧೀಚಿಯ ಅಸ್ಥಿ ವಜ್ರದಿಂದ ’ ॥೧೬॥ ದಧೀಚಿ ಋಷಿ ಪರೋಪಕಾರಿ ಇದ್ದನು। ಅಂತರ್ಬಾಹ್ಯ ಉದಾರನಿಧಿ, ಸಿದ್ಧನಾದನು । ದೇವ ರಕ್ಷಣೆಗಾಗಿ ದೇಹವನ್ನು । ತ್ಯಾಗಿಸಲು॥೧೭॥ ತನ್ನ ದಿವ್ಯ ಅಸ್ಥಿಯ ದಾನ ಮಾಡಿದನು । ನಿರ್ಮಿಸಲು ವಿಶ್ವ ಕರ್ಮನಿಂದ ವಜ್ರಾಸ್ತ್ರವನ್ನು । ವಧಿಸಲು ವೃತ್ರಾಸುರನನ್ನು । ದೇವೇಂದ್ರರ ಕೈಯಿಂದ ॥೧೮॥ ಶ್ರೀ ಕೃಪೆಯಿಂದ ನಾರಾಯಣನ । ದಧೀಚಿಯದಾಯ್ತು ಉದ್ಧರಣ । ಸಾರ್ಥಕ ಆಯಿತು ತಪ ಸಾಧನ । ‘ಧನ್ಯ ಆದೆ!’ ಅಂದ- ದಧೀಚಿ ॥೧೯॥ ಆ ದಿವ್ಯಾಸ್ತ್ರದಿಂ ಇಂದ್ರನು । ವೃತ್ರಾಸುರರನನ್ನು ನಗುನಗುತ ಕೊಂದನು । ಅಂಜಿದ ಅಸುರರು ಸಮುದ್ರವನ್ನು । ಸೇರಿದರು ಅಡಗಲು ॥೨೦॥ ದಾನವರು ಇದ್ದರು ಅತಿ ಕ್ರೂರ । ಬಿಡಲಿಲ್ಲ ಅವರು ದೇವರ ವೈರ । ಸಂಧಿ ನೋಡಿ ಹೊರಬಂದು ಅಸುರ । ಕಾಡುತ್ತಿದ್ದರು ಸುರರನ್ನು ॥೨೧॥ ಮಾಡಿ ನರ, ಋಷಿಯರನ್ನು ತ್ರಸ್ತ । ದೇವ ಕಾರ್ಯದಲ್ಲಿ ಸತತ।- ಯಜ್ಞಗಳಾಗದಂತೆ ಸುಫಲಿತ । ಕಾಡಿದರು, ಇಂದ್ರನನ್ನೂ ॥೨೨॥ ಮತ್ತೆ ದೇವರಾದರು ಭಯಭೀತ । ಕಿಂ ಕರ್ತವ್ಯ ಮೂಢ, ಚಿಂತಾಗ್ರಸ್ತ । ಹರಿಗೆ ಮೊರೆ ಹೋದರು ಆಗಿ ವ್ಯಥಿತ । ‘ತ್ರಾಹೀ-ತ್ರಾಹೀ’ ಎನ್ನುತ ॥೨೩॥ ನಾವು ಮಾಡುತ್ತೇವೆ ಯಜ್ಞ-ಯಾಜನ ।ತಪಶ್ಚರ್ಯೆ ಮತ್ತು ಧರ್ಮಾಚರಣ । ದಾನವರು ಕೆಡಿಸುವರು ಶುಚಿ ಸಾಧನ । ಸಮುದ್ರದ ಹೊರಗೆ ಬಂದು ॥೨೪॥ ಮತ್ತೆ ಸಾಗರದಿ ಮಾಯ-ಆಗುವರು । ನಾವು ಉಪಾಯ ಮಾಡಲು ಅಸಮರ್ಥರು । ಅತಿ ಭಯಂಕರ ‘ಕಾಲಕೇಶ’ ಆದಿ ದಾನವರು । ಪೂರ್ಣ ತ್ರಸ್ತರಾಗಿಹೆವು ನಾವು ! ॥೨೫॥ ಶ್ರೀ ವಿಷ್ಣು



ಮಾಡಿ ಅಗಸ್ತ್ಯರ ಗುಣಗಾನ । ಅಂದರು, ‘ಹಿಡಿಯಿರಿ ಅಗಸ್ತ್ಯರ ಚರಣ । ಇಲ್ಲ ಮಾಡಲು ಸಾಗರ ಶೋಷಣ । ಬೇರೆ ಯಾರೂ ಸಮರ್ಥ ॥೨೬॥ ಶ್ರೀ ವಿಷ್ಣು ಮಾಡಿ, ‘‘ ಅಗ್ನಿ-ಮರುತ’ ಕಥನ । ಅಂದರು,‘‘ಅವರದೇ ಸಾಕ್ಷಾತ್ ರೂಪ ಅಗಸ್ತ್ಯನ । ಮಾಡಲು ದಾನವರ ಅಹಂಕಾರ ಹನನ। ಆಗಿದೆ ಅಗಸ್ತ್ಯರ ಅವತಾರ ॥೨೭॥ ಅಗಸ್ತ್ಯರದಿಹುದು ಉದರ ವಿಶಾಲ-।- ಧರಿಸಲು ಅಮರ್ಯಾದ ಸಾಗರ ಜಲ। ಆ ಸಿದ್ಧ ಋಷಿಯರಲ್ಲಿದೆ ಬಲ । ಅವರಿಗೇ ಶರಣ ಹೋಗಿರಿ॥೨೮॥ ಶಿವ ಪ್ರೇರಿಸಿದರು ಅಗಸ್ತ್ಯರನ್ನು । ಯಾರು ರಕ್ಷಿಸುವರು ಸುರ-ನರರನ್ನು । ಇಹುದು ಶಿವತತ್ವದ ಹಿರಿಮೆ ಚೆನ್ನು । ಅಗಸ್ತ್ಯ ರೂಪದಲ್ಲಿ ॥೨೯॥ ಅಗಸ್ತ್ಯರಿಹರು ಸಾಕ್ಷಾತ್ ಹರಿತತ್ವ । ಅಲೌಕಿಕ ಸಿದ್ಧಿ ಅವರಿಗೇ ಸಂಭವ। ಅವರಿಂದೇ ಪಾರಾಗುವರು ಜಲಸ್ಥ ಜೀವ । ಪಾಪ ಹತ್ತದು ಯಾರಿಗೂ ॥೩೦॥ ಮಾಡಿರಿ ಅಗಸ್ತ್ಯರ ಸ್ಮರಣ । ಹೋಗಿ ಕಾಶೀಕ್ಷೇತ್ರಕ್ಕೆ ತಕ್ಷಣ । ‘ಕಾಲಕೇಳ’ ಆದಿ ದಾನವರ ಕರ್ಮ ಕಥನ । ಮಾಡಿ ನಮ್ರ ಭಾವದಿಂದ ॥೩೧॥ ಸಾಕ್ಷಾತ್ ತ್ರಿದೇವ ಮೂರ್ತಿ ಅಗಸ್ತ್ಯರು । ಪ್ರತ್ಯಕ್ಷ ಸಿದ್ಧಿನಾಥರೇ ಅವರು ! । ಅತಿ ಉಗ್ರ ಹಾಗೇ ದಯಾವಂತರೂ । ಹೀಗೆ ಹೇಳಿದರು ಹರಿ, ನಾನಾ ಪರಿ ॥೩೨॥ ಇಂದ್ರರ ಸಹ ಸಮಸ್ತ ದೇವರು । ಅಗಸ್ತ್ಯರಿಗೆ ಅನನ್ಯ ಮೊರೆ ಹೋದರು । ಅಗಸ್ತ್ಯರೂ ಅತಿ ಉಗ್ರ ಆದರು । ದಾನವ-ದುಷ್ಟಕೃತ್ಯ ಅರಿದು ॥೩೩॥ ದೇವ, ಋಷಿ ಮಾನವ ಸಹಿತ । ಅಗಸ್ತ್ಯ ಬಂದರು ಸಾಗರ ಪ್ರತ । ವಂದಿಸಿ, ಆಗಿ ಅತ್ಯಂತ ವಿನೀತ । ಕ್ಷಮೆ ಯಾಚಿಸಿದರು ॥೩೪॥ ‘‘ತಾವು ಸಾಕಿದ್ದೀರಿ

ದಾನವರನ್ನು । ಕಾಡುತಿಹರು ದೇವ, ಋಷಿ, ಮಾನವರನ್ನು । ಅಂತೇ ಶರಣ ಬಂದೆನು ನಾನು । ನಿಮ್ಮ ಸಾಹ್ಯಕ್ಕಾಗಿ॥೩೫॥ ಮಾಡಿದರೆ ನಾನು ನಿಮ್ಮ ಶೋಷಣ । ತೋರದಿರಿ ನನ್ನೆಡೆ-ರೋಷವನ್ನ । ವಾ ಉಪಾಯ ಹೇಳಿರಿ ಅನ್ಯ, ಹನನ । ಮಾಡಲು ಉದರದಲ್ಲಿದ್ದ ದಾನವರ ॥೩೬॥ ತಾವು ಧರಿಸಿದ್ದೀರಿ ಪೃಥ್ವಿಯನ್ನು । ಯಾವುದು ಧರಿಸಿದೆ ತ್ರಿಲೋಕದ ಜೀವಿಗಳನು । ದೈತ್ಯ - ಮಾಡುತಿಹರು ವಿಧ್ವಂಸವನ್ನು । ಮಾನವ ಕಲ್ಯಾಣ ಕಾರ್ಯದ ॥೩೭॥ ತಾವು ಕೊಟ್ಟಿಹಿರಿ ದೈತ್ಯರಿಗೆ ಆಶ್ರಯ । ಅಂತೇ ಬಂದಿದೆ (ನಿಮ್ಮನು) ಅಟ್ಟಿಸುವ ಸಮಯ । ಸಂಗ ಮಾಡಿದರೆ ಪಾಪಿಯ। ದಂಡ ಪುಣ್ಯವಂತನಿಗೂ ನಿಶ್ಚಿತ '' ॥೩೮॥ ಕಡಲು ಅಂದಿತು, '' ಅಸುರರು ಶರಣಾಗತ । ಅಂತೇ ಸ್ಥಾನ ಕೊಟ್ಟೆ ಉದರದಿ ಸಾಂಪ್ರತ । ದೋಷವೇನು ನಮ್ಮ ಎಂಥ ? । ಹೇಳಿ ಶಿವಪುತ್ರರೇ ।'' ॥೩೯॥ ''ಶರಣನ ರಕ್ಷಣ' ಧರ್ಮ ನನ್ನ । ಇಹುದು ನನ್ನ ಬದಿ ಪಾತಾಳ ದಾರುಣ । ಹೇಗೆ ಮಾಡುವಿರಿ ದಂಡನೆಯನ್ನ? । ಅಸಾಧ್ಯ ಇದು ನಿಮಗೆ॥೪೦॥ ನೆಲದ ಮೇಲೆ ಬಂದಾಗ ದಾನವರು । ದಂಡಿಸಲಿ ಅವರನ್ನು ದೇವರು । ಮಾಡಕೂಡದು ಘೋರಕೃತ್ಯ ಅಗಸ್ತ್ಯರು। ವ್ಯರ್ಥ ಶಕ್ತಿ ವ್ಯಯದ ॥೪೧॥ ಮಾಡಿದರೂ ನಾನಾ ಪರಿ ವಿನಂತಿ । ಸಾಗರ ಮಾಡಹತ್ತಿತು ದರ್ಪೋಕ್ತಿ । ಕೇಳಿ ಅದನು ಅಂದರು ಅಗಸ್ತಿ। ''ರಕ್ಷಿಸು ನೀ ಸ್ವಂತ ನಿನ್ನನ್ನು ! ॥೪೨॥ ನೀ ಇರುವಿ ನಮ್ಮ ಜೀವನ । ಅಂತೇ ಪ್ರಾರ್ಥಿಸಿದೆ ಪುನಃ ಪುನ । ಬ್ರಹ್ಮ ಹುಟ್ಟಿಸಿಹನು ಜನರಿಗಾಗಿ ನಿನ್ನ । ಮರೆತಿದ್ದೀ ನೀ ಇದನ್ನೂ'' ॥೪೩॥ ಸಾಗರ ಅಂದಿತು



'ಸರ್ವಸಿದ್ಧ ನೀನು । ಅಗ್ನಿರೂಪ ಧರಿಸಿ ನನ್ನನ್ನು - ।- ಭಸ್ಮ ಮಾಡಿದೊಡೆ ಜೀವಗಳನು । ನಿನಗೆ ಪಾಪ ಹತ್ತೀತು' ॥೪೪॥ ಅಗಸ್ತ್ಯ ಅಂದರು, 'ನಿನಗೆ ಬೇಡ ಚಿಂತೆ, ಅದರ । ಸಿದ್ಧನಾಗು ಅಟ್ಟಲು ಸತ್ವರ । ಬಿಡು ದರ್ಪೋಕ್ತಿ 'ಎಲೆ ಸಾಗರ'। ಉಳಿಸು ಸ್ವಂತ ನಿನ್ನನ್ನು '' ॥ ೪೫॥ ವಂದಿಸಿ ಸರ್ವಸಿದ್ಧ ನಾಥನ । ವಿಸ್ತರಿಸಿದರು ಅಗಸ್ತ್ಯರು ತಮ್ಮ ತನ । ಅದು ವ್ಯಾಪಿಸಿತು ಸಂಪೂರ್ಣ ಗಗನ। ಭಯ ಚಕಿತರಾದರು ಪ್ರೇಕ್ಷಕರೆಲ್ಲ ॥೪೬॥ ವಿರಾಟರೂಪ ನೋಡಿ ಅಗಸ್ತ್ಯರ । ತ್ರಿದೇವ ಪಂಚತತ್ವಾದಿ ಸಮಸ್ತರ । ಚಿತ್ತ ಆದವು ಅವರತ್ತ ಸ್ಥಿರ । ಸಾಗರ ಅಂಜಿತು ಭಯಂಕರ ॥೪೭॥ ವಂದಿಸಿ, ತ್ರಿದೇವ, ನಾರದ ವಿನಾಯಕರನ್ನು । ಕಾರ್ತಿಕೇಯ, ಋಷಿಗಣವನ್ನು । ವಂದಿಸಿ, ಸಮಸ್ತ ದೇವ ಸಮುದಾಯವನ್ನು । ಅಗಸ್ತ್ಯ ಸಿದ್ಧರಾದರು ॥೪೮॥ ಅಂದರು, ' ಲೋಕ ಹಿತಾರ್ಥ ಸಾಗರವನ್ನು । ಕುಡಿಯುತ್ತೇನೆ. ಕ್ಷಮಿಸಿರಿ ನನ್ನನ್ನು । ' ಆಚಮನಕ್ಕಾಗಿ ಚಾಚಿ ಕೈಯನ್ನು । ಕುಡಿದರು ಸಾಗರವನ್ನು ॥೪೯॥ ಆಚಮನವೆಂಥದು ? ಮಹಾಪ್ರಲಯ !। ಲೋಕ ರಕ್ಷಣೆಗಾಗಿ ರಣ ಅತುಲನೀಯ । ಎಳೆದು ಪೂರ್ಣಸಾಗರ ಸಮುಚ್ಚಯ। ಮಾಡಿದರು ಆಚಮನ । (ಅಂಗೈಯಲ್ಲಿ ನೀರು ತಕ್ಕೊಂಡು ಕುಡಿಯುವ ಒಂದು ಧಾರ್ಮಿಕ ರೀತಿ-ವಿಧಿ) ॥೫೦॥ ಜೀವ ಸಂಪತ್ತಿಯ ಸಹ ವರ್ತಮಾನ । ಸಾಗರವ ಕುಡಿದರು ತಕ್ಷಣ। ಮಾಡಿ ದಾನವ-ಅಹಂಕಾರದ ಹನನ । ಲೀಲೆ ತೋರಿದರು ॥೫೧॥ ದೇವ ಸಮಸ್ತ ಮುಂದಾದರು । ದಾನವರನು ಭಯಭೀತ ಮಾಡಿದರು । ದಾನವರ ಗರ್ವ ದೂರ ಕಳಿಸಿದರು ।

ಮಹಾಯೋದ್ಧಾ ಅಗಸ್ತ್ಯರು ।।೫೨।। ದೇವ, ಋಷಿ, ಮಾನವರೆಲ್ಲ ಸ್ತುತಿಸಿದರು । ವಿರಾಟ್ ಸ್ವರೂಪದ ದರ್ಶನ ತಕ್ಕೊಂಡರು ।'' ಕಾಲಕೇಶಿ -ಕೇಶ ಕೇಶಿ 'ಸತ್ತರು' ಎಂದರು!, ''ಲವಲೇಶ ಉಳಿಯಲಿಲ್ಲ! '' ।।೫೩।। ಅಗಸ್ತ್ಯ ಸ್ಥಾಪಿಸಿದರು ಉದರದಿ ಸಾಗರ । 'ಸಿಂಧು ಸಮ್ರಾಟ' ಎಂದು ಆಯ್ತು 'ಜಯ ಜಯ'ಕಾರ । ಸಿಂಧು ಇಟ್ಟು ಸಜೀವ ಉದರ-।-ದಲ್ಲಿ ತೋರಿದರು ಸಿದ್ಧಿ ಚಮತ್ಕಾರ ।।೫೪।। ಸ-ತ್ರಿದೇವ ಋಷಿ ಮಾನವರು । ವಿನಾಯಕ ಸ್ಕಂದ ನಾರದರು। 'ಕಡಲಿಗೆ ಅಭಯ ಕೊಡಿ !' ಅಂದರು। - 'ಜೀವ ಸಂಪತ್ತಿಯ ಸಹ' ।।೫೫।। ಆಕಾಶ ವ್ಯಾಪ್ತ ಭವ್ಯ ಅಗಸ್ತ್ಯರು । ದಯೆ-ಔದಾರ್ಯ ತೋರಿದರು । ಶಿವನ ಸುಹಾಸ್ಯ ವಂದಿಸಿ, ವಿಸರ್ಜಿಸಿದರು । ಜೀವ ಸಹಿತ ಸಾಗರವನ್ನು ।।೫೬।। ಸಿಂಧು ವಿನಂತಿಸಿತು ಅಗಸ್ತ್ಯರನ್ನು । ''ಕ್ಷಮಿಸಿ ನನ್ನ ಅಪರಾಧವನ್ನು । ನಿಮ್ಮಲ್ಲಿ ಮೊರೆ ಬಂದಿಹೆನು ನಾನು । ಸಾಕಿರಿ ದಯವಿಟ್ಟು ।'' ।।೫೭।। ಸಾಗರಕೆ ಅಂದರು ಅಗಸ್ತ್ಯ-। ಕ್ಷಮಿಸಿ, ''ಕೊಡುತ್ತೇನೆ ಅಭಯ । ಜೀವ ಸಂಪತ್ತಿ ಸಹ ಈ ಪೃಥ್ವಿಯ । ಪಾಲಿಸು ವಿನಮ್ರನಾಗಿ ।।೫೮।। ಮಾತ್ರ ಇರಲಿ ಸದಾ ಸ್ಮರಣ । ಅಸಂಗದ ಸಂಗಕ್ಕಾಗಿ ನಿನ್ನ-। ಆಗುವದು ನೀರು ಉಪ್ಪಿನ। ಜನ ಕುಡಿಯರು'' ।।೫೯।। ಸಾಗರ ವಿನಂತಿಸಿತು ಪುನಃ ಪುನ । ''ಇಡದಂತೆ ಕ್ರೋಧಿತ ಮನ । ಉಃ ಶಾಪಕೊಟ್ಟು ಅಪರಾಧಿ-ನನ್ನ । ಪಾಲಿಸಬೇಕು'' ।।೬೦।। ಉದಾರ ಮೂರ್ತಿ ಅಗಸ್ತ್ಯಋಷಿ । ಶಿವ ತತ್ವವನ್ನು ಪ್ರಾರ್ಥಿಸಿ ।ಕೋರಿದರು -'ಹಚ್ಚದಿರಿ ಹೇ ಕೈಲಾಸ ವಾಸಿ । ಸಿಂಧು ಪ್ರಾಶನದ ಪಾಪ ನಮಗೂ( ಸಾಗರ ಮತ್ತು ನನಗೆ) ।।೬೧।। ಪ್ರಸನ್ನಚಿತ್ತರಾಗಿ ಶಿವಶಂಕರ । ನೋಡಿ ಅದ್ಭುತ ಕೃತಿ ಅಗಸ್ತ್ಯರ । ' ಗಂಗೌಘದಿಂ ಆಗುವದು



ನಿಬ್ಬಿಬ್ಬರ । ಪಾಪ ಕ್ಷಾಲನೆ!' ಅಂದರು ।।೬೨।। ಮಾತ್ರ ನೀ ಮಾಡು ಮಾರ್ಗ ದರ್ಶನ । ಭೂಪುತ್ರರಿಗೆ ನೀಡಿ ಸಹಾಯ ಘನ। ಗಂಗೆಯ ಪ್ರವಾಹದ ಸಿಂಚನ -।- ಮಾಡಿಸಿ ಭೂಲೋಕಕ್ಕೆ ।।೬೩।। ಸಂತೋಷಪಟ್ಟು ಸಿದ್ಧ ಅಗಸ್ತ್ಯರು । ತಮ್ಮ ಪೂರ್ವ ರೂಪ ಧರಿಸಿದರು । ವಂದಿಸಿದರು ಸಾಗರ ಸಮ್ರಾಟರು । ಚರಣ ಪೂಜಿಸಿ ಶಿವ-ಪುತ್ರರ ।।೬೪।। ಕಡಲಿಗೆ ಅಗಸ್ತ್ಯರು ಮಾಡಿದರು ನಿವೇದನ । 'ಮಾಡುತ ಇರಿ ಲೋಕ-ಕಲ್ಯಾಣ। ಮಾಡಿದರೆ ಅಧರ್ಮದ ಆಚರಣ। ವಿನಾಶ ಖಂಡಿತ' ।।೬೫।। ಸಾಗರ, ''ನಾವು ನಿಮ್ಮ ಆಜ್ಞಾಂಕಿತ । ಇರುವೆವು ತತ್ಪರ ಲೋಕಹಿತದಿ ರತ । ದಯ ತೋರಿಸುತ ಇರಿ ನಮ್ಮತ್ತ । ವಂದನೆ ಸ್ವೀಕರಿಸಿರಿ ।।೬೬।। ಭವಿಷ್ಯದಲ್ಲಿ ಪುತ್ರ ಭಗೀರಥ । ಪ್ರಯತ್ನದಿಂ ಗಂಗೌಘ ತರುವ ನಿಶ್ಚಿತ । ಅವಗೆ ಆಗಿ ಸಹಾಯ್ಯಭೂತ । ಪಾಪ ತೊಳೆಯಿರಿ ।।೬೭।। ಮಾಡಿ ಅಗಸ್ತ್ಯರು ಮಾರ್ಗದರ್ಶನ। ತರಿಸಿದರು ಭಗೀರಥನಿಂದ ಗಂಗೆಯನ್ನ । ಆಗಿ ಸಾಗರದ ಪಾಪ ಕ್ಷಾಲನ । ಆಯ್ತು ತೀರ್ಥ ।।೬೮।। ಕೃಪಾ ಪ್ರಸಾದದಿಂದ ಅಗಸ್ತ್ಯರ । ತೀರ್ಥ ಆಯಿತು ಸಾಗರ। ಸರ್ವ ತೀರ್ಥಗಳಲ್ಲಿ ಪರ। ಆಯಿತು ಸಾಗರ ಜಲ ।।೬೯।। ಸಾಗರ ಪ್ರಾಶನ, ಸಾಗರ ವಮನ। ಇವು ಅಗಸ್ತ್ಯರ ಲೀಲೆ ಘೋರ-ಘನ। ಮಾಡಲು ಪೂರ್ವ ಪಾಪ ಕ್ಷಾಲನ । ತಪ ಆರಂಭಿಸಿದರು ।।೭೦।। ಪ್ರವರಾ-ಮುಳಾ ಸಂಗಮೋತ್ತರ-।ದಲ್ಲಿಹ, ಗೋದಾ, ಗ್ರಾಮ ಖ್ಯಾತ ಅಪಾರ । ಗೋದಾ-ಪ್ರವರಾ ತೀರದ ಕ್ಷೇತ್ರ-।-ದಲ್ಲಿ ತಪಿಸ ಹತ್ತಿದರು ।।೭೧।। ಇಹುದು ಪ್ರವರಾ ಸಂಗಮ ತೀರ್ಥ। 'ದಕ್ಷಿಣ

ಕಾಶಿ’ ಎಂದು ವಿಖ್ಯಾತ। ಸಾವಿರ ವರ್ಷ ತಪ ಸಮಾಧಿಸ್ಥ-।- ಆಗಿ, ಋಷಿ ಸಾಧಿಸುವರು ॥೭೨॥ ನಾಶಿಕ-ಬ್ರಹ್ಮ ಗಿರಿಯ ಕ್ಷೇತ್ರ-।- ನೋಡಿ ರಮ್ಯ ಸುಂದರ । ಅನ್ನಾಯಿ ಪರ್ವತ ಪರಿಸರ-।-ದಲ್ಲಿ ತಪಿಸುವರು ॥೭೩॥ ಅನ್ನಾಯಿಯ ಅಪ್ರಭ್ರಂಶ-।-ರೂಪ, ಆಗಿದೆ ‘ಅನಕಾಯಿ’ ಬಹುಶಃ । ಇಲ್ಲಿಹುದು ಸದಾ ಶಕ್ತಿ-ಮಾತೆಯ ವಾಸ । ಸಾವಿರ ವರ್ಷ ನಿಂತು ತಪಿಸಿದ ॥೭೪॥ ಇಹುದು ಈ ಅನ್ನಾಯ ಪರ್ವತ। ‘ಅಗಸ್ತ್ಯ ದುರ್ಗ’ ವೆಂದು ಖ್ಯಾತ। ಮಾಡದುದಕೆ ಸಿದ್ಧಿ ಪ್ರಾಪ್ತ। ಪಾವನ ಸ್ಥಳ ॥೭೫॥ ಅಮೃತ ಮಂಥನದ ಸಮಯ । ಮಾಡಿ ಮಾರ್ಗದರ್ಶನ ಅಗಸ್ತ್ಯ, । ಇಡಿಸಿ ರತ್ನಗಿರಿಯಲ್ಲಿ ಸರ್ವರತ್ನ-ವೈಡೂರ್ಯ । ಅದ್ಭುತ ಪೂಜೆ ಮಾಡಿದರು ॥೭೬॥ ರತ್ನಗಡದಲ್ಲಿ ‘ಅಮೃತ ವಾಹಿನಿ’ ಸರಿತಾ॥ ಹುಟ್ಟಿಸಿದರು ಮಹೇಶ ಅಗಸ್ತ್ಯಾರ್ಥ ಸರ್ವಥಾ। ಅಗಸ್ತ್ಯ ಉಳಿದರು ಅಲ್ಲಿ ತತ್ವತಾ । ಚಿರಕಾಲ -ಸೂಕ್ಷ್ಮರೂಪ ॥೭೭॥ ‘ಅಗಸ್ತ್ಯಪುರಿ’ ನಾಮಕ ಪರಿಸರ । ‘ಇಗತಪುರಿ’ ಇದು ಅಪಭ್ರಂಶ ಅದರ । ದಂಡಕಾರಣ್ಯದಲ್ಲಿ ಸಹ್ಯಾದ್ರಿ ಹತ್ತಿರ । ನೆಲೆಸಿಹುದು ॥೭೮॥ ಮಾಡಿ ಸಿದ್ಧೇಶ್ವರನ ಸ್ಥಾಪನ। ಮಾಡಿದರು ಅಗಸ್ತ್ಯಪುರ ನಿರ್ಮಾಣ । ‘ಅಕೋಲೆ’ ಅದರ ನಾಮಾಭಿಧಾನ। ಅಗಸ್ತ್ಯರ ಚಿರ ವಾಸವೆಲ್ಲಿ ॥ ೭೯॥ ಭಾರತದ ಸಹ್ಯಗಿರಿ ಕಂದರ-।-ದಲ್ಲಿ ಧನ್ಯ ‘ಅಕೋಲ ನಗರ !’। ಎಲ್ಲಿ ವಾಸ ಚಿರ ಅಗಸ್ತ್ಯರ । ಸಾಕ್ಷಾತ್ಕಾರ ದಾಯಕ ॥೮೦॥ ಋತು ಚಕ್ರದ ಮೇಲೆ ಧ್ಯಾನ-।-ಇಟ್ಟ ಅಗಸ್ತ್ಯಾಶ್ರಮ ಸಿದ್ಧಸ್ಥಾನ । ಮಾಡುವದು, ಮನೋಕಾಮನೆ ಪೂರ್ಣ । ತಕ್ಕೊಳ್ಳಿರಿ ಭಕ್ತರೇ ಅನುಭವ ॥೮೧॥ ಸರ್ವ ಪಾಪಗಳ ಕ್ಷಾಲನ । ಭೂಲೋಕದ ಸಂವರ್ಧನ-ರಕ್ಷಣ। ಕ್ರೋಧ,



ಗರ್ವ, ಸ್ವಾರ್ಥ, ವೈರ ಆದಿಗಳ ನಿರ್ದಾಲನ । ಮಾಡುವರು ಅಗಸ್ತ್ಯರು ॥೮೩॥ ವೃತ್ರ, ಕಾಲಕೇಶಿಗಳಂಥ ದಾನವ ಹನನ। ಅಗಸ್ತ್ಯರ ಸಾಹ್ಯದಿಂದೇ ಆಯ್ತು ಪೂರ್ಣ । ದೇವರಿಗಾಗಿ ಸಿಂಧು ಪ್ರಾಶನ -।- ದಂಥ ಅತರ್ಕ್ಯ ಕೃತಿ ॥೮೪॥ ದೇವೇಂದ್ರ ಅಗಸ್ತ್ಯರ ಮಿತ್ರ । ಪರ್ಜನ್ಯ ರೂಪದ ಸುರ । ಶಿವತತ್ವ ಪ್ರೇರಕ ಸರ್ವರ । ಸೃಷ್ಟಿ ಉತ್ಪತ್ತಿಗಾಗಿ ॥೮೪॥ ಇದ್ದೂ ಮೈತ್ರಿಘನ ಅಗಸ್ತ್ಯರ। ಇಂದ್ರನ ವರ್ತನೆ ಇತ್ತು ವಿಚಿತ್ರ । ಅಂತೇ ಸಂಕಟದಲ್ಲಿ ವಾರಂವಾರ ।ಬೀಳುತ್ತಿದ, ಅಹರ್ನಿಶ ॥೮೫॥ ಸೋಮವಂಶಿ ಆಯುಸ। ಸುತ ಅರಸ ‘ನಹುಷ’ ನಿದ್ದ ಪುಣ್ಯವಂತ । ಅವಗೆ ಆಯ್ತು ಇಂದ್ರಪದ ಪ್ರಾಪ್ತ। ಈ ಸುರಸ ಕತೆ ಕೇಳಿರಿ ॥೮೬॥ ಸುರ-ಅಸುರರದಾಯ್ತು ರಣ ।ಎಲ್ಲಿ ಬಂತು ‘ತ್ವಾಷ್ಟಾಪುತ್ರ’ ‘ತ್ರಿಶಿರನ ಮರಣ । ಇದನು ನೋಡಿ ದೇವೇಂದ್ರನ ಮನ । ಕುಸಿಯಿತು ॥೮೭॥ ಹೋಗಿ ಒಂದು ಕೆರೆಯಲ್ಲಿ ಇಂದ್ರನು । ಮುಚ್ಚಿಕೊಂಡು ಇಟ್ಟ ತನ್ನನ್ನು । ಬಿಟ್ಟು ವಿಲಾಸಿಪದವನ್ನು । ಬೈರಾಗಿ ಆಗಿ ಕುಳಿತ ! ॥೮೮॥ ದೇವ ಲೋಕದ ಅರಸ ಇಂದ್ರನು । ಇಡೀ ವಿಶ್ವವನ್ನೇ ಆಳುವನು । ನೋಡಿ ಸ್ವರ್ಗ ‘ಅರಸಹೀನ’ ಆದದ್ದನ್ನು । ಮರುಗಿದರು ಸರ್ವದೇವ॥೮೯॥ ರಾಜ್ಯ ಆಗಿದಿರಬೇಕಿದ್ದೊಡೆ ಅನಾಥ । ಅರಸಬೇಕು ಬಲವಂತ। ಅದಕ್ಕಾಗಿ ದೇವಗಣ ಸಮಸ್ತ। ಕುಳಿತರು ವಿಚಾರಿಸಲು ॥೯೦॥ ಏಕಮತದಿಂದಾಯ್ತು ವಿಚಾರ । ಒಪ್ಪಿಸಲು ‘ನಹುಷ’ಗೆ ರಾಜ್ಯಭಾರ। ಇಹನು ಬಲಶಾಲಿ ಪುಣ್ಯತರ । ಹಿತಕಾರಕ ಸರ್ವರಿಗೂ ॥೯೧॥ ನಹುಷನು ಕೇಳಿ ವಿನಂತಿ ದೇವರ । ಮಾಡಿದ ಇಂದ್ರಪದದ

ಸ್ವೀಕಾರ । ಸೌಖ್ಯದಿಂ ತುಂಬಿತ್ತು ಅಪಾರ । ವಿಲಾಸ ಭೋಗಗಳಿಂದ ಸ್ವರ್ಗ ।।೯೨।। ನಹುಷ ವಾಸನಾಧೀನನಾದನು। ಇಂದ್ರಪತ್ನಿ 'ಶಚಿ'ಯನ್ನು । ನೋಡಿ ತಡೆಯದಂತಾದನು । ಉನ್ಮಾದದಿಂದ ।।೯೩।। ಶಚಿ ಇದ್ದಳು ಮಹಾಪತಿವ್ರತೆ। ಅವಳಿಗೆ ಹತ್ತಿತು ಚಿಂತೆ । ಕೇಳಿದಳು ಏನು ಮಾಡಬೇಕಂತೆ । ದೇವೇಂದ್ರನಿಗೆ ।।೯೪।। ಮಾಡಲು ವಿಷಯ ದೈತ್ಯನ ದಮನ। ಇಂದ್ರಾಜ್ಞೆಯಂತೆ 'ಶಚಿ' ಕಳಿಸಿದಳು ದೂತನ । ಹಚ್ಚಿದಳು ಋಷಿಯರನ್ನು ಪಲ್ಲಕ್ಕಿ ಎತ್ತಲು ನಹುಷನ।।೯೫।। ಐಶ್ವರ್ಯ ತೋರಲು ಶಚಿಯ। ಪಲ್ಲಕ್ಕಿಗೆ ಹೂಡಿದರು ಋಷಿ ಮಹಾಶಯ । ಋಷಿಗಳು ಹೊತ್ತರು ಪಲ್ಲಕ್ಕಿಯ । ಪ್ರಾರಬ್ಧ ನಹುಷನ । ।೯೬।। ಆಜ್ಞೆಯಂತೆ ದೇವೇಂದ್ರರ । ಅಗಸ್ತ್ಯರ ಸಹ ಸರ್ವ ಋಷಿವರ। ಬಂದರು ಪಲ್ಲಕ್ಕಿ ಎತ್ತರು ಸತ್ವರ । ಮದಾಂಧ (ನಹುಷ) ಕುಳಿತ ಪಲ್ಲಕ್ಕಿಯಲ್ಲಿ ।।೯೭।। ಅಗಸ್ತ್ಯ ಗಿಡ್ಡರಿದ್ದರು ಎಲ್ಲರೊಳಗೆ । ಅಂತೇ ಪಲ್ಲಕ್ಕಿ ಬಾಗಿತು ಕೆಳಗೆ । ''ನಾಗ್ಯಾ-ಬೇಗ ನಡಿ !' ಎಂದು ಅವರಿಗೆ । ಲತ್ತೆ ಹಾಕಿದನು ನಹುಷ ।।೯೮।। ಒದಿಕೆ ಹತ್ತುತ್ತಲೇ ಹೆಗಲಿಗೆ ಅಗಸ್ತ್ಯರ । ಆದರು ಕ್ರೋಧದಿಂ ಅವರು ಉಗ್ರ। ನಹುಷಗೆ ಕೊಟ್ಟರು ಶಾಪ ಭಯಂಕರ । 'ಸರ್ಪ ಆಗುವಿ ಪೃಥ್ವಿಯ ಮೇಲೆ' ।।೯೯।। ನಹುಷ ನಶೆಯಿಂದ ಎಚ್ಚರಾದನು। ಅಹಂಕಾರ, ಉನ್ಮಾದ ಮರೆತನು । ಪಶ್ಚಾತ್ತಾಪ ದಗ್ಧನಾದನು । ಪಲ್ಲಕ್ಕಿಯಿಂದ ಇಳಿದ ।।೧೦೦।। ವಂದಿಸಿದನು ಅಗಸ್ತ್ಯರ ಚರಣ । ನಾನಾ ಪರಿ ಮಾಡಿದ ಕ್ಷಮಾ ಯಾಚನ । ಶಿವರೂಪರು ಕ್ಷಮಿಸಿ ಅವನನ್ನ । ಉಃಶಾಪ ಕೊಟ್ಟರು ನಹುಷಗೆ ।।೧೦೧।। 'ವಂಶಜರೇ ಉದ್ಧರಿಸುವರು ನಿನ್ನ । ಅಲ್ಲಿಯತನಕ ಸರ್ಪಯೋನಿ ಇನ್ನ। ಮಹಾಕಾಯ 'ಅಜಗರ' (ಹೆಬ್ಬಾವು) ಆಗಿ ವನ-ವನ।



ತಿರುಗುತ್ತಿರು ನಹುಷಾ!' ।।೧೦೨।। (ವನವಾಸದ ಕಾಲದಲ್ಲಿ) ನಹುಷ ನುಂಗಿದ್ದನು ಭೀಮನ । ಆಗ ಪಾಂಡವರದಾಯಿತು ಮಿಲನ ।ಧರ್ಮ ಉತ್ತರಕೊಟ್ಟ, ಪ್ರಶ್ನೆಗಳ ಕಠಿಣ । ಸಂತುಷ್ಟ ನಹುಷನಾದ ಶಾಪಮುಕ್ತ।।೧೦೩।। ಅಗಸ್ತ್ಯರು ಕೆಡಿಸುವರು ಅಹಂಕಾರ । ತಾಯಿಯಾಗಿ ಕುಡಿಸುವರು ಕ್ಷೀರ । ಮಾಡುವರು ಜೀವನದ ಉದ್ಧಾರ । ಶರಣಾಗತರ ।।೧೦೪।। ಮಾಡಲು ಘೋರ ಸಂಕಟ ಹನನ। ಮಾಡಿರಿ ಶುದ್ಧ, ಶ್ರದ್ಧಾಯುಕ್ತ ಮನ। ಮಾಡಿ ಅಗಸ್ತ್ಯ ಕಥೆಯ ವಾಚನ । ಸಂಕಟ ನಿವಾರಿಸಲು।।೧೦೫।। ಸಂಕಟವನ್ನು ನಿವಾರಿಸುವರು । ಉದ್ದಂಡ ಪ್ರಸಾದ ಕೊಡುವರು । ಜೀವನದ 'ಕಲ್ಯಾಣ' ಮಾಡುವರು ।ಭಯ ಹರಿಸಿ ।।೧೦೬।। ಲೋಕ ಹಿತಕ್ಕಾಗಿ ಆಗಿಹುದು ಅವತಾರ। 'ಸತ್-ತತ್ವ' ರಕ್ಷಣಾರ್ಥ ಅಗಸ್ತ್ಯರ । ಕಳೆಯಲು ಸ್ವಾರ್ಥ, ವಾಸನಾ, ಅಹಂಕಾರ । ಅಗಸ್ತ್ಯ ಓಡಿ ಬರುವರು ।।೧೦೭।। ಅಗಸ್ತ್ಯರು ದಾಟಿಸಿದರು ದೇವರನ್ನು। ಮೃತ್ಯುಲೋಕಕ್ಕೆ ಕೊಟ್ಟರು ಅಮೃತವನ್ನು । ವಧಿಸಿ ಅಹಂಕಾರಿ ದೈತ್ಯರನ್ನು । ಉದ್ಧರಿಸಿದರು ಅವರನ್ನೂ ।।೧೦೮।। ಅಮೃತ-ಮಂಥನದ ಕಥೆ ಇಹುದು ಅದ್ಭುತ । ಘೋರ ಸ್ಪರ್ಧೆ ಜರುಗಿತು ಅಮೃತ ಪ್ರೀತ್ಯರ್ಥ । ಮಂಥನ ನಡೆಯಿತು ದೀರ್ಘಕಾಲ ಅಭೂತ । ದೇವ ದಾನವರಲ್ಲಿ।।೧೦೯।।ನಾರದ ಅಂದರು ಇಂದ್ರನ ಬಳಿ । 'ಸುರಾಸುರರ ಸಮುದ್ರ ಮಂಥನದಲ್ಲಿ । ವಿಜಯಕ್ಕಾಗಿ ಅಗಸ್ತ್ಯರ ಸಹಾಯ ತಕ್ಕೊಳ್ಳಿ । ಯಾರ ದಾಸನಿಹನು ಸಾಗರ ।।೧೧೦।। ದೇವ ಮತ್ತು ದಾನವ ಇಬ್ಬರದೂ ।

ಅಗಸ್ತ್ಯರಲ್ಲಿ ಶ್ರದ್ಧೆ ಇಹುದು । ಸಕಲರ ಮಸ್ತಕ 'ನತ'ಆಗುವದು । ಅಗಸ್ತ್ಯರ ಚರಣದಲ್ಲಿ' ।।೧೧೧।। ಅಗಸ್ತ್ಯರ ಕಡೆ ಓಡಿದರು ದೇವರು । ನಾರದರಿಂದ ಈ ಸುದ್ದಿ ಕೇಳಿದರು ದೈತ್ಯರು । ಅವರೂ ಶೀರ್ಘ ಹೋದರು । ಅಗಸ್ತ್ಯರ ಆಶೀರ್ವಾದಕ್ಕಾಗಿ ।।೧೧೨।। ಅಗಸ್ತ್ಯರು ಅಂದರು ದೇವ ದಾನವರಿಗೆ , । ''ಅಮೃತದ ಆಶೆ ಇಹುದು ಎಲ್ಲರಿಗೇ ।। ರತ್ನಗಳಿಹವು ಸಾಗರದಿ ಬಗೆ ಬಗೆ । ಅವನ್ನೂ ತಕ್ಕೊಳ್ಳಿರಿ ನೀವು । ೧೧೩।। ಸಮುದ್ರದಿಂದ ನವರತ್ನ ಲಭಿಸಲು । ನಿಮ್ಮ ಬಲ-ಯತ್ನ ಉಪಯುಕ್ತ ಬಲು । ಸಾಗರದ ಕ್ಷಮತೆ 'ರತ್ನ ನಿರ್ಮಿತಿ' ಬೆಳೆಸಲು। ಸಹಾಯ ಆಗುವದು ।।೧೧೪।। ದೇವ-ದಾನವ ಯುದ್ಧದಲ್ಲಿ ನಾನು । ಸಾಗರವನ್ನು ವ್ಯರ್ಥ ದಂಡಿಸಿದ್ದೆನು । ಸಂಧಿ ಲಭಿಸಿದೆ ಹಿಂದಿರುಗಿಸಲು ಅದನು। ನನಗೆ ಅನಾಯಾಸ!'' ।।೧೧೫।। ಅಗಸ್ತ್ಯರ ವಿಚಾರ ಪ್ರದರ್ಶನ । ಇಬ್ಬರಿಗೂ ಒಪ್ಪಿತು ತಕ್ಷಣ । ಅಂದರು 'ಮಥಿಸಲು ಯೋಗದಾನ। ಕೊಡಿರಿ ತಾವೂ ಸತ್ವರ ।।೧೧೬।। ಅಗಸ್ತ್ಯ ಅಂದರು, 'ಹೇ ಶಿಷ್ಯ ರತ್ನಾಕರ, । ನೀನು ಆಗಿ ಅತ್ಯಂತ ಉದಾರ । ಮಾಡು ಪೃಥ್ವಿಯನು 'ರತ್ನ -ಭಂಡಾರ' । ದಿವ್ಯ -ಕೃಪಾ ಶಕ್ತಿಯಿಂದ '।।೧೧೭।। ಆಜ್ಞೆಯಂತೆ ಗುರು-ಅಗಸ್ತ್ಯರ। ಕಾರ್ಯತತ್ಪರನಾದ ರತ್ನಾಕರ (ಸಾಗರ)। ಹರಡಿದ ಅಮೂಲ್ಯ ರತ್ನ ಸತ್ವರ । ಪೃಥ್ವಿಯ ಮೇಲೆ।।೧೧೮।। ಸಾಗರನು ಅನೇಕ ವಿಧ ರತ್ನಗಳನು । ಆರೋಗ್ಯದಾಯಿ ವನಸ್ಪತಿಗಳನು। ವಜ್ರ-ಮತ್ತು ವೈಡೂರ್ಯ ಚೆನ್ನು । ಪೂರೈಸಿದನು ।।೧೧೯।। ಹೊರಗೆ ಚಿಮ್ಮಿದವು ಅಸಂಖ್ಯ-ರತ್ನ । ದೇವ ದಾನವರಲ್ಲಿ ಹೊತ್ತಿತು ರಣ।ರತ್ನ ಎತ್ತಲು ನಿಲ್ಲಿಸಿದರು ಮಥನ । ದೇವ-ದಾನವ ಇಬ್ಬರೂ ।।೧೨೦।। ನಾರದ ಮುನಿ ಅಂದರು, ''ಮಾಡಿದರೆ ಹೀಗೆ ।



ಅಮೃತ ದೊರಕದು ನಿಮ್ಮ ಕೈಗೆ । ಅಮೃತ ಬರುವತನಕ ಹಾಗೇ । ಮಥನ ನಡೆಸಿರಿ ಭರದಿಂದ ।।''೧೨೧।। ದೇವ ದಾನವ ಕೇಳಿದರು ಅಗಸ್ತ್ಯರನ್ನು । ''ಹೇಳಿರಿ ನಾವು ಮಾಡಬೇಕು ಏನು ? । ನಿಮ್ಮ ಮಾರ್ಗದರ್ಶನದಿಂದೇ ಇನ್ನು। ಮಥನ ಆದೀತು ಸಫಲ'' ।೧೨೨।। ಅಗಸ್ತ್ಯ 'ರತ್ನ ರಚಿಸಿರಿ ತೊಡೆಯ -।- ಮೇಲೆ ಸಾಲಾಗಿ ಸಹ್ಯಗಿರಿಯ । ಪೂಜೆ ಮಾಡಿರಿ ಶಿವ-ಪಾರ್ವತಿಯ -।- ಸಮಕ್ಷ, ದೇವ ದಾನವರೆಲ್ಲ'' ।।೧೨೩।। ಅಗಸ್ತ್ಯರು ಹೇಳಿದಂತೆ ರತ್ನ-ಗಡ। ರಚಿಸಿದರು ಮನವಾರೆ ಪ್ರಚಂಡ। ಹಲಾಹಲ ಮತ್ತು ಅಮೃತ ಕೊಡ । ಬಂದವು ಕ್ರಮವಾಗಿ ।೧೨೪।। ಹಲಾಹಲ ಬಂದ ಮೇಲೆ ಹೊರಗೆ । ಅಂದರು, ಇನ್ನು ಅರ್ಚಿಸುವದು ಹೇಗೆ ? । ಸುಡುತ್ತಿದೆ ಇದು ಕೆಂಡದ ಹಾಗೆ ।। ಮಾತ್ರ ಉಪಯುಕ್ತ ಇದು ಸರ್ವರಿಗೂ ।।೧೨೫।। ಅಗಸ್ತ್ಯ, 'ಮಾಡಿರಿ ಶಿವನಿಗೆ ಕಥನ । ಅವನೇ ಸರ್ವಸಾಕ್ಷಿ-ಶಕ್ತಿಮಾನ । ಮಹೇಶರ ವಿನಾ ಈ ವಿನಾಶಕಾರಿ ವಿಷವನ್ನ । ಜೀರ್ಣಿಸುವರ್‍ಯಾರು ? ।।೧೨೬।। ದೇವ ದಾನವ ಪ್ರಾರ್ಥಿಸಿದರು ಶಿವನ। ಶಿವ ನೋಡಿದರು ಅಗಸ್ತ್ಯ ನಾರದನ । ಶಿರಬಾಗಿಸಿ ಮಾಡಿದರು ನಿವೇದನ,। 'ಎಲ್ಲ ಜ್ಞಾತ ನಿಮಗೆ' ।।೧೨೭।। ಕೊನೆಗೆ ಪ್ರಕಟವಾಯ್ತು ಅಮೃತ ಕಲಶ । ದೇವ-ದಾನವರಾದರು ಅವಸರ ವಶ । ವಿನಂತಿಸಿದರು ಅಗಸ್ತ್ಯ ನಾರದ-ಗಣೇಶ-।- ಶಿವಗೆ ಕಲಶ ಪೂಜಿಸಲು ।೧೨೮।। ಕಲಶ ಪೂಜೆಯ ನಂತರ ನಾರದ । ಅಂದರು ಮಾನವರಿಗೂ ಕೊಡಿ ತೀರ್ಥ ಪ್ರಸಾದ।ಸುರಾಸುರನರ ಹೀಗೆ ಬೇಡ ಭೇದ । ಅಮೃತ ಹಂಚಿರಿ ಎಲ್ಲರಿಗೂ ।।೧೨೯।। ದೇವ -ದಾನವ ಈ ಇಬ್ಬರ ।

ನೋಡಿ ಅಧೀರ -ಅವಸರ । ‘ಕೊಡು ನರರಿಗೂ ಅಮೃತ ಸತ್ವರ !’ ಅಂದರು ಕಲಶಕ್ಕೇ ಮಹೇಶರು॥೧೩೦॥‘ಶಿವತತ್ವಧನ್ಯ’ ಅಂದರು ಅಗಸ್ತ್ಯ ।‘ಅಮೃತ ರೂಪ ತಾಳಿ ಉಳಿಯಿತು ನಿತ್ಯ ।‘ಅಮೃತ ವಾಹಿನಿ’ ನಾಮಕ ನದಿಯ । ಉಗಮವಾಯ್ತು ರತ್ನಗಡದಲ್ಲಿ ॥೧೩೧॥ ಅಗಸ್ತ್ಯ ಗಣೇಶರಿಂದ ಪೂಜೆ ನೆರೆಗಿತು । ನಾರದರ ಪೌರೋಹಿತ್ಯ ಲಭಿಸಿತು । ರತ್ನೇಶ್ವರ, ಅಮೃತೇಶ್ವರರ ಸ್ಥಾಪನೆ ಆಯಿತು । ಪ್ರಕಟಿಸಿತು ಶಿವತತ್ವವು ॥೧೩೨॥ ಪಾರ್ವತಿ ರೂಪಧರಿಸಿ ಕಳಸೂಬಾಯಿಯ । ಕೌತುಕದಿಂದ ಪುತ್ರ ಅಗಸ್ತ್ಯ ಕೃತಿ-ವಿಸ್ಮಯ । ಅವಲೋಕಿಸಿ ಹರ್ಷ ಪ್ರತ್ಯಯ-।- ಪಡೆದು ಅಂದಳು ॥೧೩೩। ‘‘ವತ್ಸಾ, ಲೋಕಹಿತ ನಿನಗೆ ಅನಿವಾರ್ಯ-।- ಅಮೋಘ ಜಲ ನಿರ್ಮಿತಿಯ । ಗುದ್ದಲಿಯಿಂದ ಪರ್ವತ ಭೇದಿಸಿ ಸೌಕರ್ಯ-।- ಕೊಡುವಿ ಪ್ರವಾಹಕ್ಕೆ ॥೧೩೪॥ ನೀ ಪಾಲಿಸು ಪ್ರಜೆ ನನ್ನ । ಪೂರೈಸಿ ಜಲ, ಆರೋಗ್ಯ, ಅನ್ನ । ವಾಸಿಸುವಿ ತುಷ್ಟಿಸಿ ಪ್ರಜಾಜನ । ಸಂಚರಿಸಿ ತ್ರಿಲೋಕ ॥೧೩೫॥ ರತ್ನಗಳ ವಿತರಣೆ ಆಯಿತು। ದೇವರಿಗೆ ಅಮೃತ ಲಭಿಸಿತು । ಅಸುರ ‘ರಾಹು’ಗೆ ಶಿಕ್ಷೆ ಆಯಿತು । ಕಪಟಕ್ಕಾಗಿ ॥೧೩೬॥ ದೇವೇಂದ್ರಾದಿ ಸರ್ವದೇವ। ನಮಿಸಿದರು ಅಗಸ್ತ್ಯ ವಿನಾಯಕ, ಶಿವ, । ಕಾರ್ತಿಕೇಯ ನಾರದರು, ನೋಡಿದರು ಸೋಜಿಗವ । ಮೋಹಿನಿರಾಜರ ॥೧೩೭॥ ಅರ್ಧನಾರಿ ನಟೇಶ್ವರರ ಸಮ । ವಿಷ್ಣು ಧರಿಸಿದರು ಮೋಹಿನೀ ರೂಪ ಅಪ್ರತಿಮ । ಶಿವ ಕೃಪೆಯಿಂ ಹುಟ್ಟಿಸಿದರು ಶ್ರೀ ವಿಷ್ಣು ಭ್ರಮ । ದುಷ್ಟ ದಾನವರಲ್ಲಿ ॥೧೩೮॥ ಸಾಗರದಲ್ಲಿ ಆಯಿತು ಮಂಥನ । ಸೈಹ್ಯಾದ್ರಿಯಲ್ಲಿ ರತ್ನಗಳ ವಿತರಣ । ಆಯ್ತು ಅಮೃತ-ವಾಹಿನಿಯ ತಟಸ್ಥಾನ । ನಿರ್ಮಲ ನಿಧಿ-ನಿವಾಸ । ೧೩೯॥



ಅಮೃತವಾಹಿನಿ ಆಯಿತು ವಿಖ್ಯಾತ ।ಗಂಗಾ-ಗೋದಾ (ಸಂಗಮ) ಮೀಲಿತ । ಪವಿತ್ರನದಿ ಆಗಿ ಮಹಾ ಪ್ರವಾಹಿತ । ಜಿಗಿಯಿತು ಸಾಗರದಿ ॥೧೪೦॥ ಅಗಸ್ತ್ಯರ ಮಹತ್ಕಾರ್ಯ ಇಹುದು -।- ಸ್ವಯಂಸಿದ್ಧ, ಲೋಕ ಹಿತದ್ದು । ಸೇವಾ ಶಕ್ತಿ,ಮಹತ್ಕಾರ್ಯ ಇಹುದು-।-ಸ್ವಯಂಸಿದ್ಧ, ಲೋಕ ಹಿತದ್ದು । ಸೇವಾ, ಶಕ್ತಿ, ಬುದ್ಧಿಯ ಐಕ್ಯ ಇದು । ಕಾರ್ಯ ಸಾಧಿಸಲು ॥೧೪೧॥ ಸಮುದ್ರ ಮಂಥನದ ಕಥೆ ಇಹುದು ಅದ್ಭುತ । ಅದಕ್ಕೂ ಅಗಸ್ತ್ಯ ಕಥೆ ಅತಿ ಅದ್ಭುತ । ಇಟ್ಟು ಸ್ವಂತದ ಅಸ್ತಿತ್ವ ಗುಪ್ತ । ಮಾಡುವರು ಚಮತ್ಕಾರ ॥೧೪೨॥ ಇದು ಶಿವ-ಪಾರ್ವತಿಯರದೇ ಕಾರ್ಯ ಘನ । ಅಗಸ್ತ್ಯರಿಂದ ಆಗುತ್ತದೆ ಪೂರ್ಣ । ಶಿವಸ್ವರೂಪ ಇದ್ದುದೇ ಕಾರಣ । ಅಗಸ್ತ್ಯ ಋಷಿಯರು ॥೧೪೩॥ ಅಗಸ್ತ್ಯರ ಕಥೆ ಇದ್ದರೂ ಅದ್ಭುತ । ಅದು ಇಲ್ಲ ಕೇವಲ ಕಲ್ಪನಾ ಸಂಭೂತ । ಸೃಷ್ಟಿ ಸಂತುಲನ, ಸತ್-ತತ್ವ ರಕ್ಷಣಾರ್ಥ। ಸದಾ ತತ್ಪರ ಅಗಸ್ತ್ಯರು ॥೧೪೪॥ ಅಕೋಲೆ ಗ್ರಾಮ ಅಗಸ್ತ್ಯಾಶ್ರಮದಲ್ಲಿ । ಕುಳಿತು ಏಕಾಗ್ರ ಚಿತ್ತದಿಂ ಕಥ ಓದಿದಲ್ಲಿ । ಸಂಕಟ ಓಡುವವು ಕ್ಷಣದಲ್ಲಿ । ಆಗಿಲಾಭ ಅಮೂಲ್ಯ ॥೧೪೫॥ ತಕ್ಕೊಳ್ಳಿರಿ ಇದರ ಅನುಭೂತಿ। ಸಂಕಲ್ಪ ಮಾಡಿ ಸ-ಪ್ರೀತಿ। ತೋರಿ ಶ್ರದ್ಧಾಯುಕ್ತ ಅನನ್ಯ ಭಕ್ತಿ । ಅನುಭವಿಸಿರಿ ಅಗಸ್ತ್ಯ ಕೃಪೆ ॥೧೪೬॥ ಬಿಟ್ಟು ವಿಕಲ್ಪಗಳನ್ನು ವಿವಿಧ। ಶರಣು ಹೋಗಿರಿ, ಆಗಿ ಸಿದ್ಧರ ಚರಣ ಬದ್ಧ । ನಡೆಯದು ಕಾರ್ಯ ಇಡೀ ವಿಶ್ವದ । ಅವರ ಆಜ್ಞೆಯ ವಿನಾ ॥೧೪೭॥ ಯಥೇಚ್ಛ ನಿಸರ್ಗ ಸಂಪತ್ತಿ ಭೋಗಿಸಲು । ಶತ್ರುಗಳನು ನಿರ್ವಂಶ ಮಾಡಲು । ಅಗಸ್ತ್ಯರಿಗೇಬೇಕು ಶರಣ ಹೋಗಲು।

ನಿಶ್ಚಿಂತ ಮನದಿಂದ ||೧೪೮|| ಯಾರು ಈ ಅಧ್ಯಾಯದ ಮಹತಿ ಕೇಳುವರು | ಅಮೃತ ಸಾಗರದಲ್ಲಿ ಎರೆವರು ಅವರೆಲ್ಲರೂ | ಪ್ರತ್ಯಕ್ಷ ಎಲ್ಲ ದೇವರೇ ದರ್ಶನ ಕೊಡುವರು |ಅಗಸ್ತ್ಯರಿಗೆ ||೧೪೯|| ವಾಚಕರದಾಗುವದು ಉದ್ಧಾರ| ಆಗಿ ಸುಖೋಪಭೋಗ ಅಪಾರ| ರಾಜ್ಯ ಮಾಡುವರು ಹಿತಕರ, ನಿರಂತರ | ಶಿವೈಕ್ಯ ಪಡೆದು ||೧೫೦|| ಶಿರೋಮಣಿ ಸರ್ವಸಿದ್ಧರ | ಶಿವರೂಪ ಅಗಸ್ತ್ಯ ಮುನಿವರ | ಪಂಚತತ್ವಗಳು ಆಜ್ಞೆಯಲ್ಲಿ ಅವರ | ಲೋಕ ಹಿತಕಾರಿ ||೧೫೧|| ಅಗಸ್ತ್ಯರ ಆಜ್ಞೆಯಿಂದ ಸತ್ಯ ಬರಿವೆನು || ತಕ್ಕೊಳ್ಳಿರಿ ನೇರವಾಗಿ ಪ್ರಚೀತಿಯನ್ನು | ವೇದ ಪುರಾಣ, ಇತಿಹಾಸ ಕಾವ್ಯಕ್ಕೂ ನಾನು | ಭಿನ್ನ ತತ್ವಸತ್ ಕಥಿಸುವೆನು ||೧೫೨|| ಅಗಸ್ತ್ಯರ ಚರಣದಲ್ಲಿ ಏರಿಸಿ ನನ್ನನ್ನು | ಯುಕ್ತ ಲೋಕಹಿತ ಸಾಧಿಸುತಿಹೆನು | ಮಂಡಿಸಿದ್ದೇನೆ ಸ್ಪಷ್ಟ ಪರತತ್ವಚೆನ್ನು | ಅಗಸ್ತ್ಯರ ಕೃಪೆಯಿಂದ ||೧೫೩|| ಓಂ ತತ್-ಸತ್-ಸಿದ್ಧ ಮುನಿ, ಋಷಿ, ದೇವ ಅಗಸ್ತ್ಯಾರ್ಪಣಮಸ್ತು ಅಸ್ತು || ಶುಭಂ ಭವತು ||

|| ಮೂರನೇ ಅಧ್ಯಾಯ ಸಮಾಪ್ತ ||

॥ಓಂ॥

# ಅಗಸ್ತ್ಯ ಮಹಾತ್ಮ್ಯ

## ನಾಲ್ಕನೇ ಅಧ್ಯಾಯ

॥ ಓಂ ಶ್ರೀ ಗಣೇಶಾಯ ನಮಃ ॥ ಓಂ ಸರಸ್ವತ್ತ್ಯೈ ನಮಃ ॥ ಓಂ ಶ್ರೀ ಅಗಸ್ತ್ಯ ನಮಃ ॥

ಓಂ ಶ್ರೀ ಗಣೇಶಾಯ ನಮಃ । ಶ್ರೀ ಕರವೀರ ನಿವಾಸಿನಿ ಅಂಬಾಬಾಯಿ ಕುಲದೈವತಾಯೈ ನಮಃ ।। ಶ್ರೀ ಗುರವೇ ನಮಃ ।

ಓಂ ಶ್ರೀ ಋಷಿ, ಮುನಿ,ಸಿದ್ಧ ಅಗಸ್ತ್ಯ ನಾರಾಯಣೇ ನಮಃ । ಸಕಲ ದೇವತಾಯೈ ನಮಃ ॥

ಇನ್ನು ವಿವಾಹ ಕಥೆ ಅದ್ಭುತ । ಸಂಸಾರ ದೊರೆಯಲು ವ್ಯವಸ್ಥಿತ । ಶಿವ-ಪಾರ್ವತಿ ವಿವಾಹ ಜ್ಞಾತ-।- ಆಗಲಿ ಸೃಷ್ಟಿಚಲನಕ್ಕಾಗಿ ।೧॥ ಮಾತ್ರ ಶಿವ-ಪಾರ್ವತಿ ವಿವಾಹದ ಸಮಯ । ಒಂದು ಪ್ರಸಂಗ ಬಂತು ಅಪೂರ್ವ ಘಟನೆಯ । ಪೃಥ್ವಿ ತೂಗಾಡಿತು , ಆದವು ಭಯ-।- ಭೀತ ಮೂರೂ ಲೋಕ ।೨॥ ಸರ್ವರು ಅಂದರು, 'ಪ್ರಲಯ ಬಂದಿತು । ಶಿವ-ಪಾರ್ವತಿಯ ವಿವಾಹ ಸಮೀಪಿಸಿತು । ಪ್ರತ್ಯಕ್ಷ ಶಿವ-ತತ್ವಕ್ಕೂ ಅನಿಸಿತು, । 'ಪೃಥ್ವಿಯ ಮೇಲೆ ಸ್ಥೈರ್ಯ ಬೇಕು!' ।೩॥ ಈ ಶುಭಲಗ್ನ ಹಿಮಗಿರಿ ಯೋಜಿಸಿದ್ದನು । ಆಮಂತ್ರಿಸಿದ್ದ ಸರ್ವ ಸುರಾಸುರ- ನರರನ್ನೂ । ಋಷಿ ಮುನಿಗಣ ಅಗಸ್ತ್ಯರನ್ನೂ ।ಕಾರ್ಯ ನಿರ್ವಿಘ್ನವಾಗಲು ।೪॥ ನಿಮಂತ್ರಿಸಿದ್ದ ಅಖಿಲ ಭೂತ ಮಾತ್ರರನ್ನು ।



ಶಿವಗಣಸಹ ವೃಷಭರನ್ನೂ । ಬ್ರಹ್ಮ ವಿಷ್ಣು, ಗಣಾಧಿಪತಿಯರನ್ನೂ । ಕಾರ್ಯ ಸಿದ್ಧಿಗಾಗಿ ।೫॥ ಕೂಡುತ್ತಲೇ ಸಮಸ್ತ ತ್ರೈಲೋಕ -ಭೂತ । ಪೃಥ್ವಿ ಆಗ ತೊಡಗಿತು ಕಂಪಯುತ । ತೂಗ ತೊಡಗಿತು ವಿಶ್ವವೇ ಸಮಸ್ತ । ಕಳಚಿದವು ಗಿರಿ-ಶಿಖರ ।೬॥ ಸಮುದ್ರ ಉಗ್ರವಾಯಿತು ಅತ್ಯಂತ । ಅಂಜಿದವು ಭೂತ ಮಾತ್ರ ಸಮಸ್ತ । ಶಿವನೆಡೆ ಓಡಿದವು ಆಗಿ ಭಯಗ್ರಸ್ತ । ಚೀರುತ, 'ಪಾಹಿಮಾಮ್ (ಉಳಿಸಿರಿ ನಮ್ಮನ್ನು)' ।೭॥ ಶಿವ ಪಾರ್ವತಿಯರಿಗೆ ಆಯಿತು ಸೋಜಿಗ । 'ಎಂಥ ಲೀಲೆ ಇದು ಸೃಷ್ಟಿಯ ಈಗ ?' । ಅಂದನು ಅಂಜಿ ಮನದಿ ಮಾವ ಹಿಮನಗ, । 'ನಿರ್ವಿಘ್ನ ಆಗಲಿ ಲಗ್ನ!' ।೮॥ ಶಿವನಿಗೆ ಬಂದು ಶರಣ । ಎಲ್ಲರೂ ಕೋರಿದರು ಕರುಣೆಯನ್ನ । 'ಉಳಿಸಿರಿ ಈ ಪೃಥ್ವಿ ದಯಾಘನ !... । ವಿನಾಶದಿಂದ।೯॥ ಅಂದರು ಶಿವ, ''ಹಿಮರಾಜ ತಪ್ಪು ಮಾಡಿದರು । ಮನೆಗೆ ಮೂಲೋಕಗಳನ್ನೇ ಕರೆದರು । ಅಂತೇ ಪೃಥ್ವಿ ಆಯ್ತು ಅಸಮಾನ ಹೇಗಾದರೂ-।- ಸಾಧಿಸಬೇಕು ಸಮತೋಲ ।೧೦॥ ಹಿಮಗಿರಿಯ ಉದ್ದೇಶ ಇದ್ದರೂ ಶುದ್ಧ । ಇದ್ದಿತು ದರ್ಪ ಅದಕೆ ಅಹಂಕಾರದ ! ಆಮಂತ್ರಿಸಿ ಎಲ್ಲರನ್ನು ತ್ರೈಲೋಕದ । ದೊಡ್ಡಸ್ತನ ಮೆರೆಸುವ ।೧೧॥ ದೇವ-ದಾನವ, ಭೂತ ಮಾತ್ರರು । ಹಿಮಾಲಯದ ಸಹ ಶಿವನ ಪ್ರಾರ್ಥಿಸಿದರು । 'ಸತ್ವರ ಉಪಾಯ ಮಾಡಿರಿ' ಅಂದರು । ಕಾರ್ಯ ನಿರ್ವಿಘ್ನವಾಗಲು ।೧೨॥ ಗಿರಿರಾಜ ಕಳವಳಿಸಿ ಅತ್ಯಂತ, । 'ತ್ರೈಲೋಕ್ಯ ಆಗುತ್ತದೆ ಸಾಗರದಿ ಲುಪ್ತ' । ಕರುಣೆಯಿಂದ ಗಿರಿರಾಜನ ಹಸ್ತ । ಹಿಡಿದರು ಮಹಾದೇವರು ।೧೩॥ ಸರ್ವಲೋಕಗಳಿಗೆ ಅಭಯ ನೀಡಿದರು । ಸುಪುತ್ರ ಅಗಸ್ತ್ಯರನ್ನು ಕರೆದರು । 'ಇರುವಿ ಸಿದ್ಧ ಮುನಿ ನಿಜದ' ಅಂದರು ।

ಪ್ರತಾಪಿ ಮಹಾಯೋಗಿಗೆ ॥೧೪॥ ಸಮಕ್ಷ ಪ್ರಕಟಿಸಿದರು ಶಿವರೂಪ ಅಗಸ್ತ್ಯರು । ಕೃಪಾವಂತ ಶಿವ ಆಜ್ಞೆ ಮಾಡಿದರು। 'ಸಮತೋಲ ಮಾಡು' ಅಂದರು । ಮುಂದೆ, 'ದಕ್ಷಿಣವನ್ನು ತೂಗಿಸು !' ॥೧೫॥ ಅಗಸ್ತ್ಯನೇ ನಿನ್ನ ಕರೆದರು ಹಿಮರಾಜರು । ಸಂಕಟದಲ್ಲಿ ಬಿದ್ದಂತೆ ಕಾಣುವರು । ವಿವಾಹದ ಕಾರಣ ನಿಮಿತ್ತ ಆದರು। ಸರ್ವವಿನಾಶಕ್ಕೆ॥೧೬॥ ಅಗಸ್ತ್ಯರು ನಿರಾಶ ವಶರಾದರು । ಶಿವ-ಪಾರ್ವತಿಯ ನೋಡದಾದರು । ಪೂರ್ಣವಾಗಲು ಶಿವನ ಪ್ರಾರ್ಥಿಸಿದರು। ಮನೋಕಾಮನೆ ॥೧೭॥ ಮಹಾದೇವರು ನುಡಿದರು 'ಹೇ ಅಗಸ್ತ್ಯ ಬಿಡು ನಿನ್ನ ಈ ನೈರಾಶ್ಯ। ಕೊಡುವೆ ವರ ತಕ್ಷಣ ಪ್ರಕಟನೆಯ । ನಿನ್ನ ಸಮಕ್ಷ ॥೧೮॥ ಬೇಕಾದಾಗ ಮಾಡು ಸ್ಮರಣ । ಕೊಡುತ್ತೇವೆ ಅವಿಲಂಬ ದರ್ಶನ । ಪೂರೈಸುವೆವು ಮನದ ಇಚ್ಛೆಯನ್ನ । ಹತ್ತು ಕಾರ್ಯಕ್ಕೆ ಬೇಗ ॥೧೯॥ ಅಗಸ್ತ್ಯ ಮಾಡು ಪರಾಕ್ರಮ । ತೋರು ವಿಶ್ವವ್ಯಾಪಕ ರೂಪ ನಮ್ಮ । ಮಹಾಸಿದ್ಧಿ-ಪರಾಕ್ರಮದಿಂ ಅನುಪಮ। ಸ್ಥಿರಿಸು- ಪೃಥ್ವಿಲೋಕ ॥೨೦॥ ಶಿವಾಜ್ಞೆ ಮನ್ನಿಸಿ ಅಗಸ್ತ್ಯರು । ದಕ್ಷಿಣ ದಿಕ್ಕಿಗೆ ಬಂದರು । ಪೋಥಿಯಲಿ ಗಿರಿಯಲ್ಲಿ ಆರಂಭಿಸಿದರು । ತಪ ಸಾಧನೆಯನ್ನು ॥೨೧॥ ಅಗಸ್ತ್ಯರು ವಿರಾಟರೂಪ ಧರಿಸಿ । ಪ್ರತ್ಯಕ್ಷ ಶಿವ-ರೂಪ ಪ್ರಕಟಿಸಿ । ಮುಳುಗುವ ಹಿಮಾಲಯ ಎತ್ತಿಸಿ । ದಕ್ಷಿಣ ಭೂಮಿ ಸಾಕಿದರು ॥೨೨॥ ಶಿವತತ್ವ ಇಹುದು ಶಕ್ತಿಮಾನ । ಧರಿಸಿ ಅಗಸ್ತ್ಯರೂಪವನ್ನ । ಸಂತುಲಿತ ಮಾಡಿ ಸೃಷ್ಟಿಯ ಚಾಲನ । ರಕ್ಷಿಸಿತು ಭೂತ ಮಾತ್ರ ॥೨೩॥ ಅಗಸ್ತ್ಯರು ಶಿವರೂಪ ಪರಿಪೂರ್ಣ । ಕೊಡಿಸಿ ತ್ರಿದೇವ-ಪಂಚತತ್ವಗಳನ । ಆಯಿತು ಅಗಸ್ತ್ಯ ಶಕ್ತಿಯ ಜನನ। ಲೋಕ ಕಲ್ಯಾಣಕ್ಕಾಗಿ॥೨೪॥ ಹಿಮಾದ್ರಿಯಲ್ಲಿ



ಶಿವನಿದ್ದನು । ಪೋಥಿಯಿಲಿಯಲ್ಲಿ ಅಗಸ್ತ್ಯನು । ಆಳುವರು ಉತ್ತರ-ದಕ್ಷಿಣವನ್ನು । ಅಸೀಮ ಶಿವತತ್ವ ಯುಕ್ತ॥೨೫॥ ದಕ್ಷಿಣದಲ್ಲಿ ಆಳಿಕೆ ಅಗಸ್ತ್ಯರ ಸಿದ್ಧ। ಉತ್ತರದಲ್ಲಿ ಶಿವತತ್ವದ । ಎರಡೂ ಏಕರೂಪ ವರಪ್ರದ । ಶಿವೈಕ್ಯಾನುಭೂತ॥೨೬॥ ಮಾಡಿ ಋತುಚಕ್ರ ಸ್ಥಾಪಿತ । ಪೃಥ್ವಿ ಮಾಡಿಸಿ ಸಂತುಲಿತ । ದೇವದಾನವ ಮಾನವಾದಿ -ಭೂತ । ಸ್ಥಿರಿಸಿದರು ಭೂಲೋಕದಿ ॥೨೭॥ ಹಾಗೇ ವಿಂಧ್ಯ ಕಥೆ ಅದ್ಭುತ । ಭೂ ಸಂತುಲನಕ್ಕಾಗಿ ವಿಖ್ಯಾತ । ವಿಂಧ್ಯ ಅಗಸ್ತ್ಯರ ಶಿಷ್ಯ ಜ್ಞಾತ । ಅಗಸ್ತ್ಯರ ತಪಸ್ಥಾನ ॥೨೮॥ ವಿಂಧ್ಯ ಮತ್ತು ಮೇರು ಪರ್ವತ । ವಾದಿಸುತ್ತಿದ್ದರು ಯಾರು ಶ್ರೇಷ್ಠ ಅಂತ । ಮೇರು ಅಂದ, 'ಸೂರ್ಯ ಮಾಡುವನು ಸತತ । ನನ್ನ ಪ್ರದಕ್ಷಿಣೆ ॥೨೯॥ ವಿಂಧ್ಯ ನಿರಾಶ ಆದನು । ಮತ್ಸರದಿಂದ ಉರಿದನು । ಶಾಪಿಸಿ ಸೂರ್ಯನಿಗೆ ಅಂದನು, । 'ಮಾಡು ನನ್ನ ಪ್ರದಕ್ಷಣೆ '॥೩೦॥ ಪ್ರದಕ್ಷಣೆ ನಿರಾಕರಿಸಿದ ಸೂರ್ಯನು । ವಿಂಧ್ಯ ಕ್ರೋಧಿತನಾಗಿ ಅಂದನು । 'ಅಹಂಕಾರ ಮುರಿದು ಮಾಡುವೆನು । ಶರಣು ಬರುವಂತೆ '॥೩೧॥ ಮುರಿಯಲು ಸೂರ್ಯನ ಅಹಂಕಾರ । ವಿಂಧ್ಯನೇ ತಾಳಿದ ಗರ್ವ ಅಪಾರ । ಬೆಳೆಯ ತೊಡಗಿದ ಅಸೀಮ ಎತ್ತರ । ಅಡ್ಡಿಸಿದ ರವಿಯ ಪ್ರದಕ್ಷಿಣೆ ॥೩೨॥ ಸೂರ್ಯ ಭಯಂಕರ ಕ್ರೋಧಿಸಿದ । ನಿರ್ಭತ್ಸನೆ ಮಾಡ ತೊಡಗಿದ। ವಿಂಧ್ಯ ತಿಲಮಾತ್ರ ನಿಲ್ಲಿದಾದ । ಬೆಳೆ ನಿಲ್ಲಿಸಲು ॥೩೩॥ ಸೂರ್ಯನು ತಿಳಿಸಿ ಹೇಳಿದನು । 'ಬಿಡು ನೀ ನಿನ್ನ ದುರಾಗ್ರಹವನ್ನು । ಧಡ್ಡತನದ ಸ್ಪರ್ಧೆ ಇರದು ಚೆನ್ನು । ವಿನಾಶವೇ ಖಂಡಿತ ಇದರಿಂದ' ॥೩೪॥ ಬದಲಿಸಲಿಲ್ಲ

ವಿಂಧ್ಯನ ಮನ । ಸೂರ್ಯ ಪ್ರಾರ್ಥಿಸಿದ ಇಂದ್ರನ । ವಿಂಧ್ಯನಿಗೆ ದೇವೇಂದ್ರರು ಕೊಟ್ಟರು ಬೋಧನ । ಮಾತ್ರ ವಿಂಧ್ಯ ಕೇಳಲಿಲ್ಲ ॥೩೫॥ ಸೂರ್ಯನೊಂದಿಗೆ ಎಲ್ಲ ದೇವರು । ಬ್ರಹ್ಮರಿಗೆ ಶರಣು ಹೋದರು । ನೀವೇ ಸೃಷ್ಟಿಯ ಜನಕರು । ನೀವೇ 'ತಂಟೆ' ತಡೆಸಿರಿ ॥೩೬॥ ಬ್ರಹ್ಮ ಅಂದರು, 'ಅಗಸ್ತ್ಯರಿಹರು ವಿಂಧ್ಯನ ಗುರು । ತ್ರಿದೇವರ ಸಮ ವಿಖ್ಯಾತರು । ಸೃಷ್ಟಿ ಸಂತುಲನದ ಕಾರ್ಯ ಮಾಡುತಿಹರು । ಅಮೋಘ ಲೋಕ ಹಿತದ ॥೩೭॥ ದೇವರೆಲ್ಲ ಹೋದರು ಅಗಸ್ತ್ಯರಿಗೆ ಶರಣ। ಕೇಳಿ ಸಮಸ್ಯೆ, ಅಗಸ್ತ್ಯರ ಕಥನ-।- ಹೀಗೆ, 'ಆಜ್ಞಾಪಿಸುವೆ ಶಿಷ್ಯೋತ್ತಮನ । ವಿವೇಕ ತೋರಲು॥೩೮॥ ವಿಂಧ್ಯನಿದ್ದ ಅಗಸ್ತ್ಯರ ಶಿಷ್ಯ ಘನ । ತ್ರಿಕಾಲಜ್ಞ, ಆರೋಗ್ಯ ಸಂಪನ್ನ । ಅಗಸ್ತ್ಯರ ಆಜ್ಞೆಯಂತೆ ಧಾರಣ-।- ಮಾಡಿದ್ದ ದಿವ್ಯ ಔಷಧಿ॥೩೯॥ ವಿಂಧ್ಯನಿಗೆ ತಿಳಿಯಿತು ಈ ವೃತ್ತ । ಅಗಸ್ತ್ಯ ಬರುತಿಹರು ಇತ್ತ । ಅವರ ಆಜ್ಞೆ ಪಾಲಿಸಬೇಕು ತ್ವರಿತ । ದಿವ್ಯ ಫಲ ಲಭಿಸಲು ॥೪೦॥ ಲೋಕ ಕಲ್ಯಾಣಕಾರಿ ಸದ್ಗುರು। ಅಗಸ್ತ್ಯ ಬಾಗಿಲಲ್ಲಿ ಬಂದರು । ವಿಂಧ್ಯರು ಸಾಷ್ಟಾಂಗ ನಮಿಸಿ ಅಂದರು । ಆಜ್ಞೆ ಮಾಡಿರಿ ಗುರುವರ್ಯರೇ!'' ॥೪೧॥ ವಿಂಧ್ಯನನ್ನು ನೋಡಿ ಅಗಸ್ತ್ಯರ -।- ತುಂಬಿ ಬಂದಿತು ಕಂಠ ಅಪಾರ । ಪ್ರಸನ್ನ ನಾ ನಿನ್ನ- ಮೇಲೆ -ಪುತ್ರ , । ಬೇಡು ನೀ ಏನನ್ನೂ ॥೪೨॥ ಕೇಳಿ ಅಗಸ್ತ್ಯರ ಭಾಷಣ। ನಾಚಿತು ವಿಂಧ್ಯನ ಅಪರಾಧಿ ಮನ। ನಿಮ್ಮ ಆಜ್ಞೆ ನನಗೆ ಪ್ರಮಾಣ । ಸಾದರ ನಾನು ನಿಮಗೆ ! ॥೪೩॥ ''ವಿಂಧ್ಯ ರಾಜಾ, ಶಿಷ್ಯೋತ್ತಮ । ಅಮೋಘ ಔಷಧಿ ಧಾರಕ ಅನುಪಮ । ತಪಸ್ಯಾ ಸಹಾಯಕ ಮಮ। ಬಿಡು ದುರಾಗ್ರಹ ನಿನ್ನ ॥೪೪॥ ಬಿಟ್ಟೊಡೆ ನೀ ದುರಾಗೃಹವನ್ನ । ಸೃಷ್ಟಿ ಆದೀತು ಸ್ಥಿರ ತಕ್ಷಣ । ಆದಾವು



ನಿಯಮಿತ ನಿಶಿ- ದಿನ । ನಿನ್ನ ವಿವೇಕಿ ವರ್ತನೆಯಿಂದ ॥೪೫॥ ಮಹಾಜ್ಞಾನಿ ಇರುವಿ ನೀನು । ಹಿತಕಾರಕ ಕಾರ್ಯ ಮಾಡವನು । ಬಿಟ್ಟು ವ್ರಥಾ ಅಭಿಮಾನವನ್ನು । ಆಗು ನಮ್ರ, ಉಪಕಾರಿ ॥೪೬॥ ಕೇಳಿ ಅಗಸ್ತ್ಯರ ಬೋಧ। ಅವರ ಶೌರ್ಯ ಕರ್ತೃತ್ವ ನೆನೆದ। ''ಸದ್ಗುರು ಅಧಿಕಾರಿ ತ್ರಿಲೋಕದ । ಮಾಡಿಹನು ಆಜ್ಞೆ'' ಎಂದು ॥೪೭॥ ರಕ್ಷಿಸಲು ತನ್ನ ದೊಡ್ಡತನ । ವಿಂಧ್ಯ, ಭಕ್ತಿ ಭಾವದಿಂ ನಮನ। ಮಾಡಿ ಅಂದ, ''ಬೆಳೆಯೆನು ಹೇ ಸದ್ಗುರು ಶಿವನಂದನ, । ಇನ್ನು ನಿಮ್ಮ ಆಜ್ಞೆಯ ವಿನಾ ॥೪೮॥ ದೇವ, ಋಷಿ -ಮುನಿ, ಅಗಸ್ತ್ಯರು । ಶಿಷ್ಯೋತ್ತಮ ವಿಂಧ್ಯನ ಅಭಿನಂದಿಸಿದರು । ಸುರಾಸುರ ನರರು ಸ್ತೋತ್ರ ಹಾಡಿದರು । ''ತ್ರಿಲೋಕದಿ ಸತ್-ಶಿಷ್ಯ ಮೆರೆದ' ನೆಂದು ॥೪೯॥ ಚಿರಂಜೀವಿ ಆದಿ ನೀನು । ಹಿತಕರ ಔಷಧಿಧಾರಕನು । ಅಗಸ್ತ್ಯ ಶಿಷ್ಯನೆಂದು ಖ್ಯಾತನು । ಸಮಂಜಸ ಗಿರಿರಾಜನು ॥೫೦॥ ಅನ್ಯಥಾ, ಶಾಪಿಸಿ, ಅಗಸ್ತ್ಯರು । ವಿಂಧ್ಯನ ದಂಡಿಸುತ್ತಿದ್ದರು । ಸಾಮಂಜಸ್ಯದ ಕಾರಣ ಕ್ಷಮಿಸಿದರು । ಗೌರವದಿಂ ಮೆರೆಯಿಸಿ॥೫೧॥ ಸೃಷ್ಟಿಯ ಸಮತೋಲ ಸಾಧಿಸಿ ।ತ್ರಿಲೋಕಗಳನು ಆನಂದಿಸಿ । ಸೂರ್ಯ-ವಿಂಧ್ಯರನ್ನು ಅಭಿನಂದಿಸಿ । ಹಿಮಾಲಯವನ್ನೂ ಬಾಗಿಸಿದರು ॥೫೨॥ ರೋಗ, ಅಹಂಕಾರ, ದಾರುಣ-।- ವೃತ್ತಿಗಳ ಮಾಡಲು ಸಮೂಲ ಉಚ್ಚಾಟನ ॥ಸಹಾಯ ಮಾಡುವದು ವಿಂಧ್ಯಾಖ್ಯಾನ। ಮಾಡಿ ಮನ ಪ್ರಸನ್ನ ॥೫೩॥ವಿಂಧ್ಯ ಪ್ರಾರ್ಥಿಸಿದ, ''ಗುರುದೇವ,-।- ಮಾಡಿರಿ ವಿಂಧ್ಯದಲ್ಲಿ ವಾಸವ । ದಕ್ಷಿಣೋತ್ತರ ಬರು-ಹೋಗುವ। ಹೊತ್ತಿಗೆ, ದರ್ಶನ

ಕೊಡಿರಿ ।೪೪॥ 'ತಥಾಸ್ತು' ಅಂದರು ಅಗಸ್ತ್ಯ ಭಗವಾನ । ಸಪ್ರೇಮ ಗೌರವಿಸಿದರು ವಿಂಧ್ಯನ । ಅಹಂಕಾರ ಸ್ಪರ್ಧೆಯ ಹನನ । ಮಾಡಿದರು ಸಹಜ ।೪೫॥ ರಕ್ಷಿಸಲು ಸೃಷ್ಟಿಯ ಸಮತೋಲ । ಸ್ಥಾಪಿಸಲು ಪರ್ಜನ್ಯ, ಸು-ಜಲ। ಆಯಿತು ಅಗಸ್ತ್ಯ ಅವತಾರ ಪ್ರಬಲ । ಮಾನ-ಮಾನಸ ಸರೋವರದಲ್ಲಿ ।೪೬॥ ನೀರಿನಲ್ಲಿ ಜನ್ಮ ಪಡೆದರು । ಅಂತೇ 'ಲೋಕ ಜೀವನ'ರಾದರು। ಪರ್ಜನ್ಯ-ಜಲ, ವ್ಯವಸ್ಥಾಪಿಸಿದರು। ಸಿದ್ಧಮುನಿ ಅಗಸ್ತ್ಯರು ।೪೭॥ ಇನ್ನು ಮಾಡಿರಿ ಕಾವೇರಿ ಕಥಾ ಶ್ರವಣ । ಸೃಷ್ಟಿ ಸಂತುಲನ, ಜಲ ವ್ಯವಸ್ಥಾಪನ। ಪೂರ್ಣ ಸಾಧಿಸಲು ಲೋಕ ಕಲ್ಯಾಣ। ಲೋಕ ಪ್ರಿಯರ ಕಾರ್ಯ ।೪೮॥ ಕೇವಳ ಅಗಸ್ತ್ಯರಲ್ಲಿ, ಮುನಿ, ಸಿದ್ಧ ಋಷಿ! । ಸಾಕ್ಷಾತ್ ತ್ರಿದೇವ ತಾಪಸಿ । ಅಗ್ನಿ, ವಾಯು, ತ್ರಿದೇವ ಕೂಡಿಸಿ । ಪ್ರಕಟಿಸಿದ ಮಹಾಶಕ್ತಿ ।೪೯॥ ಸಹ್ಯಗಿರಿಯ ಸಾಲಿನಲ್ಲಿ । ಬ್ರಹ್ಮಗಿರಿ ನಾಮಕ ಪ್ರದೇಶದಲ್ಲಿ । 'ಕವೇರಾ' ನಾಮಕ ಅರಸ ಆಳಿ-।-ಖ್ಯಾತನಾಗಿದ್ದ. ।೫೦॥ ಅನ್ನುತ್ತಿತ್ತು ಕವೇರನ ಮನ । ತಪಿಸಿ ಲಭಿಸಬೇಕು ನಿಧಾನ । ಋಷಿತ್ವ ಸಿದ್ಧಿ ಪಡೆದು ಜನ-ಕಲ್ಯಾಣ। ಸಾಧಿಸಬೇಕು।೫೧॥ ಸ್ವಯಂಭು ಪ್ರಕಟಿಸಿದರು । ತ್ರಿದೇವ ರೂಪ ಮಹಾದೇವರು। ಖ್ಯಾತನಾಮರಾದರು-।- ತ್ರ್ಯಂಬಕೇಶ್ವರರೆಂದು ।೫೨॥ ಬ್ರಹ್ಮಗಿರಿಯ ಮೇಲೆ ಅಗಸ್ತ್ಯ । ಮಾಡಿದರು ಅಮೋಘ ತಪಶ್ಚರ್ಯ । ಬೆಳೆಸಿದರು ವಿದ್ಯಾ-ಆರೋಗ್ಯ । ಶೋಧಿಸಿ ಔಷಧಿ।೫೩॥ ವಂದಿಸಿ ಬ್ರಹ್ಮದೇವರನ್ನು । ಅಗಸ್ತ್ಯರು ಪ್ರಕಟಿಸಿದರು ವಿಚಾರವನ್ನು । ಭೂಮಿಗೆ ತನ್ನಿರಿ ಶಿವಗಂಗೆಯನ್ನು । ನಿತ್ಯ ಸ್ನಾನ ಮಾಡಲು ।೫೪॥ ಕೇಳಿ ಮನೋಗತ ಅಗಸ್ತ್ಯರ । ಅಂದರು ಬ್ರಹ್ಮ, ''ನಿಜ, ಗೌತಮರ-।- ಶಿಷ್ಯೋತ್ತಮ ಋಷಿವರ-।-ನನ್ನು ಯೋಜಿಸಿದ್ದೇನೆ ॥ ।೫೫॥



ಬ್ರಹ್ಮ ಹುಟ್ಟಿಸಿದರು 'ಗೌತಮಿ ಗಂಗೆಯನ್ನು । ಪ್ರತ್ಯಕ್ಷ ಶಿವನೇ ಹರಿಸಿದನು । 'ದಕ್ಷಿಣ-ಗಂಗಾ' ಈ ಹೆಸರನ್ನು । ಗಳಿಸಿತು ಗೋದಾವರಿ ನದಿ ।೫೬॥ ಬ್ರಹ್ಮಗಿರಿಯ ಅರಸ ಕವೇರ । ಸ್ಮರಿಸಿ ಚರಣ ಅಗಸ್ತ್ಯರ । ನಿಮಂತ್ರಿಸಿದ ಪಡೆಯಲು ಅವರ । ಆಶೀರ್ವಾದ ।೫೭॥ ಬ್ರಹ್ಮಗಿರಿ ಇತ್ತು ಇಲ್ಲಿ (ಮಹಾರಾಷ್ಟ್ರದಲ್ಲಿ )।ಕವೇರನ ರಾಜ್ಯ ಕನ್ನಡನಾಡಿನಲ್ಲಿ । ತಪಕ್ಕಾಗಿ ಬ್ರಹ್ಮಗಿರಿ ಪರ್ವತದಲ್ಲಿ । ಬರುತ್ತಿದ್ದ ಕವೇರ ।೫೮॥ ಸಪ್ರೇಮ ವಿನಮ್ರ ಆಮಂತ್ರಣ । ಸ್ವೀಕರಿಸಿದರು ಅಗಸ್ತ್ಯ ತಕ್ಷಣ । ಬಂದರು ರಾಜ್ಯದಲಿ ಕನ್ನಡನಾಡಿನ । ಕವೇರನ ಭೆಟ್ಟಿಗೆ ।೫೯॥ ಅಗಸ್ತ್ಯರನ್ನು ಸ್ವಾಗತಿಸಿ ಕವೇರನು। ವಿಧಿಯುಕ್ತ ಸ-ಪಾದ್ಯ-ಪೂಜಿಸಿದನು । ಚಲುವೆ ಕನ್ನೆ ಕಾವೇರಿಯೂ ತಂದೆಯನ್ನು । ಹಿಂಬಾಲಿಸಿದ್ದಳು ।೬೦॥ ಕಾವೇರಿ ಮಾಡಿ ಅಗಸ್ತ್ಯರಿಗೆ ನಮಸ್ಕಾರ । ಎದುರಿಗೆ ನಿಂತಳು ಆಗಿ ಪ್ರಸನ್ನ-ವಿನಮ್ರ ।'ಲೋಕ ಕಲ್ಯಾಣದ ಇಚ್ಛೆ ಅಪಾರ । ನನಗಿದೆ.' ಅಂದಳು ।೬೧॥ ಕವೇರ ಹೇಳಿದ, ಕಥೆ ವಿಲಕ್ಷಣ । 'ಶಿವಪ್ರಸಾದದಿಂ ಆಯ್ತು ಈ ಕನ್ಯಾರತ್ನ । ಶಿವಾಜ್ಞೆ ಆಯಿತು, 'ಕೇಳು, ಈ ಕನ್ನೆಯ ಜನನ । ಇಹುದು ಲೋಕ ಹಿತಕ್ಕಾಗಿ' ।೬೨॥ ದೃಷ್ಟಾಂತಕೊಟ್ಟು ಶಿವ, ಮಾಡಿದರು ಕಥನ,। ''ಈ ಕನ್ಯೆ ಮಾಡುವಳು ಜೀವನ ರಕ್ಷಣ । ದಕ್ಷಿಣ ದೇಶ ಆಗುವದು ಸಂಪನ್ನ । ಇವಳ ಹಿತಕರ ಕಾರ್ಯದಿಂದ'' ।೬೩॥ ಮಹೇಶರೇ ನನಗೆ ಹೇಳಿದರು ಇದನ್ನು । ನಿಮ್ಮ ಜೊತೆ ಮಾತಾಡಲು ಚೆನ್ನು । ಅದಕ್ಕೇ ಆಮಂತ್ರಿಸಿದೆ ನಿಮ್ಮನ್ನು । ಕಾಲಮೇಲೆ ಕಾವೇರಿಯನು ಹಾಕಲು।೬೪॥ ಸಾಧಿಸಲು ಲೋಕ ಕಲ್ಯಾಣ । ಮಾಡಲು

ಭಾವ-ಭಕ್ತಿ ಸೇವಾ ಸಾಧನ । ಕಾವೇರಿಯದಿಹುದು ಉತ್ಸುಕ ಮನ । ನಿಮ್ಮ ಕಾರ್ಯಕ್ಕಾಗಿ ॥೭೫॥ ಕಾವೇರಿ ಸೌಭಾಗ್ಯ ಕಾಂಕ್ಷಿಣಿ  ಇಹಳು । ಶಿವ ಪ್ರಸಾದದಿಂದ ತೇಜಸ್ವಿತೆಯಳು । ಪಾಣಿಗ್ರಹಣ ಬಯಸುತ್ತಿಹಳು ।ಅಗಸ್ತ್ಯರ ಪ್ರೀತಿಗಾಗಿ ॥೭೬॥ ಅಗಸ್ತ್ಯ ಅಂದರು 'ನಾನು ವಿವಾಹಿತ । ಉಗ್ರ ತಪಸ್ವಿ ಸಿದ್ಧ ವ್ರತಸ್ಥ  । ವೃದ್ಧ,ವಿರಾಗಿ,ವಿರಕ್ತ । ಹೇಗೆ ಸ್ವೀಕರಿಸಲಿ?' ॥೭೭॥ ಕಾವೇರಿ ವ್ಯಕ್ತ ಮಾಡಿದಳು ಮನ, । ''ಎಂದೋ ವರಿಸಿದ್ದೇನೆ ನಿಮ್ಮನ್ನ । ನಿಮ್ಮ ಇಚ್ಛೆಯಂತೆ ಸೇವೆಯನ್ನ । ಸಲ್ಲಿಸುವೆನು ನೇಮದಿಂದ ॥೭೮॥ ಸ್ತ್ರೀಹಟ ನೋಡಿ ಕಾವೇರಿಯ । ಒಪ್ಪಿದರು ಸಿದ್ಧ ಅಗಸ್ತ್ಯ। ಶಿವಾಜ್ಞೆ ತಿಳಿದು ನಾನು ಅವಶ್ಯ । ಸ್ವೀಕರಿಸುವೆನು ಕಾವೇರಿಯನ್ನು ''॥೭೯॥ ಅಗಸ್ತ್ಯ -ಕಾವೇರಿ ಲಗ್ನ ಆಯಿತು। ಕನ್ನಡ -ಬ್ರಹ್ಮಗಿರಿ ನಾಡು ಧನ್ಯ ಆಯಿತು । ಕನ್ನಡ ನಾಡಿನಲ್ಲಿ ಆಶ್ರಮ ನಿಂತಿತು । ಸಹ್ಯಾದ್ರಿಯ ಬದಿ॥೮೦॥ ಅಗಸ್ತ್ಯ ಮಾಡುತ್ತಿದ್ದರು ಘೋರ ತಪ । ಕಾವೇರಿಯ ಮನಸಿಗಾಗುತ್ತಿತ್ತು ತಾಪ । ಎಂದು ಒಪ್ಪಿಸುವರೋ ತನಗೆ ವ್ಯಾಪ । ಲೋಕ ಕಲ್ಯಾಣದ ॥೮೧॥ ಮನೋ ಕಾಮನೆ ಕಾವೇರಿಯ-।-ತಿಳಿಯರೇ ತ್ರಿಕಾಲಜ್ಞ ಅಗಸ್ತ್ಯ? । ವೇಳೆ ನೋಡಿ ಅವರು ಉಪಾಯ ।ಯೋಜಿಸುವರಿದ್ದರು ॥೮೨॥ ಮಾತಾ ಕಾವೇರಿ ಇದ್ದಳು ಆತುರ । ಲೋಕ ಕಲ್ಯಾಣಕ್ಕಾಗಿ ಅಪಾರ । ವಿನಂತಿ ಅಗಸ್ತ್ಯರಿಗೆ ವಾರಂವಾರ। ಮಾಡಿಯೂ ಅವರಿದ್ದರು ತಪಮಗ್ನ ॥೮೩॥ ಮಾತ್ರ ಕೊಟ್ಟರು ಆಶ್ವಾಸನ। 'ಬಂದಿದೆ ವೇಳೆ ನಿಕಟ-ಮುನ್ನ । ಆಗ  ಮಾಡು ನೀನು ಕಲ್ಯಾಣ । ನಿನ್ನ ಇಚ್ಛೆಯಂತೆ '॥೮೪॥ ದಕ್ಷಿಣದಲ್ಲಿದ್ದ ಮಹಾಶಕ್ತಿಶಾಲಿ ಕ್ರೂರ ।'ಶೂರ ಪದ್ಮ' ನೆಂಬ ಅಸುರ । ಮಾಡುತ್ತಿದ್ದ ಇಂದ್ರನೊಂದಿಗೆ ಸ್ಪರ್ಧೆ ಭಯಂಕರ । ದೇವ



ಪೂಜಕರ ಮತ್ಸರಿ ॥೮೫॥ ಮಾನವಜಾತಿ ನಷ್ಟ ಮಾಡಲು। ಮಾಯೆಯಿಂ ತರಬುತ್ತಿದ್ದ ಮಳೆ-ಮುಗಿಲು । ಹುಟ್ಟಿಸುತ್ತಿದ್ದ ಭೂಮಿಯಲಿ ಬರಗಾಲು । ಕಾಡುತ್ತಿದ್ದ ಭಾರಿ ॥೮೬॥ ಭೂತ ಮಾತ್ರ ಆದವು ತ್ರಸ್ತ । 'ತ್ರಾಹೀ ತ್ರಾಹೀ ' (ರಕ್ಷಿಸಿ... ರಕ್ಷಿಸಿ) ಅಂದರು ಸಮಸ್ತ। ಕಾವೇರಿ ಆದಳು ಭಯಗ್ರಸ್ತ । ಜೀವಿಗಳ ಪ್ರಾಣಕ್ಕಾಗಿ  ॥೮೭॥ ಮತ್ತೆ ಋಷಿಗೆ ಕಾವೇರಿ ವಿನಂತಿಸಿದಳು ।'ನೀವು ಪರ್ಯಾವರಣದ ಸ್ವಾಮಿಗಳು, । ಪೃಥ್ವಿ-ಪರ್ಜನ್ಯ ಸಮತೋಲ ಸಾಧಿಸಲು। ಸಮರ್ಥರು ದೇವರ ಸಮ''॥ ೮೮॥ ದೇವರೂ ಆದರು ಭಯ ಚಕಿತ  । ಬರಗಾಲ ಮುಗಿಸಲು ಅಗಸ್ತ್ಯರೇ  ಸಮರ್ಥ । ಮಾತ್ರ ಅವರು ತಪದಲ್ಲಿ ವ್ಯಸ್ತ । ಅವರ ಯೋಜನೆ ತಿಳಿಯದು ॥೮೯॥ ಪರ್ಯಾವರಣದ ದೇವ ಅಗಸ್ತ್ಯರು । ಅನ್ನಿಸುತ್ತಿದೆ ನಿದ್ರೆ ವಶ ಆಗಿಹರು । ಕಾವೇರಿಯನ್ನು ಉತ್ತೇಜಿಸ ತೊಡಗಿದರು। ಅಂತೇ ದೇವರೆಲ್ಲರೂ ॥೯೦॥ ಕಾವೇರಿ 'ನಾನು ಋಷಿಯ ಆಜ್ಞಾಧಾರಕ  । ನೀವು ದೇವರೆಲ್ಲರೂ ಆದೊಡೆ ಸಹಾಯಕ । ಹಿತಕಾರಕ ಕರ್ಮ ಆವಶ್ಯಕ-।- ಮಾರ್ಗ ದೊರಕೀತು' ॥೯೧॥ ಸಿದ್ಧ ಋಷಿ ಅಗಸ್ತ್ಯರನ್ನು  । ವಶ ಮಾಡಲು ಗಣಪತಿಯ ಪಾದಗಳನ್ನು-।- ಹಿಡಿದು ದೇವರೆಲ್ಲ ಅಂದರು, 'ಶರಣು...।.. ಮಾಡಿರಿ ಏನಾದರೂ! ' ॥೯೨॥ ಜನಹಿತಾರ್ಥ ಕಾವೇರಿ ಇದ್ದಳು ಸಿದ್ಧ। ಅವಳ ವಚನದಲ್ಲಿ ಅಗಸ್ತ್ಯರು ಬದ್ಧ । ಪ್ರಕಟಿಸಲು. ಯುಕ್ತಿ ಸೋಜಿಗದ। ಎದ್ದರು ಅಗಸ್ತ್ಯ ॥೯೩॥  ಪತಿವ್ರತೆ ಕಾವೇರಿ ವಿನಂತಿಸಿದಳು । ಲೋಕ ಕಲ್ಯಾಣದ ಸಂಧಿ ಕೊಡಲು । 'ವಚನ ಕೊಟ್ಟಿದ್ದೀರಿ ನನಗೆ ' ಅಂದಳು -।- ಮುಂದೆ 'ಮಾಡಿರಿ ಆದರ

ಪೂರ್ತಿ’ ॥೯೪॥ ‘ತಥಾಸ್ತು’ ಉಚ್ಚಾರಿಸಿ, ನಿದ್ರಾಧೀನ-।- ಆದರು ಅಗಸ್ತ್ಯ ತಕ್ಷಣ । ಆಯಿತು ಕಾವೇರಿಯ ಮನ। ಅಸ್ವಸ್ಥ ಚಿಂತಿತ ॥೯೫॥ ಪ್ರಾತಃಕಾಲದಲ್ಲಿ ಅಗಸ್ತ್ಯರು ಸ್ನಾನಕ್ಕಾಗಿ ಹೊರಟರು। ‘ಕಾವೇರಿಯನ್ನು ಎಲ್ಲಿಡಲಿ ?’ ಅಂದರು-।- ‘ಅಸ್ವಸ್ಥಾವಸ್ಥೆಯಲ್ಲಿ ... ॥೯೬॥ ಅಗಸ್ತ್ಯ ಮಾಡಿದರು ಅದ್ಭುತ ಚಮತ್ಕಾರ। ಜಲರೂಪ ಕೊಟ್ಟು, ಅವಳಿಗೆ ಸತ್ವರ,। ಕಮಂಡಲುದಲ್ಲಿ ಸುರಿದು ಆ ನೀರ-। ನಡೆದರು. ಇಂಥ ಚಮತ್ಕೃತಿ!॥೯೭॥ ಅಗಸ್ತ್ಯರಿಗಿತ್ತು ತ್ರಿಕಾಲ ಜ್ಞಾನ । ಅವರಿಗೆ ಕೌತುಕ ಗಣೇಶನ । ವಿನಾಯಕನ ಸಹ ಸರ್ವ ದೇವರನ್ನ। ಹಚ್ಚಿದರು ಕಲ್ಯಾಣ ಕಾರ್ಯದಲ್ಲಿ ॥೯೮॥ ಕಮಂಡಲುದಲ್ಲಿ ತುಂಬಿ ಕಾವೇರಿಯನ್ನ । ಬಂದರು ಸರೋವರಕೆ ಮಾಡಲು ಸ್ನಾನ। ಶಿಲೆಯ ಮೇಲೆ ಮಾಡಿ ಕಮಂಡಲದ ಸ್ಥಾಪನ । ಸ್ನಾನ ಮಾಡ ಹತ್ತಿದರು॥೯೯॥ ಸಂಧಿ ಸಾಧಿಸಿ ದೇವೇಂದ್ರರು । ಗಣಪತಿಗೆ ವಿನಂತಿಸಿದರು । ‘ಮುಕ್ತ ಮಾಡಿರಿ ಕಾವೇರಿ-ಯನ್ನು’ ಅಂದರು ।... ‘ ಕಮಂಡಲದಿಂದ ॥೧೦೦॥ ಅಗಸ್ತ್ಯರೂ ಇದ್ದರು ಆತುರ । ಕಾವೇರಿಯನು ಪ್ರವಾಹಿಸಲು ಸತ್ವರ । ಅಂತೇ ಮಾಡಿದ್ದರು ಪತ್ನಿಯನು ನೀರ । ಇಟ್ಟು ಕಮಂಡಲದಲ್ಲಿ ॥೧೦೧॥ ಕಾವೇರಿ ಮಾಡಿದಳು ಕುಂಭೋಜ (ಅಗಸ್ತ್ಯ )ಅನುಸರಣ। ಪಾಲಿಸದಳು ಮಿತ್ರವರುಣೆಯ ವ್ರತವನ್ನ। ಪಾತಿವ್ರತ್ಯ ಗೌರವಾಸ್ಪದ ಘನ । ಲೋಪಾಮುದ್ರೆಯಂತೆ ॥೧೦೨॥ ಕೊಡಲು ಗಣಪತಿಗೆ ಶ್ರೇಯ ಇದರ । ವಿಘ್ನಹರ್ತಾ ಜ್ಯೇಷ್ಠ ಬಂಧುವರ -।- ಶ್ರೀ ಗಣೇಶರನ್ನು, ನೋಡಿದರು ಸಾದರ । ದೂರಿನಿಂದಲೇ ॥೧೦೩॥ ಕಾಕರೂಪ ಆದನು ಗಣೇಶನು। ಕಮಂಡಲು ಉರುಳಿಸಿದನು । ಪ್ರವಾಹಿತ ಮಾಡಿದ ಕಾವೇರಿಯನ್ನು । (ನೋಡಿ ಇದನು) । ಪೃಥ್ವಿ ಮಾತೆ ತೃಪ್ತ ಆದಳು ॥೧೦೪॥ ಸ್ನಾನ ಮುಗಿಸಿ ಅಗಸ್ತ್ಯ ಬಂದರು । ‘ಹರಿ’ಯುವ ಕಾವೇರಿಯನು ನೋಡಿದರು । ಅಮೋಘ ಪ್ರವಾಹ



ನೋಡಿ ಹರ್ಷಿಸಿದರು । ಲೌಕಿಕಕ್ಕಾಗಿ ದುಃಖಿಸಿದರು ॥೧೦೫॥ ‘ಕಾವೇರಿ... ಕಾವೇರೀ!’ ಎಂದು ಕೂಗಿದರು । ‘ನನ್ನ ತ್ಯಜಿಸಿದಳು ಹೇಗೆ ?’ ಅಂದರು । ಸುರಾಸುರ ನರ ಕೌತುಕ ತೋರಿದರು । ಲೋಕಪ್ರಿಯ ಅಗಸ್ತ್ಯರ ಬಗ್ಗೆ ॥೧೦೬॥ ವಿನಾಯಕನ ಸಹ ಕ್ಷಮೆ ಯಾಚಿಸುತ । ದೇವರಾದರು ಪ್ರಕಟ ಸಮಸ್ತ। ‘ತಮ್ಮ ಕೃಪೆಯಿಂದ ಕಾವೇರಿ ಆದಳು ಪ್ರವಾಹಿತ । ನದೀರೂಪ ಧರಿಸಿ ’ ಅಂದರು ॥೧೦೭॥ ಕಾವೇರಿಯ ತಂದೆ ಆದರು ಹರ್ಷಿತ । ಅಗಸ್ತ್ಯ ಪಾಲಿಸಿದರು ತಮ್ಮ ವಚನ, ‘ದತ್ತ’। ಸತಿ (ಪತಿವ್ರತೆ) ಕಾವೇರಿ ಆದಳು ವಿಖ್ಯಾತ । ‘ಲೋಕ-ಕಲ್ಯಾಣಕಾರಿ’ ಎಂದು ॥೧೦೮॥ ಕಾವೇರಿ ಕ್ಷಮೆ ಯಾಚಿಸಿದಳು । ‘ವ್ರತ-ಭಂಗ ಮಾಡಿದೆ’ ಅಂದಳು । ‘ನಿಮ್ಮ ಆಜ್ಞೆ ವಿನಾ ಪ್ರವಾಹಿಸಿದೆ ಖಲು। ಕ್ಷಮಿಸಿರಿ ಅಪರಾಧ’ ॥೧೦೯॥ ಅಗಸ್ತ್ಯರಾದರು ಅತಿ ಪ್ರಸನ್ನ । ಹರ್ಷದಿಂದ ಕೊಟ್ಟು ಆಶೀರ್ವಚನ,। ‘ಸಾಧಿಸಿದಿ ನೀನು ಲೋಕ ಕಲ್ಯಾಣ। ನಿಜವಾದ’ ಅಂದರು ॥೧೧೦॥ ಕಾವೇರಿ,‘ದಕ್ಷಿಣ ಗಂಗಾ’ ಆದಳು। ಹ್ಯಾಗೆ ಭಾಗೀರಥಿ, ಗೌತಮಿ ಪ್ರಕಟಿಸಿದ್ದಳು । ‘ಅಗಸ್ತ್ಯ ಪತ್ನಿ’ಯೆಂದು ಮೆರೆದಳು । ಪವಿತ್ರ ಗಂಗೆಯಂತೆ ॥೧೧೧॥ ಭಾಗೀರಥಿಗೆ ಅಗಸ್ತ್ಯ ಸಾಹ್ಯ ಮಾಡಿದರು । ಗಂಗೆಯ ಪ್ರವಾಹ ಪೂರ್ವಕ್ಕೆ ಒಯ್ದರು । ಯೋಜಿಸಿ ಕಾವೇರಿಯನ್ನು ಹರಿಸಿದರು। ದಕ್ಷಿಣ ಸಂಪನ್ನ ಮಾಡಲು ॥೧೧೨॥ ಶೂರಪದ್ಮಾಸುರ ಬಂದನು ಶರಣ । ‘ತಕ್ಕೊಳ್ಳಿರಿ ಸಹಾಯನನ್ನ-। ಮಾಯೆ ತ್ಯಜಿಸಿ ಲೋಕ ಕಲ್ಯಾಣ । ಮಾಡುತ್ತೇನೆ’ ಅಂದನು ॥೧೧೩॥ ಅಗಸ್ತ್ಯ ಕ್ಷಮಿಸಿದರು ಅವನನ್ನ । ಕಾವೇರಿಯನು ಹರಿಸಿದರು ಸಾಹ್ಯದಿಂ ಅವನ । ದಾನವತ್ವ ಹೋಗಿ ದೇವತನ -।- ಲಭಿಸಿತು ಆ ದೈತ್ಯನಿಗೆ ॥೧೧೪॥ ‘ಪೋಥಿಯೀಲಿ’ ಗಿರಿಯ ಮೇಲೆ ಅಗಸ್ತ್ಯ

।ಮಾಡಿದರು ಘೋರ ತಪಶ್ಚರ್ಯ । ದಕ್ಷಿಣ ಆಯ್ತು ಸುಜಲಮಯ । ಬರಗಾಲ ಹೋಗಿ ।।೧೧೫।। ಭರತ ಭೂಮಿ ಸುಜಲ ಮಾಡಲು । ಸಾಗರ ತೀರದಿ ಜಲಪಾತ ನಿರ್ಮಿಸಲು । ಕಾವೇರಿಯಂತೆ ಅನ್ಯ ನದಿಗಳನ್ನೂ ಹರಿಸಲು। ಅಗಸ್ತ್ಯ ಉದ್ಯುಕ್ತ ಮಾಡಿದರು ।।೧೧೬।। ತಾಮ್ರ ವರ್ಣೆ ಹುಟ್ಟಿಸಿ, ಅಗಸ್ತ್ಯರು । ಕಾವೇರಿಗೆ ಸಹಾಯ ಮಾಡಿದರು । ಪ್ರದೇಶ ವ್ಯಾಪಿಸಿ ಹರ್ಷಿಸಿದರು । ಜಲೌಘಗಳಿಂದ ಜನರನ್ನು ।।೧೧೭।। ಇಹರು ಅಗಸ್ತ್ಯ. ಶಿವ ಅವತಾರ ।। ಕೃತ, ಪ್ರಲಹ, ಪೌಲಸ್ಯ ಗೋತ್ರವರ। ಬರುವರು ಕೂಡಿ ಬ್ರಹ್ಮ ಮಾನಸಪುತ್ರ । ಸ್ವ-ಉದ್ಧಾರಕ್ಕಾಗಿ ।।೧೧೮।। ಮುಂದೆ ತಾಮ್ರ ಪರ್ಣೆ ಆಯ್ತು ಸಹಾಯ ಭೂತ । ರಾಮನನ್ನು ಲಂಕೆಗೆ ಮುಟ್ಟಿಸುವ ಪಥ,। ಹಾಗೇ -ಪವಿತ್ರ ಮತ್ತು ವಿಖ್ಯಾತ । ‘ ಅಗಸ್ತ್ಯಪುರಿ’ ನಿರ್ಮಿಸಿ ।।೧೧೯।। ಪರ್ಜನ್ಯ ನೀರಿನ ಸಮತೋಲ। ಸಾಧಿಸಲು ಸಾಧ್ಯ ಕಾರ್ಯಬಲ। ಆಗುವದು ಅಗಸ್ತ್ಯ ನಾಮ ಸಫಲ । ಪರ್ಯಾವರಣ ದೇವತೆ ।।೧೨೦।। ಪ್ರತ್ಯಕ್ಷ ‘ಶಿವ’ನೇ ಪ್ರಕಟಿಸಿದನು । ‘ಬ್ರಹ್ಮ’ನಿಗೆ ಸಹಾಯಕನಾದನು। ‘ವಿಷ್ಣು’ ಸಮ ಲೋಕ ಪಾಲಕನೂ । ಖಂಡಿತ ಅಗಸ್ತ್ಯ ಋಷಿ ।।೧೨೧।। ಮಿತ್ರಾ-ವರುಣಿ ಕುಲ ಮಹಾನ । ಔದಾರ್ಯ ಕೃಪೆಯಿಂ ಪ್ರಕಾಶಮಾನ। ಸಿದ್ಧ, ಮುನಿ ಅಗಸ್ತ್ಯ-ಭಗವಾನ್ । ಶಿವರೂಪ ಪೂಜ್ಯ ।।೧೨೨।। ಒಕ್ಕಲಿಗರನ್ನು ಸುಫಲ-ಆನಂದಿತ । ಭೂಲೋಕ ಸುಜಲ-ಸ್ಥಿರ ಸಂಪತ್। ತ್ರಿದೇವರನ್ನು ಮಾಡಿದರು ಪ್ರತಿಷ್ಠಾಪಿತ । ಸಿದ್ಧ ಋಷಿ ಅಗಸ್ತ್ಯರು ।।೧೨೩।। ಮಹಿಮೆ ಹಾಡಿದಲ್ಲಿ ಅಗಸ್ತ್ಯರ । ಬರುವದು ಜಲ-ಸಂಪತ್ತಿ ಅಪಾರ। ಸುಫಲಿತ ಆಗುವದು ಕೃಷಿ ಕ್ಷೇತ್ರ । ಅಗಸ್ತ್ಯರಿಂದ ನಿಶ್ಚಿತ ।೧೨೪।। ಕೃಷಿಕ್ಷೇತ್ರ ಮಾಡಲು ಸುಫಲ । ಸಾಕಷ್ಟು ಬೇಕು ಸುಜಲ। ಪರ್ಜನ್ಯ ಕೃಪೆ ಆಗಲು ಸ-ಬಲ। ಅಗಸ್ತ್ಯ ಪೂಜೆ ಆವಶ್ಯಕ ।।೧೨೫।। ಅಗಸ್ತ್ಯರಿಗೆ

೩೧

ಹೋದೊಡೆ ಶರಣ । ಒಕ್ಕಲಿಗ (ಕೃಷೀವಲ) ಆಗುವನು ಸುಸಂಪನ್ನ । ಅಗಸ್ತ್ಯ ಋಷಿಯರೇ ಭಗವಾನ । ಮಾರ್ಗದರ್ಶಕ ಸರ್ವರಿಗೆ ।।೧೨೬।। ಇತಿ ಚತುರ್ಥೋಧ್ಯಾಯ ಸಂಪೂರ್ಣ। ತಣ್ಣಿಸುವದು ಚಿಂತೆಯನು ಕೊಟ್ಟು ಜೀವನ । ‘ಕೃಷೀ’ ಕ್ಷೇತ್ರ ಮಾಡಿ ಸುಫಲ-ಸಂಪನ್ನ । ಶ್ರದ್ಧಾಪೂರ್ವಕ ಪೂಜೆಯಿಂದ ।।೧೨೭।। ಒಕ್ಕಲಿಗರು ಅಗಸ್ತ್ಯಯಾಗ ಯೋಜಿಸಲಿ । ನೀರು ಕೊಟ್ಟು ಭೂತ ಮಾತ್ರರನ್ನು ತಣ್ಣಿಸಲಿ । ಜಲ-ಕುಂಭ ಸಂಕಲ್ಪಿಸಿ ಜನಹಿತ ಸಾಧಿಸಲಿ । ಹೊಲ ಮತ್ತು ಜೀವಿಗಳ ।।೧೨೮।। ಅಗಸ್ತ್ಯ ಕಥೆ ಅತಿ ಅದ್ಭುತ । ತಣ್ಣಿಸುವದು ಚಿಂತೆ ಹರಿಸುತ। ‘ಲೋಕಭಾವನ ಋಷಿ’ ಎಂದು ಖ್ಯಾತ । ಸರ್ವತ್ರ ಆಗಿಹರು ।।೧೨೯।। ಮುಂದೆ ಕೇಳಿರಿ ಅಗಸ್ತ್ಯ ಕಥೆ ಗಹನ । ಗೋತ್ರ-ಗೋತ್ರಜರ ಕಾರಣ। ಮಾಡಿ ಮನುಷ್ಯರೂಪ ಧಾರಣ । ಭೂಲೋಕದಿ ಸಂಚರಿಸುತಿಹರು ।।೧೩೦।। ವೇದ, ಪುರಾಣ, ಮಹಾಕಾವ್ಯಗಳು । ನಾನಾ ವಿಧ ಲೋಕಕಥೆಗಳು । ಹೇಳಿದವು. ಅನೇಕ ಪ್ರಕಾರ, ಮಾತ್ರ ಅಗಸ್ತ್ಯ ಆಜ್ಞೆಯ ಖಲು। ಹೇಳಿಹೆನು ಈ ಕಥೆ (ಮಾಹಾತ್ಮ್ಯ) ।।೧೩೧।। ಇತಿ ಚತುರ್ಥೋ-ಧ್ಯಾಯ ಸಮಾಪ್ತ ।। ಓಂ ದೇವ, ಋಷಿ, ಸಿದ್ಧ, ಮುನಿ, ಅಗಸ್ತ್ಯಾರ್ಪಣಮಸ್ತು ।।

ಶುಭಂ ಭವತು ।ಅಸ್ತು ।।

।।ನಾಲ್ಕನೇ ಅಧ್ಯಾಯ ಸಮಾಪ್ತ।।

೩೨

॥ಓಂ॥

# ಅಗಸ್ತ್ಯ ಮಹಾತ್ಮ್ಯೆ

## ಐದನೇ ಅಧ್ಯಾಯ

॥ ಓಂ ಶ್ರೀ ಗಣೇಶಾಯ ನಮಃ ॥ ಓಂ ಸರಸ್ವತ್ತ್ಯೈ ನಮಃ ॥ ಓಂ ಶ್ರೀ ಅಗಸ್ತ್ಯ ನಮಃ ॥
ಓಂ ಶ್ರೀ ಸಿದ್ಧಿವಿನಾಯಕಾಯ ನಮಃ ॥ ಓಂ ಶ್ರೀ ಸದ್ಗುರವೇ ನಮಃ । ಓಂ ಶ್ರೀ ಕುಲದೇವತಾಯ್ಯೆ ನಮಃ ।
ಓಂ ಶ್ರೀ ಸಲಕ ದೇವತಾಯ್ಯೆ ನಮಃ ॥

ಓಂ ಶ್ರೀ ದೇವ ಋಷಿ ಸಿದ್ಧ ಅಗಸ್ತ್ಯ ಮುನೀಯ್ಯೆ ನಮ ಃ । ಅಗಸ್ತ್ಯ ಪೂರ್ಣಸ್ವಯಂಸಿದ್ಧರು ॥ ಸಾಕ್ಷಾತ್ ತ್ರಿದೇವ ಸ್ವರೂಪರು। ಮಿತ್ರಾ, ವರುಣಿಯರ ರೂಪ ಧರಿಸಿದ ಶಿವರು । ಮಾನ-ಮಾನಸ ಕುಂಭದಲ್ಲಿ ಪ್ರಕಟಿಸಿದರು ॥೧॥ ಆಕಾಶ-ಪೃಥ್ವಿಯರ ಸಂತುಲನಾರ್ಥ। ಋತುಚಕ್ರ ನಿರ್ಮಿತಿಯಲ್ಲಿ ರತ। ಸರ್ವಜೀವಿಗಳ ಪಾಲನಾರ್ಥ । ದೇವಶಕ್ತಿ ಕಾಪಾಡಲು ॥೨॥ ಅಗ್ನಿ-ವಾಯು ಜಲ-ದೇವತಾ। ಶಿವಾಸ್ಪದರಾಗಿ ತತ್ವತಾ॥ ಬಂದರು ಹಿಮ-ಗಿರಿಯಲ್ಲಿ ಪ್ರಕಟಿಸುತಾ। ಅಗಸ್ತ್ಯರೂಪ ತಾಳಿ ॥೩॥ ಅಗಸ್ತ್ಯ ಋಷಿ ನಿತ್ಯ ಶಕ್ತಿ । ಲೋಕ ಕಲ್ಯಾಣಕ್ಕಾಗಿ ಉತ್ಪತ್ತಿ। ಸುರಾಸುರ ಮಾನವರಿಗೆ ಚಮತ್ಕೃತಿ। ತೋರಿ, ಸಾಕುವರು ॥೪॥ ಕಾರ್ಯ ಪರ್ಯಾವರಣ ಸಮತೋಲನದ। ವಿದ್ಯೆ, ಕೃಷಿ, ಜಲ ವ್ಯವಸ್ಥಾಪನದ। ಕಲೆ ಯುದ್ಧ ಮತ್ತು ಆರೋಗ್ಯದ । ಅಥರ್ವ, ಅದ್ವೈತಾದಿ ॥೫॥ ಎಲ್ಲರಿಗೂ ವಿದ್ಯೆ ದೊರಕಲು । ಭೂಲೋಕ ಸುಫಲಿತ



ಆಗಲು । ಮಾನವರ ಚಿಂತೆ ಹರಿಸಲು। ಕಾರ್ಯತತ್ಪರ ಹರ್ಷದಿಂ॥೬॥ ವಿಖ್ಯಾತ ಋಷಿ ಬಂಧು ವಶಿಷ್ಠ। ಯಾರು ತೃತ್ಸುವಂಶದಿ ಸಮಾವಿಷ್ಟ। ಪ್ರಜೆಯ ಪಾಲನೆಗಾಗಿ ವ್ಯವಸ್ಥಿತ। ಕರೆದರು ಅವರನ್ನು ಅಗಸ್ತ್ಯರು ॥೭॥ ಮಾಡಲು ಮಾನವ ಜಾತಿಯ ಕಲ್ಯಾಣ । ಬಂದರು ವಶಿಷ್ಠರೂ ತಕ್ಷಣ । ಮರೆತು ದೇವವಂಶದಲ್ಲಿಯ ಜನನ । ಮಾನವ ಸೇವೆಗೆ ಧುಮುಕಿದರು ॥೮॥ ಅಗಸ್ತ್ಯ ಮತ್ತು ವಶಿಷ್ಠ । ಇಬ್ಬರೂ ಪ್ರೇರಿತ ಮಾಡಲು ಜನ ತುಷ್ಟ।ತ್ರಿದೇವರನ್ನೂ ಮಾಡಿದರು ಸಂತುಷ್ಟ। ಜನರನ್ನು ಕಾಪಾಡಿ॥೯॥ ವಶಿಷ್ಠರಾದರು ಕುಲಗುರು । ಮತ್ತು ರಾಜ ಪುರೋಹಿತರೂ। ವ್ಯವಸ್ಥಾಪನೆಯಲ್ಲಿ ತೊಡಗಿದರು । ಮಾನವ ಜಾತಿಯ ॥೧೦॥ ಅಗಸ್ತ್ಯರಿದ್ದರು ಸರ್ವ ವಿದ್ಯಾ ಪಾರಂಗತ । ಸ್ವಯಂ ಸಿದ್ಧ ಮುನಿ ವಿಖ್ಯಾತ। ವಿದ್ಯಾದಾನಕ್ಕಾಗಿ ಮಾಡಿದರು ಸ್ಥಾಪಿತ । ಆಶ್ರಮ ನಾನಾ ಸ್ಥಳಗಳಲ್ಲಿಯ ॥೧೧॥ ಹತ್ತೂ ದಿಕ್ಕುಗಳಲ್ಲಿ ಸ್ಥಾಪಿಸಿ ಆಶ್ರಮ। ಮುಗಿಲು-ಅವಕಾಶ ಯ್ಯೋಮ-।-ಗಳಲ್ಲಿ ಸುರಾಸುರ, ನರರ ಅಜ್ಞಾನ ತಮ-।ಹರಿಸಿ ಜ್ಞಾನ ಕೊಟ್ಟರು॥೧೨॥ ಅಗಸ್ತ್ಯರು ಸಹ್ಯಾದ್ರಿಯ ಪಕ್ಕದಲ್ಲಿ । ಅಗಸ್ತ್ಯಪುರಿ ಪ್ರದೇಶದ ಬಳಿ । ಸ್ಥಾಪಿಸಿ ಮುಖ್ಯ ಆಶ್ರಮಸಾಲಿ। ಸ್ಥಾಯಿಕರಾದರು ॥೧೩॥ ಇದೇ ಪರಿಸರದಲ್ಲಿ ಅಗಸ್ತ್ಯ ನಗರ । ಮೂಲ ಗಿರಿಜಾಪತಿ ಸಿದ್ದೇಶ್ವರ-(ಮಂದಿರ)। ಸ್ಥಾಪಿಸಿ ಅಮೃತವಾಹಿನಿ ತೀರ-।-ದಲ್ಲಿ ಲೋಕಹಿತ ಸಾಧಿಸುವರು ॥೧೪॥ ಉತ್ತರಕ್ಷೇತ್ರದಿ 'ಅಗಸ್ತ್ಯ' ಗ್ರಾಮದಲ್ಲಿ । ರುದ್ರ ಪ್ರಯಾಗ ತೀರ್ಥದ ಬಳಿ । ಸ್ಥಾಪಿಸಿದ ಆಶ್ರಮದಲ್ಲಿ ಮುನಿಗಳು ತಾಳಿ । ಘೋರ ತಪಶ್ಚರ್ಯ ಮಾಡಿದರು ॥೧೫॥

ಒಂದು ಪ್ರಯಾಗ ತೀರ್ಥದಲ್ಲಿ। ಇನ್ನೊಂದು ಯಮುನಾ ತೀರದಲ್ಲಿ । ಗಂಗಾ ದ್ವಾರದಿ ತಪಕ್ಕಾಗಿ ಕಾಶಿಯಲ್ಲಿ। ನಿವಾಸಾಶ್ರಮಗಳಿಹವು ॥೧೬॥ ಮಣೀಮತಿ ದುರ್ಜಯಾ ದಕ್ಷಿಣದಲ್ಲಿ । ರಾಮಸೇತು ಪಾಂಡ್ಯದೇಶದಲ್ಲಿ । ವೈದುರ್ಯ ಕುಂಜರ ಪರ್ವತದಲ್ಲಿ। ಆಶ್ರಮ ಸ್ಥಾಪಿಸಿದರು ॥೧೭॥ ನಾಸಿಕದ ಪಂಚವಟಿಯಲ್ಲಿ । ಇನ್ನೊಂದು ರತ್ನಗಡದಲ್ಲಿ । ಸ್ಥಾನ ಇಹುದು. ಬ್ರಹ್ಮಗಿರಿಯಲ್ಲಿ । ಅಗಸ್ತ್ಯ ಋಷಿಯರ ॥೧೮॥ ಅಗಸ್ತ್ಯ ಆಶ್ರಮ'ಅಕೋಲೆ'ಯಲ್ಲಿ। ಅನ್ನಾ ಈ ಕನಕಾಈ ಅಗಸ್ತ್ಯದುರ್ಗ ಎಲ್ಲಿ । ಗೋದೆ ಗ್ರಾಮದ (ಅಮೃತವಾಹಿನಿ) ಪ್ರವರಾ-ಗೋದಾ ಸಂಗಮದ ಬಳಿ । ಹಾಗೇ, ನಿಧಿ ನಿವಾಸ ॥೧೯॥ ರಾಮಟೇಕದಲ್ಲಿ ಶಿವ-ಸ್ವರೂಪ ಸ್ಥಾನ। ಕೌಂಡಿಣ್ಯ ಪುರದಿ ಮತ್ತೊಂದು ಸ್ಥಾನ । ಮಲಯಗಿರಿ ಕೃತಮಾಲೆಯ ತೀರದಿ ಆಯ್ತು ಸ್ಥಾಪನ । ಪೋಥಿಯೀಲ ಪರ್ವತದಲ್ಲಿ ॥೨೦॥ ಕೋಲ್ಹಾಪುರದಲ್ಲಿ ಇಹುದು ಒಂದು । ಹಾಗೇ ವೇದಾರಣ್ಯದಲ್ಲಿ ಮತ್ತೊಂದು । ಕನ್ನಡ ನಾಡಿನ ಬ್ರಹ್ಮಗಿರಿಯಲ್ಲಿ ಇನ್ನೊಂದು । ಜಾವಾ-ಸುಮಾತ್ರಾ ದ್ವೀಪದಲ್ಲಿಯೂ ॥೨೧॥ ಅಗಸ್ತ್ಯ ಆಶ್ರಮ ಬಂಗಾಲದಲ್ಲಿ । ನೇಪಾಳ, ತಿಬೇಟ, ಭೂತಾನದಲ್ಲಿ । ಮಾನಸ ಸರೋವರದ ಬಳಿ-।-ಕೂಡ ಸ್ಥಾಪಿಸಿದರು॥೨೨॥ ಗಯಾ-ತಂಜಾವರಗಳಲ್ಲಿ । ಅಗಸ್ತ್ಯ ಮೈಲ-ಅಗಸ್ತ್ಯಶೃಂಗದಲ್ಲಿ । ಮತ್ತೊಂದು ಸಿಂಧೂ ನದಿಯ ಬಳಿ । ಒಂದೊಂದು ತೀರ್ಥ ಸ್ಥಾಪಿಸಿದರು ॥೨೩॥ ಸರಸ್ವತಿಯ ಪುಷ್ಕರ ತೀರ್ಥದಿ । ತಾಮ್ರ ಪರ್ಣಿಯ ತೀರದಿ । ಮಹಾನದಿ ಮತ್ತು ಗಯಾ ಸಿರಸದಿ । ಬ್ರಹ್ಮರಸ ಆಶ್ರಮ ॥೨೪॥ ಉದ್ಯಂತಕ ಪರ್ವತದಿ, ಪ್ರಭಾಸ ಪಟ್ಟಣದಿ । ಸರಸ ಕಂಬುಜ, ಜಾವಾ ಸಿಲೋನದಿ । ಟಾಕಳಿ

೫೫

ಘೋಕೇಶ್ವರದಿ । ಅಗಸ್ತ್ಯ ಆಶ್ರಮಗಳಿಹವು ॥೨೫॥ ನರ್ಮದಾ ತೀರದಿ ಅನೇಕ । ವಿಂದ್ಯ ಪರ್ವತದಿ ವಿಶೇಷ ಏಕ। ಹಿಮಾಲಯದಿ ಅಗಸ್ತ್ಯವಟಿಯಲ್ಲಿ ಏಕ । ಹೀಗಿಹವು ಆಶ್ರಮ ಎಷ್ಟೋ।॥೨೬॥ ಕೈಯ್ಯಲ್ಲಿ ಗುದ್ದಲಿ ತಕ್ಕೊಂಡು ಅಗಸ್ತ್ಯರು । ಪ್ರತ್ಯಕ್ಷ ಒಕ್ಕಲುತನ ಮಾಡುವರು । ನೀರಾವರಿ, ಮಳೆಗಾಲ ನಿಯಂತ್ರಿಸುವರು। ಮಾಡಿ ಗೋಪಾಲನದ ಮಾರ್ಗದರ್ಶನ ॥೨೭॥ ಯುದ್ಧಶಾಸ್ತ್ರ, ಅಥರ್ವ ವಿದ್ಯೆ। ಮಾಟ, ವೈದ್ಯಕಿ ವಿದ್ಯೆ। ಯೋಗ, ಅಧ್ಯಾತ್ಮ, ದ್ವೈತಾದ್ವೈತ ವಿದ್ಯೆ-।-ಗಳ ಪ್ರಸಾರ ಮಾಡುವರು ಸರ್ವತ್ರ ॥೨೮॥ ಪರ್ವತದಲ್ಲಿ ಹಿಮ । ಇಹವು ಅನೇಕ ಆಶ್ರಮ । (ದಕ್ಷಿಣೋತ್ತರ) ಧ್ರುವಗಳಲ್ಲಿ ಅವರ ಗಮಾಗಮ । ನಿತ್ಯ ತಪಶ್ಚರ್ಯೆಗಾಗಿ ॥೨೯॥ ಸಪ್ತ ಖಂಡಯುಕ್ತ ಪೃಥ್ವಿಯ। ಜ್ಞಾನ ಗಳಿಸಿಹರು ಅಗಸ್ತ್ಯ ॥೩೦॥ ಸಾಗರ ಆಶ್ರಮಗಳ ಕೊಟ್ಟರು ಪ್ರತ್ಯಯ। ಅದ್ಭುತ ಲೀಲೆ ತೋರಿ ॥೩೧॥ ನಾನಾ ಆಶ್ರಮ, ತೀರ್ಥಸ್ಥಾನಗಳು । ತಪಶ್ಚರ್ಯೆಯ ಸ್ಥಾನಗಳು । ಶಿಷ್ಯರ ನಿವಾಸ ಸ್ಥಾನಗಳು । ಸ್ಥಾಪಿಸಲ್ಪಟ್ಟಿಹವು ಅಗಸ್ತ್ಯರಿಂದ ॥೩೧॥ ಮೇಘ ಮಂಡಲದಲ್ಲಿ ನವಗ್ರಹದ । ಆಶ್ರಮ ಸ್ಥಾಪಿಸಿದರು ನಾನಾ ವಿಧ । ಅಂತರಿಕ್ಷೆಯಲ್ಲಿಯೂ ಶಕ್ತಿಯುಕ್ತದ । ಅಗಸ್ತ್ಯಾಶ್ರಮ ಸ್ಥಾಪಿಸಿದರು ॥೩೨॥ ಅಖಂಡ ವಿದ್ಯಾಸಾಧನೆ । ಉಗ್ರ ತಪಗಳ ಯೋಜನೆ । ಶಿವ-ಬ್ರಹ್ಮ-ವಿಷ್ಣು ತತ್ವಗಳನ್ನೇ । ಸಾಧಿಸಿದರು ಸಾಮರ್ಥ್ಯದಿಂದ ॥೩೩॥ ತಾರಾರೂಪ ತಾಳಿದನಂತರ । ನಭದಲ್ಲೂ ಮಾಡಿದರು ವಿದ್ಯಾದಾನ ಅಪಾರ । ಪಂಚತತ್ವ, ತ್ರಿದೇವ ಇಹರು ಅಗಸ್ತ್ಯರ ।

೫೬

ಚರಣದಲ್ಲಿ ನತಮಸ್ತಕ ॥೩೪॥ ಯಾಯಾ ಸಾಗರ ಜಲ ಸ್ಪರ್ಶಿಸಿದರು। ಆ ಆ ಸ್ಥಲ ಆಕ್ರಮಿಸಿದರು । ಆ ಎಲ್ಲ ಸ್ಥಲದವರೇ ಆದರು। ಸರ್ವತ್ರ ಸಂಚರಿಸಿ ಅಗಸ್ತ್ಯರು ॥೩೫॥ ಈ ಕಾರಣದಿಂದೇ ಅಗಸ್ತ್ಯರು । ಸೃಷ್ಟಿ ವ್ಯಾಪಕರಾದರು। ಹಾಗೇ ಪಂಚ ತತ್ವ ನಿಯಂತ್ರಕರೂ । ಅಲೌಕಿಕ ಬಲ ಸಂಪನ್ನ ॥೩೬॥ ಸ್ಥಿರಿಸಬೇಕು ಮನುಜರ ಜೀವನ। ಸಾತ್ವಿಕತೆಯಿಂದ ಉಕ್ಕಿ ಬರಬೇಕು ಮನ । ಅಹಂಕಾರ, ಗರ್ವದ ಆಗಿ ಹನನ । ತಾಳಬೇಕು ಪ್ರೇಮ-ಭಕ್ತಿ॥೩೭॥ ಈ ಕಾರಣಗಳಿಂದೇ ಅಗಸ್ತ್ಯರು । ವಿವಿಧ ವಿದ್ಯಾಪೀಠ ಸ್ಥಾಪಿಸಿದರು । ನಿರ್ಧಾರದಿಂದ ವಿದ್ಯಾದಾನ ಮಾಡಿದರು । ಹರ್ಷದಿಂದ ಜನರಿಗೆ ॥೩೮॥ ಸಮುದ್ರ ಕುಡಿದು ಮರಳಿಸಿದರು। ಅಂತೇ ಜಲಸ್ವಾಮಿ ಆದರು । ಮಳೆ, ಜಲಪಾತ ಕೆರೆ ಆದಿ ನಿರ್ಮಿಸಿದರು । ಅವುಗಳ ಕೂಡ ಸ್ವಾಮಿ ಆದರು ॥೩೯॥ ಅಗಸ್ತ್ಯ ಸ್ಥಾನಗಳಿಹವು ಅಗಣಿತ । ವಿದ್ಯಾದಾನಕ್ಕಾಗಿ ವಿಖ್ಯಾತ । ಅದಕ್ಕೆ ಆಗಿದೆ ನಾಮ ನಿಶ್ಚಿತ-।- 'ಅಗಸ್ತ್ಯಾಶ್ರಮ ॥೪೦॥ ಬ್ರಹ್ಮ-ವಿಷ್ಣು-ಮಹೇಶ ತತ್ವ। ಅಗಸ್ತ್ಯತತ್ವದಲ್ಲಿ ಆಗಿಹವು ಮಿಶ್ರಿತ । ಆಗಿ ಏಕನಿಷ್ಠ ಪಂಚತತ್ವ । ಜ್ಞಾನರೂಪ ಅಗಸ್ತ್ಯರ ॥೪೧॥ ಪರತತ್ವ ಭೂತಗಳಲಿ ಅಸೀಮಿತ । ಅಗಸ್ತ್ಯತತ್ವದಲ್ಲಿಯೂ ಅನುಸ್ಯೂತ (ಅಂತರ್ಭೂತ) । ಏಕಮೇವ ನಿಃಶೇಷ ಅದ್ವೈತ-।- ಹುಟ್ಟಿಹುದು ಅದರಲ್ಲಿ ॥೪೨॥ ವಿದ್ಯಾ-ಕಲಾದಿಗಳ ಸ್ವಾಮಿ ವಿನಾಯಕ । ಅಗಸ್ತ್ಯರ ಅಣ್ಣ-ಗಣನಾಯಕ । ಸ್ವಯಂ ಸಿದ್ಧ ಅಗಸ್ತ್ಯರ ಪ್ರಸಾರಕ । ಸಿದ್ಧಿ ವಿನಾಯಕ ॥೪೩॥ ಅಂತೇ ಅಗಸ್ತ್ಯ ವಿದ್ಯಾಪೀಠ ಆದವು ಸರ್ವತ್ರ । ವಿದ್ಯಾದಾನದಲ್ಲಿ ವಿಶ್ವಂಭರ, ಬ್ರಹ್ಮ, ವಿಷ್ಣು, ಮಹೇಶ, ಇಂದ್ರಾದಿ ಸುರ । ಅಗಸ್ತ್ಯರ



ಸಹಾಯಕರು ॥೪೪॥ ಮಾಡುತ್ತಿದ್ದರು ಅಗಸ್ತ್ಯರ ಮುಖಾಂತರ । ಋಷಿ-ಗಣ ಜ್ಞಾನದ ಸ್ವೀಕಾರ । ರಾಮ-ಕೃಷ್ಣ -ಇಂದ್ರಾದಿ ದೇವ ಅವತಾರ । ಲಭಿಸುತ್ತಿದ್ದರು ಮಾರ್ಗದರ್ಶನ ॥೪೫॥ ಮಾನವರನ್ನು ಮಾಡಲು ಸುಸ್ಥಿರ । ಯೋಜಿಸಿದರು ಪ್ರವರ-ಗೋತ್ರ । ಮಾಡಿ ಅತರ್ಕ್ಯ ಲೀಲೆ, ಸಂಚಾರ । ಮಾಯೆ ಸ್ಥಾಪಿಸಿದರು ॥೪೬॥ ಅಗಸ್ತ್ಯ ವಿದ್ಯೆ ಇಹವು ಬಹುವಿಧ । ಸರ್ವ ಋಷಿಯರಲ್ಲಿ ಕಲ್ಯಾಣಪ್ರದ । ಬ್ರಹ್ಮ ಮಾನಸ ಪುತ್ರರಲ್ಲಿ ಅಗಾಧ । ಬ್ರಹ್ಮ ದೇವ ಮಾನ್ಯ ॥೪೭॥ ವ್ಯೋಮ ಅಂತರಿಕ್ಷ, ಭೂಲೋಕ-।-ಗಳಲಿ ಋಷಿ-ಗುರುಕುಲ ಅನೇಕ। ಮಾಡಲು ಅವುಗಳ ಸಂಘ ಏಕ। ಬ್ರಹ್ಮ ಹೇಳಿದರು ವ್ಯಾಸರಿಗೆ ॥೪೮॥ ಗಣೇಶ, ಸ್ಕಂದ ನಾರದ ಅಗಸ್ತ್ಯ । ಎಲ್ಲರೂ ಮಾಡಿ ಐಕ್ಯ । ವಿನಂತಿಸಿದರು ಜ್ಞಾನ ಬೋಧಿಸುವ ಯುಕ್ತಿಯ । ಬ್ರಹ್ಮ ದೇವರಿಗೆ ॥೪೯॥ ಅಗಸ್ತ್ಯರಿಗೆ ಪರಾಶರಸುತ ವ್ಯಾಸ-।- ಅವರ ಬಗ್ಗೆ ಮಮತೆ ಇತ್ತು ವಿಶೇಷ । ಪರಾಶರರಿಗೂ ಅಗಸ್ತ್ಯರಿದ್ದರು ಖಾಸ ।-ಮಾನ್ಯ ಸದ್ಗುರುಗಳೆಂದು ॥೫೦॥ ಪರಾಶರ ತೇಜ ಅತ್ಯಂತ । ಆಗಿದ್ದಿತು ವ್ಯಾಸರಲ್ಲಿ ಪ್ರಾಪ್ತ । ಬ್ರಹ್ಮಾಜ್ಞೆ ಪಾಲಿಸಲು ವ್ಯಾಸರಿದ್ದರು ಸಮರ್ಥ। ತಪೋಬಲದ ಕಾರಣ ॥೫೧॥ ತಮ್ಮ ವಿದ್ಯಾ ಪರಂಪರೆ ಅಗಸ್ತ್ಯರು । ವ್ಯಾಸರ ಕಡೆಗೆ ಒಪ್ಪಿಸಿದರು । ಅದ್ವೈತ ತತ್ವಜ್ಞಾನ ಬೋಧಿಸಿದ್ದರು । ಅಗಸ್ತ್ಯರೇ ಮೊದಲು ॥೫೨॥ '' ಅಂತೇ ಸರ್ವಗುರುಕುಲ । ಮತ್ತು ವಿದ್ಯಾಪೀಠ ಸಕಲ। ಒಪ್ಪಿಸಿದರು ತತ್ಕಾಲ । ವ್ಯಾಸರ ಕಡೆಗೆ ॥೫೨॥ ಶ್ರೀ ವೇದ ನಿರ್ಮಿತಿಯ ನಂತರ । ಋಷಿ ವಿದ್ಯಾಪೀಠ ಏಕತ್ರ-।-

ಆಗಿ, ಪಡೆದವು ವ್ಯಾಸಪೀಠವೆಂದು ನಾಮಾಂತರ'' । ಅಂದಿಹರು ನಾರದಮುನಿ ।।೫೪।। ಪ್ರಸನ್ನ ಆದರು ಗಜಾನನ। ಅಗಸ್ತ್ಯ, ಸ್ಕಂದ, ಸುತರು, ಶಿವನ । ನಾರದ, ಋಷಿ ವ್ಯಾಸರಿಗೆ ಮಾಡಿ ಕಥನ । ತಿಳಿಸಿದರು ಸಂಕಲನದ ಯೋಜನೆ।।೫೫।। ಅಗಸ್ತ್ಯಾದಿ ವೈದಿಕ ಋಷಿ ವರ । ಬ್ರಹ್ಮರ ವಿಖ್ಯಾತ ಮಾನಸ ಪುತ್ರ । ಅಂತೇ ಬ್ರಹ್ಮ ದೇವರು ವೇದ ಚತುರ-।-ವ್ಯಾಸರಿಗೆ ಒಪ್ಪಿಸಿದರು ।।೫೬।। ಹೀಗೆ ಇಹುದು ಅಗಸ್ತ್ಯ ಕಥೆ ಅದ್ಭುತ । ಮಾತ್ರಬೇಕು ಶುದ್ಧ ಕೇಳುವವನ ಚಿತ್ತ । ಅಗಸ್ತ್ಯ ಮಾಡುವರು ಲೋಕಹಿತ । ತಪಮಗ್ನ ಇದ್ದೂ ।।೫೭।। ಕೇಳಿರಿ 'ಅಗಸ್ತ್ಯಗೋತ್ರ' ಕಥನ । ಚಿತ್ತ ಮಾಡಿಟ್ಟು ಸಾವಧಾನ। ಕಶ್ಯಪರ ನಂತರ ಗೋತ್ರ ಮಹನ । ಸ್ಥಾಪಿಸಿದರು ಅಗಸ್ತ್ಯರೇ ।।೫೮।। ಯೋಗ, ಮಾಟ, ಅರ್ಥವಣೆ, ಚಮತ್ಕಾರ । ಆದಿ, ಸುರಾಸುರರ ವಿದ್ಯೆಗಳಲಿ ಶ್ರೇಷ್ಠತರ -।-ಇದ್ದೂ ಪರೋಪಕಾರಿ ವಿದ್ಯೆ ಅಗಸ್ತ್ಯರ ।ನೋಡಿ, ನತಮಸ್ತಕ, ದೇವ ದಾನವ ।।೫೯।। 'ಅಗಸ್ತ್ಯ-ಗೋತ್ರ' ಆದನಂತರ ಪ್ರಸ್ಥಾಪಿತ । ಆದರು ಅನೇಕ ಬ್ರಹ್ಮಪುತ್ರರೂ ಪ್ರೇರಿತ । ಕೃತ, ಪ್ರಲಹ,ಪೌಲಸ್ತ್ಯಾದಿ ಅನ್ಯಗೋತ್ರ-।-ದವರೂ 'ಅಗಸ್ತ್ಯ ಗೋತ್ರಿ'ಗಳಾದರು ।।೬೦।। ಉತ್ತರ (ಭಾರತ)ದಲ್ಲಿ ಹುಟ್ಟಿದ್ದರೂ । ದಕ್ಷಿಣದ ಸ್ವಾಮಿ ಆದರು । ಉತ್ತರ-ದಕ್ಷಿಣ ಐಕ್ಯ ಸಾಧಿಸಿದರು । ಉದಾರ ಅಗಸ್ತ್ಯರು ।।೬೧।। ಮಹಾಮುನಿ ಸ್ವಯಂ ಸಿದ್ಧ ಅಗಸ್ತ್ಯರು । ಹಿತಕರ್ತೃ, 'ಗೋತ್ರ' ಪ್ರವರ್ತಕರು । ಇಡೀ ವಿಶ್ವವನ್ನೇ ಆಜ್ಞೆಯಲ್ಲಿಟ್ಟರು । ಅತುಲ ಕಾರ್ಯಮಾಡಿ ।।೬೨।। ಅಗಸ್ತ್ಯರಿಹರು ಅನನ್ಯ ಭಕ್ತ । ಶಿವ-ತತ್ವದಲ್ಲಿ ನಿತ್ಯರತ । ಆಗಿ ತ್ರಿದೇವರಿಗೆ ಸಾಕ್ಷೀಭೂತ । ಅವರ ಆಜ್ಞೆಯಲ್ಲಿಹರು



।।೬೩।। ಋಷಿ ಗಣದಕಾರ್ಯ ಅದ್ಭುತ । ಸ್ವರ್ಗನರಕ, ಇಹ ಲೋಕಗಳಲಿ ಖ್ಯಾತ । ಬಡಿವಾರ ಮೆರೆಸಿಯೂ ಜ್ಞಾನದ ಮಹತ್-।- ಅಗಸ್ತ್ಯರುಳಿದರು ಅಜ್ಞಾತ ।।೬೪।। ಗಣೇಶ ಸ್ಕಂದ, ಋಷಿವರ । ಒಪ್ಪಿದರು ಶ್ರೇಯ ಅಗಸ್ತ್ಯರ । ದೇವೇಂದ್ರರ ಸಹ ಸಕಲ ದೇವರ । ರಕ್ಷಣೆ ಅಗಸ್ತ್ಯರಿಂದೇ !।।೬೫।। ಸಂಕಟ ಬಂದಾಗ ತ್ರಿಲೋಕಗಳಲ್ಲಿ। ಬರುವರು ಆಶ್ರಯಕ್ಕೆ ಅಗಸ್ತ್ಯರ ಬಳಿ । ತರುಬಿ ಅವರು ಸಂಘರ್ಷದ ದಾಳಿ । ಸಂಧಿ -ಮಾಡಿಸುವರು ।।೬೬।। ಅಗಸ್ತ್ಯರಿಗೆ ಸಿದ್ಧಿ ಅರ್ಥವದಲ್ಲಿತ್ತು । ಮಾಟ-ಮಾಯೆಯೂ ಗೊತ್ತು । ಯುದ್ಧ ಕಲೆಯಲ್ಲೂ ಪ್ರಭುತ್ವ ಇದ್ದಿತು। ತ್ರಿದೇವ ವಶವಾಗಿದ್ದರು ।।೬೭।। ಅಗಸ್ತ್ಯರಿಗೆ ವಶ ಕೃಷಿ ವಿದ್ಯೆ । ಪಾರ್ವತಿ ಮಾತೆ -ಶಿವತತ್ವ ಸುಧೆ!। ವೃಷಭಾದಿ ಚತುಷ್ಪಾದಗಳದೇ -।- ಮಾಡಿದರು ಬಳಿಕೆ ಹೊಲತನಕ್ಕೆ ।।೬೮।। ವ್ಯವಸ್ಥಾಪನೆಯ ವಿದ್ಯೆ । ಸಮಾಜ-ನ್ಯಾಯ ವಿದ್ಯೆ । ಸಿದ್ಧಮಾಡಿ ಮಾನವ ವಿದ್ಯೆ -।- ಸಾಮ್ರಾಜ್ಯ ಆಳಿದರು ।।೬೯।। ಇಹುದು ಅವರ ಗೋತ್ರಘನ । ಸಾಧಿಸಿದರು ಲೋಕ ಕಲ್ಯಾಣ । ಮಾಡಿ ದೇವ ಕಾರ್ಯ ಮಹನ । ತ್ಯಜಿಸಿ ಸ್ವಾರ್ಥ ವೃತ್ತಿ ।।೭೦।। ಗೋತ್ರ ಸ್ವೀಕರಿಸಿ, ವಿಸ್ತರಿಸುವರು ಇಹರು ಅನೇಕ। ಮಾತ್ರ ಅಗಸ್ತ್ಯರಿದ್ದರು ತಪಸಾಧನೆಯಲ್ಲಿ ಗರ್ಕ। ವಿದ್ಯಾ-ವ್ಯಾಸಂಗ ಲೋಕ ಹಿತದ ಬೋಧಕ। ಇವಷ್ಟೇ ಗೊತ್ತು ಅವರಿಗೆ ।।೭೧।। ತ್ರಿದೇವರಿಗೆ ಇಹವೇ ಗೋತ್ರ ? । ಸರ್ವರಿಗೇ ಸಮಾನ ಕರುಣೆ ಅವರ ! । ಹಾಗೇ ಶಿವ-ತತ್ವ ಸ್ವರೂಪ ಅಗಸ್ತ್ಯರ । ನಿತ್ಯ ಮುಕ್ತ ಹಸ್ತ ಕೃಪೆಯ ।।೭೨।। ಪರಮ ತತ್ವದ ಕೌತುಕ ನಿರ್ಗುಣ ।

ತ್ರಿದೇವರ ಲಕ್ಷ್ಯ ಸಕಲರ ಚಿಂತನ (ಚಿಂತೆ) । ಬ್ರಹ್ಮದೇವರ ಅಸ್ವಸ್ಥ ಮನ । ಇಹಲೋಕದ ಸ್ಥಿರತೆಗಾಗಿ ।।೭೩।। ಮೃತ್ಯುಲೋಕ ಇದ್ದರೂ ಶ್ರೇಷ್ಠತರ । ಮಾನವ ಸೃಷ್ಟಿ ಭೋಗ ತತ್ಪರ । ಜನ್ಮ-ಮೃತ್ಯು-ಅನಿವಾರ್ಯ ಸ್ಥಿರ । ಅಂತೇ-ಮುಕ್ತಿ ಆವಶ್ಯಕ (ಇಹುದು)।।೭೪।। ಅಗಸ್ತ್ಯರು ಇಹಲೋಕ ಸರಿಪಡಿಸಿದರು । ಪರ್ಜನ್ಯ, ಅನ್ನಬ್ರಹ್ಮ ಋತುಚಕ್ರ ನಿರ್ಮಿಸಿದರು । ಮಾತ್ರ ಸ್ವಂತ ಅಲಿಪ್ತ ಉಳಿದರು । ಇದೇ ಸೋಜಿಗ ।।೭೫।। ಅಗಸ್ತ್ಯರು ಪ್ರತ್ಯಕ್ಷ ಪರತತ್ವ ಸತ್ । ಅವರಿಗಿಲ್ಲ ಜನ್ಮ-ಮರಣ ನಿಶ್ಚಿತ । ಲೋಕ ಸ್ಥಿರತೆಗಾಗಿ ಸಾಂಪ್ರತ್ । ಕೌತುಕ ಅವರದು ।।೭೬।। ಅಗಸ್ತ್ಯರು ಇದ್ದರೂ ಮಾನವ ರೂಪಧಾರಿ । ಭೋಗಗಳಲ್ಲಿ ಉದಾಸರು ಭಾರೀ । ಊರ್ಧ್ವರೇತ ಸ್ವೀಕೃತ ಬಾಲ-ಬ್ರಹ್ಮಚಾರಿ । ಪ್ರತ್ಯಕ್ಷ ಸಿದ್ಧ ಋಷೀಶ ಮುನಿ ।।೭೭।। ಮುನಿಗೆ ಸಾಧಿಸಲು ಪುರುಷಾರ್ಥ । ಗೃಹಸ್ಥಾಶ್ರಮವೇ ವಿಧಿಯುಕ್ತ । ಹೀಗೆ ಪ್ರಾರ್ಥಿಸಿದರು ತಿಳಿಸಿ ಮತ । ಗೋತ್ರಜರು ಏಕತ್ರ ಬಂದು ।।೭೮।। ಗೋತ್ರಜರು ವಿನಂತಿಸಿದರು ಅಗಸ್ತ್ಯರನ್ನು । ನೀವು ಸ್ವೀಕರಿಸದಿರೆ ಗೃಹಸ್ಥಾಶ್ರಮವನ್ನು । ಗೋತ್ರ ನಾಶವಾಗುವದು ಇನ್ನು । ಮುಕ್ತಿ ದೊರೆಯುವುದು ಅಸಾಧ್ಯ।।೭೯।।ಅಗಸ್ತ್ಯರಿಗೆ ಕಂಡರು ಮೃತ ಗೋತ್ರಜರು । ನರಕದಲ್ಲಿ ಬಳಲುತ್ತಿದ್ದರು ಯಾರು । ಮುಕ್ತಿಗೆ ಪಾತ್ರ ಇದ್ದಿಲ್ಲ ಅವರು । ಪಿಂಡ ದಾನವು ವ್ಯರ್ಥ ಆಗಿದ್ದಿತ್ತು ।।೮೦।। ಅಗಸ್ತ್ಯ ನಿಃಸಂತಾನ ಇಹರು । ಹೇಗೆ ಗೋತ್ರ ಸ್ಥಾಪಿಸಲು ಅರ್ಹರು? । ಹೇಗೆ ಸದ್ಗತಿ ಪಡೆವರು? । ಇದನು ಅರಿತರು ಅಗಸ್ತ್ಯರು ।।೮೧।। ಮಾಡಲು (ಗೋತ್ರಜ) ಪಿತರರ ಉದ್ಧಾರ । ಅಗಸ್ತ್ಯ ಕೊಟ್ಟರು ವಚನ ಸತ್ವರ । ಗೃಹಸ್ಥಾಶ್ರಮ ಸ್ವೀಕರಿಸುವ ನಿರ್ಧಾರ-।- ಮಾಡಿ ಸಿದ್ಧ



ಋಷೀಶ್ವರರು ।।೮೨।। ಹುಡುಕ ತೊಡಗಿದರು ಯೋಗ್ಯ ಭಾರ್ಯಾ । ಅಯೋನಿ ಸಂಭೂತ ಶಕ್ತಿ ಮಾಯಾ। ಬರಲಿಲ್ಲ ಮನಸಿಗೆ ಕನ್ಯೆಯಾ । ವ್ಯಥಿತರಾದರು ಅಗಸ್ತ್ಯರು ।।೮೩।। ನಮಿಸಿ ಬ್ರಹ್ಮನನ್ನು ಸಿದ್ಧ ಅಗಸ್ತ್ಯ । ಕನ್ಯಾರತ್ನ ನಿರ್ಮಿಸಿದರು ಅನನ್ಯ । ಆಯ್ದು ಜೀವಗಳ ಅವಯವ ಅಪ್ರಮೇಯ । ವಿಶ್ವಮಾನ್ಯ ಸುಲಕ್ಷಣ ।।೮೪।। ಕೌಂಡಿಣ್ಯ ಪುರವಾಸಿ ವಿದರ್ಭ 'ನಿಮಿ' ಅರಸ । ಪುಣ್ಯ-ಸತ್ವ-ಶೀಲರಲ್ಲಿ ಸರಸ । ರಾಣಿ ಪತಿವ್ರತೆ ಯಾವಗೆ ವಶ । ಅವಗೆ ಕೊಟ್ಟರು ಸಾಕಲು ಈ ಕನ್ಯೆ ।।೮೫।। ಇಬ್ಬರೂ ಸಾಕಿದರು ಕನ್ಯೆ ಸುಲಕ್ಷಣ । 'ಲೋಪಾಮುದ್ರೆ' ಎಂದಾಯಿತು ನಾಮಕರಣ । ಲೋಪಿಸಿ ಜೀವ ಮಾತ್ರಗಳ ಮುದ್ರೆ-ವದನ। ನಿರ್ಮಿಸಿದ್ದರು ಅಲೌಕಿಕ ಕನ್ಯೆ।।೮೬।। ಇಬ್ಬರಿಗೂ ಜೀವ ಹತ್ತಿತ್ತು ಅವಳ । ಬೆಳೆಯುತ್ತಿದ್ದಳು ಪಲ-ಪಲ। ಚಂದ್ರಕಲೆಯಂತೆ ಸತೇಜ ವಿಮಲ । ಅಕ್ಕರೆಯಿಂ ಕೌಂಡಿಣ್ಯ ಪುರದಿ ।।೮೭।। ಹದಿನಾಲ್ಕು ವಿದ್ಯಾ, ಅರವತ್ನಾಲ್ಕು ಕಲಾ । ಹುಟ್ಟಿನಿಂದೇ ಇದ್ದವು ಅವಳಲ್ಲಿ ಎಲ್ಲಾ । ತಪದ ಛಂದ ಹತ್ತಿತ್ತು ಇದ್ದರೂ ಅಬಲಾ । ಮಹಾಶಕ್ತಿ, ಭಾಸಿಸುತ್ತಿದ್ದಳು ।।೮೮।। ಆದಳೆಂದು ವಿವಾಹ-ಯೋಗ್ಯ। ಗೋತ್ರಜ-ವಿನಂತಿಸ ಹತ್ತಿದರು ಅಗಸ್ತ್ಯ । 'ಹಿಡಿದು ನೀವು ಅವಳ ಕೈಯ । ಗೃಹಸ್ಥಾಶ್ರಮ ಸ್ಥಾಪಿಸಿರಿ' !।।೮೯।- ಮಾಡುದಕೆ ಅಭಿವಚನ ಪೂರ್ತಿ । ಅಗಸ್ತ್ಯ ಪ್ರಕಟಿಸಿದರು ದಿವ್ಯ-ಲಿಂಗಮೂರ್ತಿ । ರಾಮಟೇಕದಲ್ಲಿ ಆಯ್ತು ದೇವರ ಅತಿ-।-ಗದ್ದಲ, ಕೌತುಕ ನೋಡಲು ।।೯೦।। ಯೋಜಿಸಿದಂತೆ ಬಂದರು ಅಗಸ್ತ್ಯರು ಕೌಂಡಿಣ್ಯಪುರಕ್ಕೆ ದೂತನನ್ನು

ಕಳಿಸಿದರು । 'ನಿಮಿ' ಅರಸನಿಗೆ ಬರುವ ಉದ್ದೇಶ ತಿಳಿಸಿದರು । ರಾಮಟೇಕಕ್ಕೆ ಕರೆದು ॥೯೧॥ ನಿಮಿ ರಾಜಾ-ರಾಣಿಯರು। ಘೋರ ಚಿಂತೆಯಲ್ಲಿ ಬಿದ್ದರು । ಸಿದ್ಧಯೋಗಿ ಅಗಸ್ತ್ಯ ವೃದ್ಧರಿದ್ದರೂ । ಅವರ ಕನ್ಯೆ ಕೋಮಲ ಬಾಲಿಕೆ! ॥೯೨॥ ಹೇಗೆ ಕೊಡಲಿ ಅಗಸ್ತ್ಯರಿಗೆ ಕನ್ಯೆಯನ್ನು ? । ನಿರ್ಮಿಸಿದವನು ತಂದೆ ಆಗುವನು । 'ಭಾರ್ಯೆ' ಎಂದು ಕೊಡಲೇ ತಂದೆಗೆ ಮಗಳನ್ನು । ಘೋರ ಪಾಪ ಇದು! ॥೯೩॥ ಇಬ್ಬರೂ ಮಾಡಿದರು ವಿಚಾರ । ಚಿಂತೆ ಹತ್ತಿತು ಅವರಿಗೆ ಘೋರ । ಇದ್ದಳು ಲೋಪಮುದ್ರೆ ಚತುರ । ಶಾಂತಿಸಿದಳು. ಅವರನ್ನು ॥೯೪॥ ''ಸಾಕಿದ್ದೀರಿ ಪ್ರೀತಿಯಿಂದ ನನ್ನ । ನೀವೇ ತಾಯಿ -ತಂದೆ ಇನ್ನ । ಕೊಡಿ 'ವಧು' ಎಂದು ಹೇಳಿದಂತೆ ಮುನ್ನ । ಅಗಸ್ತ್ಯರಿಗೇ ಹರ್ಷದಿಂ॥೯೫॥ ಇದಂತೂ ವಿಧಿ-ಲಿಖಿತ । ಗೋತ್ರಜರ ಉದ್ಧಾರ ಪ್ರೀತ್ಯರ್ಥ। ಅಗಸ್ತ್ಯ ಪತ್ನಿ ಆಗುವದು ನಿಶ್ಚಿತ । ಶೋಕ ತರುಬಿರಿ''॥೯೬॥ ಲೊಪೆಯ ನೋಡಿ ಸಾಮಂಜಸ್ಯವನ್ನು ।'ನಿಮಿ' ರಾಜ, ರಾಣಿಗೆ ಅಂದನು। ''ನಿಶ್ಚಯಿಸಿ ಲಗ್ನ ಮುಹೂರ್ತವನ್ನು । ಆಮಂತ್ರಿಸು ಆಗಸ್ತ್ಯರನ್ನು ॥೯೭॥ ನಾನು ಕೊಡದಿದ್ದರೆ ಕನ್ಯೆಯನ್ನು । ಘೋರ ಪಾಪ ಮಾಡುವೆನು । ಶಾಪದಿಂದ ದಗ್ಧ ಮಾಡುವರು ನನ್ನನ್ನು । ಸಂತಾಪಿಸಿ ಅಗಸ್ತ್ಯರು ॥೯೮॥ ಲಗ್ನ ಆಯ್ತು ಕೌಂಡಿಣ್ಯಪುರದಲ್ಲಿ । ಶುದ್ಧೀಕರಣ ವಿಧಿ ಸಿಂಧು ತಟದಲ್ಲಿ । ವಾಸಿಸಲು ಬಂದರು ಕಾಶಿಯಲ್ಲಿ । ಗೃಹಸ್ಥಾಶ್ರಮ ಸ್ಥಾಪಿಸಿ ॥೯೯॥ಸದನದಲ್ಲಿ ಇಟ್ಟೊಡೆ ಚರಣ । ವೈರಾಗ್ಯದಿಂ ತುಂಬಿತು ಮನ । ಮಾಡ ಇಚ್ಛಿಸಿತು ತಪ ಘನ ।ಸಂಸಾರ ತ್ಯಜಿಸಿ ॥೧೦೦॥ ಅಗಸ್ತ್ಯ ಅಂದರು ಲೋಪಾಮುದ್ರೆಗೆ ''ಇನ್ನು । ತಗೆದು ಇಡು ಎಲ್ಲ ಆಭರಣಗಳನ್ನು । ಉಡು



ಇಂದಿನಿಂದೇ - ನಾರು ಬಟ್ಟೆಗಳನು । ಋಷಿಯ ಹೆಂಡತಿಯಂತೆ ॥೧೦೧॥ ಲೋಪೆಗೂ ವೈರಾಗ್ಯ ಬಂದಿತ್ತು ಘೋರ । ಮರೆತಳು ಗೃಹಸ್ಥಾಶ್ರಮ, ಸಂಸಾರ । ಮಾಡಿ ತಪದ ಸಂಕಲ್ಪ ಕಠೋರ । ಪತಿಯನ್ನು ಅನುಸರಿಸಿದಳು ॥೧೦೨॥ ವಿಂಧ್ಯಾದ್ರಿಗೆ ಹೋಗಿ ಅಗಸ್ತ್ಯರು । ಉಗ್ರ ತಪ ಆಚರಿಸಹತ್ತಿದರು । ಹನ್ನೆರಡು ಸಹಸ್ರ ವರ್ಷ ತಪಿಸಿದರು । ಕಾಶಿಯಲ್ಲಿ ತಪಿಸಿದಳು ಲೋಪೆ ಅವರಷ್ಟೇ ॥೧೦೩॥ ಮಾತಾ ಲೋಪೆಯ ಬಳಿ ಗೋತ್ರಜ ಬಂದರು । 'ನಮ್ಮನ್ನು ಸತ್ವರ ಉದ್ಧರಿಸಿರಿ' ಅಂದರು । 'ವಂಶಜರನು ಹುಟ್ಟಿಸಿರಿ ನೀವಿಬ್ಬರೂ । ಗೃಹಸ್ಥಾಶ್ರಮಕ್ಕಾಗಿ'' ॥೧೦೪॥ ಲೋಪಾಮುದ್ರೆ ಕಾಶೀಕ್ಷೇತ್ರದಲ್ಲಿ । ತಪಿಸಹತ್ತಿದಳು ಭರದಲ್ಲಿ । 'ಸ್ವಾಮಿಯು 'ಮನೆಗೆ' ಮರಳಲಿ । ವಚನ ಪೂರ್ತಿಗಾಗಿ' ಎಂದು ॥೧೦೫॥ ಹೀಗೆ ಸಾವಿರ ವರ್ಷ ಕಳೆದವು । ಅಗಸ್ತ್ಯ ಚರಣ ಪ್ರಕಟಿಸಿದವು । ಸ್ವಯಂಭೂಲಿಂಗ ಸ್ವರೂಪ ಯಾರವು। ಕಾಶೀ ಕ್ಷೇತ್ರದ ಗೃಹದಿ ॥೧೦೬॥ ಮಾತ್ರ ವೈರಾಗ್ಯ ಹೋಗಲಿಲ್ಲ ಸತ್ವರ । ಪರೋಪರಿಯ ಸೇವೆ ಮಾಡಿದರೂ ಅಗಸ್ತ್ಯರ । ನೋಡಿ ಸದ್ವರ್ತನೆ ಸುಲಕ್ಷಣೆ ಸ್ತ್ರೀ ಸುಂದರ । ಅಗಸ್ತ್ಯ ಆಗುತ್ತಿದ್ದರು ಮೋಹಿತ ॥೧೦೭॥ ಅಗಸ್ತ್ಯರು ಬಯಸಿದಾಗ ತನ-ಮಿಲನ । ನಾಚುತ್ತಿದ್ದಳು ಲೋಪಾ ಸುನಯನ । ಆವಶ್ಯಕ ಪುತ್ರ ಪ್ರೀತ್ಯರ್ಥ ಸಂಘಟನ । ಪತಿ-ಪತ್ನಿಯದು ॥೧೦೮॥ ಮಾತ್ರ ಮತ್ತೆ ಅಗಸ್ತ್ಯರ ವೈರಾಗ್ಯ ಬೆಳೆಯಿತು । ಲೋಪೆಯ ಮನ ನೊಂದಿತು । ಪತಿಯ ಕೂಟ ಬಯಸ ಹತ್ತಿತು । ಶೃಂಗಾರ ಲೀಲೆಗಳಿಂದ ॥೧೦೯॥ ಮನೋಕಾಮನೆ ಸಫಲವಾಯ್ತು । ಅಗಸ್ತ್ಯರದೂ ಮನ

ಆತುರ ಆಯಿತು । ಪುರುಷಾರ್ಥ ಯೋಗ್ಯ ಕ್ಷಣ ಬಂದಿತು । ಆಗಲೋಪೆ ತಡವಿದಳು ॥೧೧೦॥ ''ಹೇ ನಾಥ ತನ್ನಿರಿ
ವಸ್ತ್ರ ಫ್ರಾವರಣ । ಶೃಂಗಾರಿಸಲು, ಆಭರಣ । ಗೃಹ ವಿಶಾಲ ಭವ್ಯ ಸಂಪನ್ನ । ರಾಜ ವೈಭವಯುಕ್ತ'' ॥೧೧೧॥ ಅವಳ
ಮಾನಸ ಅಗಸ್ತ್ಯ ತಿಳಿದರು । ಮಾತ್ರ ಸಂಯಮ ತೋರಿದರು । ನಾನೊಬ್ಬ ಋಷಿ ಸನ್ಯಸ್ತ' ಅಂದರು । ಸ್ವಂತ ದಾರಿದ್ರ್ಯ
ಸ್ವೀಕೃತ ॥೧೧೨॥ ನೀವಿಹರಿ ಸ್ವಯಂ ಸಿದ್ಧ ಅಗಸ್ತ್ಯ । ನಿಮಗಿಲ್ಲ ಏನೇನೂ ಅಸಾಧ್ಯ । ಇಹುದು ತಪೋಬಲ ಸಾಮರ್ಥ್ಯ ।
ಪುರುಷಾರ್ಥ ಸಾಧಿಸಲು ॥೧೧೩॥ ಬಿಡದೆ ಸ್ವಲ್ಪ ಕೂಡ ತಪ । ಯತ್ನ ಮಾಡಬಲ್ಲಿರಿ ಆಮಾಪ । ಆಗದು ಪ್ರಪಂಚದ
ತಾಪ ॥ ಪುರುಷಾರ್ಥಕ್ಕಾಗಿ ॥೧೧೪॥ ತಪಶ್ಚರ್ಯೆ ಸ್ವಾರ್ಥಕ್ಕಾಗಿ ಇಲ್ಲ । ಇಹುದು ವಿಶ್ವಕಲ್ಯಾಣಕ್ಕಾಗಿ ಸಕಲ । ಮಾಡಲು
ಸೃಷ್ಟಿಹಿತ ಸಬಲ । ಇಹುದು ನನ್ನ ಯೋಜನೆ ॥೧೧೫॥ ಲೋಪಾಮುದ್ರೆ ಇದ್ದಳು ಸತಿ-ಮಹನ । ಮನದಲ್ಲಿಯೇ
ತಿಳಿದಳು ಹೇತು ಗಂಡನ । ಪತಿ-ಪಾದದಲ್ಲಿ ಮಾಡಿದಳು ಅರ್ಪಣ । ಆ ಸತ್ಯ ಪ್ರತಿವ್ರತೆ ॥೧೧೬॥ ಅಗಸ್ತ್ಯ ಹೋದರು
ಕರ್ತವ್ಯ ವಹಿಸಲು । ಪತ್ನಿಯ ಇಚ್ಛೆ ಪೂರೈಸಲು ॥ ರಾಜ್ಯ-ರಾಜ್ಯಗಳಲಿ ಅರ್ಜಿಸಲು । 'ಭಿಕ್ಷಾಂದೇಹಿ'ಗಾಗಿ ॥೧೧೭॥
ಅರಸರು ಕೊಡುವಾಗ ಧನ । 'ಇದಲ್ಲ ನಮಗಾಗಿ ದ್ರವ್ಯಾರ್ಜನ । ಈ ಧನ ಪ್ರಜೆಯ ಹಿತದ ಕಾರಣ । ಅವರ ಸುಖ
ಸೌಕರ್ಯಕ್ಕಾಗಿ ॥೧೧೮॥ ಕೇವಳ ಅತಿರಿಕ್ತ ಇದ್ದೊಡೆ ಧನ । ಕೊಡಿ ಅದನು ಲೋಕಕಲ್ಯಾಣ-।-ಕ್ಕಾಗಿ. ಮಾತ್ರ ಪೀಡಿಸಿ
ಪ್ರಜೆಯನ್ನ । ಕೊಡಬೇಡಿ ನಮ್ಮ ಸಂತೋಷಕ್ಕಾಗಿ' ॥ (ಎಂದು ಹೇಳುತ್ತಿದ್ದರು ಅಗಸ್ತ್ಯರು ಅರಸರಿಗೆ) ॥೧೧೯॥
ಅರಸರು ಆದರು ಕುಂಠಿತ । ಕೊಟ್ಟು ಅಲ್ಪ-ಸ್ವಲ್ಪ ಸಂಪತ್ । ಅಂದರು - 'ಹೋಗಿರಿ ಇಲ್ವಲ-ವಾತಾಪಿ-ಪ್ರತ ।

೬೫

ಬದಾಮಿ ನಗರಕ್ಕೆ'' ॥೧೨೦॥ ಲೋಪಾಮುದ್ರಾ-ಅಗಸ್ತ್ಯರು । ಸರ್ವ ಭವಿಷ್ಯ ತಿಳಿದಿದ್ದರು । ಪೃಥ್ವಿಯ ಸ್ಥಿರಿಸಿ
ಮಾಡಬೇಕು ನಾವೆಲ್ಲರೂ । ಋಷಿಗಣ ರಕ್ಷಿಸಿ ॥೧೨೧॥ ಇದೇ ಕಾರಣ ಅಗಸ್ತ್ಯರು । ಬದಾಮಿ ನಗರಕ್ಕೆ ಹೊರಟರು।
ದಾರಿಯಲ್ಲಿ ರಹಸ್ಯ ಅರಿತರು । ಇಲ್ವಲ ವಾತಾಪಿಯರ ॥೧೨೨॥ ಇಬ್ಬರಲ್ಲೂ ಇದ್ದಿತು ದುಷ್ಟ ಶಕ್ತಿ । ಋಷಿ-ಯಜ್ಞ,
ಭಂಗಿಸುವ ಕೃತಿ । ಪುಣ್ಯಶೀಲರನ್ನು ಭಕ್ಷಿಸುವ ಪ್ರವೃತ್ತಿ । ಬೆಳೆಯುತ್ತಿತ್ತು ಭಯಂಕರ ॥೧೨೩॥ ಭಕ್ಷಿಸಲು
ಋಷಿ-ಮುನಿಯರನ್ನು । ಇಬ್ಬರೂ ಮಾಡುತ್ತಿದ್ದರು ಕಪಟಗಳನ್ನು । ಮಾಯೆ ತೋರಿ, ಯೋಜಿಸಿ ಕಾರಸ್ಥಾನಗಳನ್ನು ।
ಕಾಡುತ್ತಿದ್ದರು ಸಜ್ಜನರನ್ನು ॥೧೨೪॥ ವಾತಾಪಿಯಿಂದ ಮಾಡಿಸುತ್ತಿದ್ದ ಇಲ್ವಲ । ಪುಷ್ಟ ಹೋತು ತಂದು,
ಸಕಲ-।-ಋಷಿಗಳ ತಿನಿಸುತ್ತಿದ್ದ ತೋರಿ ಬಲ । ಹೊಟ್ಟೆ ಶೀಳಿಸಿ (ಆಹೋತು) ತರಿಸುತ್ತಿದ್ದ ಮರಳಿ ॥೧೨೫॥ ಈ
ರೀತಿ ಎಷ್ಟೋ ಋಷಿಯರನ್ನು ಕೊಂದನು । ಮಾನವ, ದೇವರನ್ನೂ ದಂಡಿಸಿದನು । ಅಗಸ್ತ್ಯ ನಿಶ್ಚಿತಿಸಿದರು, ಈ
ದೈತ್ಯರನ್ನು । ಕೊಲ್ಲೋಣ ತಡಮಾಡದೆ' ॥೧೨೬॥ ಅಗಸ್ತ್ಯ ಮಾಡಿದರು ಸಮ್ಮುಖ ಗಮನ । ಮಾಡಲು ದೈತ್ಯ ವೃತ್ತಿಯ
ದಮನ । ಇಬ್ಬರೂ ಮಾಡಿದರು ಅಗಸ್ತ್ಯರ ಸಮ್ಮಾನ । ಅಗಸ್ತ್ಯರಾದರು ಪ್ರಸನ್ನ ॥೧೨೭॥ ಇಲ್ವಲ ಅಂದ, ''ಮಾಡಿರಿ
ಆಜ್ಞಾ । ನಿಮ್ಮ ಸೇವೆಗಾಗಿ ಹೇ ಸರ್ವಜ್ಞಾ'' । ''ಸಂಪತ್ತಿ; ಧನ-ವಸ್ತ್ರ-ಆಭರಣ ನಾನಾ । ಕೊಡಿರಿ ನಮಗೆ'' ಅಂದರು
ಅಗಸ್ತ್ಯರು ॥೧೨೮॥ ಇಬ್ಬರೂ, 'ಚಲೋ ಸಂಧಿ ! ಈ ಅಗಸ್ತ್ಯರು । ಅತಿಶೂರ, ಸಿದ್ಧ ಮುನಿ ಇದ್ದರೂ -।-ಕಪಟ

೬೬

ಮಾಯೆಯಿಂ ವದ್ಧ್ಯರು।' ಹೀಗೆ ವಿಚಾರ ಮಾಡಿದರು ॥೧೨೯॥ ದೈತ್ಯರು ಮನದಲ್ಲಿ 'ಮೊದಲು ಆತಿಥ್ಯ ಸ್ವೀಕರಿಸೋಣ । ನಂತರ ಸತ್ಕಾರ, ಉಪಹಾರ ಚೆನ್ನ । ಬೇಕಾಗಿದ್ದನ್ನೆಲ್ಲ ತಕ್ಕೊಳ್ಳೋಣ । ಎಲ್ಲ ನಮ್ಮದೇ ಎಂದು ತಿಳಿದು'॥೧೩೦॥ ನಿತ್ಯದಂತೆ ಮಾಂಸ, ಮೀನ ಭೋಜನ । ಕೊಟ್ಟರು ಅಗಸ್ತ್ಯರಿಗೆ ತುಂಬುವಂತೆ ಮನ । ಲಾಘವ, ಆಗ್ರಹ ನೋಡಿ ಋಷಿ ಶಾರ್ದೂಲನ । ಹೊಟ್ಟೆ ತುಂಬಿತು ॥೧೩೧॥ ಇಲ್ವಲನ ಕೇಳಿದರು ಅಗಸ್ತ್ಯರು । ''ವಾತಾಪಿ ಎಲ್ಲಿ ಹೋಗಿಹರು? । ಕರೆಯಿರಿ ಬೇಗ, ತಕ್ಕೊಳ್ಳಿ ಇಬ್ಬರೂ । ಕೂಡಿಯೇ ಆಶೀರ್ವಾದ ।'' ॥೧೩೨॥ ಇಲ್ವಲ, 'ಇಷ್ಟರಲ್ಲೇ ಬಂಧು ವಾತಾಪಿ ಬರುವನು । ತಾವು ತಕ್ಕೊಳ್ಳಿರಿ ತಾಂಬೂಲವನ್ನು''। ಅಗಸ್ತ್ಯ, ಹೊಟ್ಟೆಯ ಮೇಲೆ ಕೈ ತಿರುಗಿಸಿ, 'ವಾತಾಪಿಯನ್ನು । ಕರಗಿಸಿದೆನು' ಅಂದರು ॥೧೩೩॥ ಇಲ್ವಲನಿಗೆ ತಿಳಿಯಲಿಲ್ಲ ಲೀಲೆ ಅಗಸ್ತ್ಯರ । 'ವಾತಾಪಿ। ವಾತಾಪಿ॥ 'ಎಂದು ಕರೆದ ಸತ್ವರ । ಬರಲಿಲ್ಲ ಎಂದು ಅಂಜಿದ ಭಯಂಕರ । ಮತ್ತೆ ಮತ್ತೆ ಕೂಗಿದ ॥೧೩೪॥' ಎಲೆ ಇಲ್ವಲಾ, ಎಂದು ಅಗಸ್ತ್ಯರು, । 'ಇಹನು ನನ್ನ ಹೊಟ್ಟೆಯಲಿ ವಾತಾಪಿ' ಅಂದರು, 'ವಾತಾಪಿ ಮುಕ್ತನಾದನು ಬಾ ಕರೂ... । ನೀನೂ ಅವನ ಹಾದಿಯಿಂದೆ' ॥೧೩೫॥ ನಡೆದು ಬಂದನು ಇಲ್ವಲನು । ಅಗಸ್ತ್ಯ ನಕ್ಕರು ನೋಡಿ ಬಾಲತನವನ್ನು । ಪ್ರತಾಪಿ ವೀರ ಅಗಸ್ತ್ಯರು ಅವನನ್ನು । ಒಂದೇ ಮುಷ್ಠಿಯಲಿ ಕೆಡವಿದರು ॥೧೩೬॥ ಯೋಗ-ಬಲ ಪ್ರಯೋಗದಿಂ ಅಗಸ್ತ್ಯರು । ಇಲ್ವಲ-ವಾತಾಪಿಯರ ಸಂಪತ್ತಿಯನ್ನು ಸುಲಿದರು । ಯಾವದಿತ್ತು ಅರ್ಜಿತ ಸಜ್ಜನರು । ಅಗಸ್ತ್ಯ ಮರಳಿದರು ಆಶ್ರಮಕ್ಕೆ ॥೧೩೭॥ ಇತ್ತು ಪಚನಶಕ್ತಿ ಅಗಸ್ತ್ಯರ ।



ಕರಗಿಸುವಷ್ಟು ಸಪ್ತಸಾಗರ । ಅಲ್ಲಿ, ಇಲ್ವಲ ವಾತಾಪಿ ಯಂಥ ದೈತ್ಯರ-।-ದೇನು ಕೌತುಕ ಅಗಸ್ತ್ಯರಿಗೆ ॥೧೩೮॥ ಈ ಅಗಸ್ತ್ಯ ಕಥೆಯ ಮಾಡಿ ಸ್ಮರಣ । ಮಾಡಿದೊಡೆ ಪ್ರಸಾದ ಗ್ರಹಣ । ಉದರ ದೋಷದ ಆಗಿ ಪಲಾಯನ । ಸ್ವಾಸ್ಥ್ಯ ಲಭಿಸುವದು ॥೧೩೯॥ ಇರಲಿ ಉದರದ ರೋಗ ಯಾವದೇ । 'ಅಗಸ್ತ್ಯ' ಎಂದು ಉದರದ ಮೇಲೆ ಕೈಯಾಡಿಸಿದೊಡೆ ।ವಾತ-ಪಿತ್ತಾದಿ ದೋಷ ಓಡೇ-।-ಹೋಗುವವು ದೇಹದಿಂದ ॥೧೪೦॥ ಇಲ್ವಲ ವಾತಾಪಿ ನಷ್ಟ ಆದರು । ಋಷಿಗಳೆಲ್ಲ ಸುಖಿಯಾದರು । ವಾತಾಪಿಯಿಂದ ವಧಿಸಿಕೊಂಡವರೂ । ತಾತ್ಕಾಲ ಜೀವಿತರಾದರು ॥೧೪೧॥ ದೇವ, ಋಷಿ ಲೋಕ ಆನಂದಿಸಿತು । ಮಾನವ ಇಹ-ಲೋಕವೂ ಸುಖಿ ಆಯ್ತು । ತ್ರಾತಾ-ದಾತಾರನ ದರ್ಶನವಾಯಿತು । ಅಗಸ್ತ್ಯ ರೂಪದಲ್ಲಿ ।೧೪೨॥ ಅಗಸ್ತ್ಯರು ಸುಲಿದು ತಂದ ಧನ । ಲೋಪೆಯ ಮುಂದಿಟ್ಟರು ತಕ್ಷಣ । ಲೋಪಾಮುದ್ರೆ ಆದಳು ಅತಿ ಪ್ರಸನ್ನ । ಮಾತ್ರ ಅಗತ್ಸ್ಯರಿಗೆ ಬಂದಿತು ಮತ್ತೆ - ವೈರಾಗ್ಯ ॥೧೪೩॥ ಲೋಪೆ ಇದ್ದಳು ವಚನಬದ್ಧ । ಪುತ್ರ ಪ್ರಾಪ್ತಿಗಾಗಿ ಉತ್ಸುಕಳಿದ್ದ । ವಿನಂತಿಸಿದಳು ಹಿಡಿದು ಅವರ ಪಾದ । ಮಾತ್ರ ಅಗಸ್ತ್ಯ ಮನ್ನಿಸರು ॥೧೪೪॥ ಅಗಸ್ತ್ಯ ಅಂದರು, ''ಸಿದ್ಧ ತಪಸ್ವಿ ನಾನು । ಸತತ ಲೋಕಕಲ್ಯಾಣದಲ್ಲಿದ್ದವನು । ಅದರಲ್ಲಿ ನೀ ತರುಣಿ, ನಾ ಅತಿ ವೃದ್ಧನು । ತಪಸ್ಯೆ ಭಂಗಿಸದಿರು ॥೧೪೫॥ ಲೋಪಾಮುದ್ರೆ ತಿಳಿ ಹೇಳ ಹತ್ತಿದಳು । ಸಮಾಗಮಕ್ಕೆ ಉದ್ಯುಕ್ತ ಮಾಡತೊಡಗಿದಳು । ತಪೋಭಂಗ ಮಾಡೆನೆಂದು' ಪ್ರತಿಜ್ಞೆ ಮಾಡಿದಳು । ಆವ್ಹಾನಿಸಿ ಅವರ ಪೌರುಷವನ್ನು ॥೧೪೬॥ ಅಗಸ್ತ್ಯ ಸಮ್ಮತಿ ಕೊಟ್ಟರು । ಸಂಯೋಗಕ್ಕೆ ಸಿದ್ಧರಾದರು । ಮಾತ್ರ ಗಹನ ಪ್ರಶ್ನೆ

ಕೇಳಿದರು । ಲೋಪೆಯನ್ನು ಪರೀಕ್ಷಿಸಲು ॥೧೪೭॥ ''ಬೇಕು ನಿನಗೆ ಮಕ್ಕಳೆಷ್ಟು । ಸಹಸ್ರ, ದಶಸಹಸ್ರ ವಾ ಮತ್ತೆಷ್ಟು? । ಅಥವಾ 'ಎಲ್ಲರ ಸಮ ಒಂದೇ, ಹೇಳಿಷ್ಟು । ಉತ್ತರ ಕೊಡು ನನಗೆ'' ॥೧೪೯॥ ಲೋಪೆ ಸದಾಚಾರಿಣಿ ಇದ್ದಳು । ಸುಲಕ್ಷಣಿ ತೈಲಬುದ್ಧಿಯವಳು । 'ಒಬ್ಬನೇ ಪುತ್ರ ಸಹಸ್ರಾವಧಿ ಸಮಾನ ಬೇಕೆಂದಳು । 'ಇಂಥ ಸಮರ್ಥ ಪುತ್ರನ ಕೊಡಿ ನನಗೆ' ॥೧೪೯॥ ಅಗಸ್ತ್ಯರು ಆದರು ಸಂತುಷ್ಟ । ಲೋಪಾಮುದ್ರೆಗೆ ಇಷ್ಟ-।-ನಿರ್ಮಿತಿಗಾಗಿ ಸುಪುತ್ರ ಪುಷ್ಟ । ಸಮ್ಮಿಲಿತರಾದರು ॥೧೫೦॥ ಬೀಜ ಧಾರಣೆಯ ಪಶ್ಚಾತ್ ಅಗಸ್ತ್ಯರು । ತಪಸಾಧನೆಗಾಗಿ ಹೋದರು । ತಪಿಸಲು ಹೋದರು ಅವರ ಸತಿಯರೂ । ಬೀಜಧಾರಣೆಯ ನಂತರ ॥೧೫೧॥ ಕಳೆದವು ಬಹಳದಿನ । ತೀರಲಿಲ್ಲ ತಪಸಾಧನ। ಜನ ಕೇಳ ಹತ್ತಿದರು ಲೋಪೆಯನ್ನ । ಎಂದು ಪಾಲಿಸುವಿ ಪ್ರತಿಜ್ಞೆ? ॥೧೫೨॥ ಮಹಾಮಾತೆ ಆದಳು ಪ್ರಸೂತ । ಪುತ್ರ ಹುಟ್ಟೇ ವಿದ್ಯಾ-ಪಾರಂಗತ । ಸಿದ್ಧಋಷಿ 'ದೃಢಸ್ಯುತ'। ಇದ್ದನು ಅಲೌಕಿಕ ದಿವ್ಯ ॥೧೫೩॥ ಅಗಸ್ತ್ಯರ ತೇಜ ಅತುಲ । ಇದ್ದ ಅವರಿಗಿಂತ ಪುತ್ರ ಪ್ರಬಲ । ಅಗಸ್ತ್ಯ ವಿದ್ಯೆಯಲ್ಲೂ ಚಪಲ । ದ್ವಿತೀಯ ಅಗಸ್ತ್ಯ ಶಿವಾತ್ಮ ॥೧೫೪॥ ಅಗಸ್ತ್ಯರ ವಿದ್ಯಾಪೀಠ ಸಾಕಿದ । ಗೋತ್ರಜರ ಉದ್ಧಾರ ಮಾಡಿದ । ಅಪೂರ್ವ ಕತೃತ್ವ, ಕಾರ್ಯಗಳಿಂದ । ಸಪ್ತರ್ಷಿಯ ಮಾನ ಪಡೆದ ॥೧೫೫॥ ಹುಟ್ಟೇ ಅನ್ನ ರೂಪನು । ಯಜ್ಞಕ್ಕಾಗಿ ಅಗ್ನಿ ವಾಹಕನು । 'ಇಗ್ಮ ವಾಹ' ಈ ಹೆಸರು ಪಡೆದನು । ಈ ಗುಣಕ್ಕಾಗಿ ॥೧೫೬॥ ಆದನು ಶಿವಸಿದ್ಧರಲ್ಲಿ ಪ್ರಸಿದ್ಧ । 'ದೃಢಸ್ಯೂತ'ನೊಬ್ಬನೇ ಋಷಿಸಿದ್ಧ । 'ಅಗಸ್ತ್ಯ'ನೆಂದೇ ಅನಿಸಿಕೊಂಡ । ಅಲೌಕಿಕ ಅಗಸ್ತ್ಯ ಪುತ್ರ ॥೧೫೭॥ ಅಗಸ್ತ್ಯ ವಿವಾಹಕತೆ ಇದೆ ಅದ್ಭುತ । ಓದಿದೊಡೆ ಹೊಂದುವವು



ಲಗ್ನ ಅಕಸ್ಮಾತ । ಸಂತತಿ ಸಂಪತ್ತಿ ಆಗುವದು ಪ್ರಾಪ್ತ । ಸುಖ, ತೃಪ್ತಿ ॥೧೫೮॥ ಮಾಡಬೇಕು ಪ್ರಪಂಚ-ಪರಮಾರ್ಥ । ಅವೆರಡರಲ್ಲಿ ಭೇದ-ಕ್ವಚಿತ । ಕರ್ಮ ಬಿಡದೇ ಸಂತತ । ಆಚರಿಸಿರಿ ತಪ ॥೧೫೯॥ ಇಚ್ಛೆ ಇಟ್ಟು ನಿಃಸೀಮ । ಶರಣ ಹೋದೊಡೆ ಅಗಸ್ತ್ಯರಿಗೆ ನಮ್ಮ । ಅಪತ್ಯ ಹುಟ್ಟಿ ಕುಶಲತಮ । ಇಹಪರ ಸುಖ ಪಡೆವವು ॥೧೬೦॥ ಇತಿ ಪಂಚಮ ಅಧ್ಯಾಯ ಆಯ್ತು ಪೂರ್ಣ । ಉಪಯುಕ್ತ ಮಹಾಮಾತಾ-ಅಗಸ್ತ್ಯ ವಿವಾಹಾಖ್ಯಾನ । ಮಾಡಲು ಪುರುಷಾರ್ಥ ಸಂಪಾದನ । ಮತ್ತು ಅಗಸ್ತ್ಯರ ಆಶೀರ್ವಾದ ॥೧೬೧॥ ಮಹಾಕಾವ್ಯ, ವೇದ ಪುರಾಣ । ಹಾಡಿಹವು ಅಗಸ್ತ್ಯಲೋಪಾ ಗಾನ । ಅಗಸ್ತ್ಯರ ಆಜ್ಞೆಯಂತೇ ಕಥನ । ಮಾಡಿಹೆನು ಇಲ್ಲಿ ॥೧೬೨॥ ಈ ಅಧ್ಯಾಯ ಓದಿದೊಡೆ ಪೌರುಷ ಪ್ರಾಪ್ತಿ ॥ ಗೃಹಸ್ಥರಿಗೆ ಸುಖ, ತೃಪ್ತಿ । ದುಃಖ-ಸಂಕಟಗಳ ಮುಕ್ತಿ । ಆಗುವದು ತಕ್ಷಣ ॥೧೬೩॥ ಅಗಸ್ತ್ಯರು ಹೇಳಿದಂತೆ ಕಥಾ । ಬಣ್ಣಿಸಿದ್ದೇನೆ-ಹೊತ್ತಿಗೆರೂಪ-ಗಾಥಾ । ವಾಚಕರಿಗೆ ಸುಖ-ಶಾಂತಿ ತತ್ವತಾ । ದೊರೆವುದು ನಿಃಸಂದೇಹ ॥೧೬೪॥

ಇತಿ ಪಂಚಮೋಧ್ಯಾಯ ಸಮಾಪ್ತ । ಓಂ ದೇವ, ಋಷಿ ಮುನಿ, ಸಿದ್ಧ ಅಗಸ್ತ್ಯಾರ್ಪಣಮಸ್ತು ।
ಅಸ್ತು । ಶುಭಂ ಭವತು ಶುಭಂ ಭವತು, ಶುಭಂ ಭವತು ॥

**॥ ಐದನೇ ಅಧ್ಯಾಯ ಸಮಾಪ್ತ ॥**

॥ಓಂ॥

# ಅಗಸ್ತ್ಯ ಮಹಾತ್ಮ್ಯೆ

## ಆರನೇ ಅಧ್ಯಾಯ

॥ ಓಂ ಶ್ರೀ ಗಣೇಶಾಯ ನಮಃ ॥ ಓಂ ಸರಸ್ವತ್ಯೈ ನಮಃ ॥ ಓಂ ಶ್ರೀ ಅಗಸ್ತ್ಯೆ ನಮಃ ॥

ಓಂ ಪರಮಾತ್ಮನೇ ನಮಃ । ಓಂ ಶ್ರೀ ಸಿದ್ಧಿ ವಿನಾಯಕಾಯ್ಯೆ ನಮಃ । ಓಂ ಶ್ರೀ ಅಂಬಾಮಾತಾಯ್ಯೆ ನಮಃ । ಓಂ ಶ್ರೀ ಸಕಲದೇವತಾಯ್ಯೆ ನಮಃ । ಓಂ ದೇವ, ಋಷಿ, ಮುನಿ ಸಿದ್ಧ ಶ್ರೀ ಅಗಸ್ತ್ಯಾಯ್ಯೆ ನಮಃ । ಅಗಸ್ತ್ಯ ಅಲೌಕಿಕ ಶಕ್ತಿಮಾನ । ಸಕಲ ಸಿದ್ಧರ ಶಿರೋಮಣಿ ಘನ । ಶಿವಸ್ವರೂಪ ಅಲೌಕಿಕ ಸುವರ್ಣಕಣ । ಜಲ, ಕೃಷಿ ಆರೋಗ್ಯ, ಯುದ್ಧ ದೇವತಾ ।೧॥ ಅನನ್ಯ ಭಕ್ತಿಯಿಂ ಶರಣ ಹೋಗಬೇಕು । ಕೃಷಿಕ್ಷೇತ್ರ ಸುಫಲಿತ ಮಾಡಬೇಕು । ಜಲ-ಜೀವನ ಲಭಿಸಬೇಕು । ಆರೋಗ್ಯದೊಂದಿಗೆ ಶತ್ರು ದಮನ ।೨॥ ಯುದ್ಧ ಕೌಶಲ್ಯ ಲಭಿಸಲು । ಅಗಸ್ತ್ಯರೇ ಏಕಮೇವ ಖಲು । ಅಗಸ್ತ್ಯ ಯಶ ದೇವತೆ ಬಲು । ಆಯುಧ, ಮಾಯೆಯ ಸಹಾಯಕ ।೩॥ ದೈವತ ಅಥರ್ವಣ ಮಹಾನಿಧಿ। ಅಗಸ್ತ್ಯರಿಹರು ಜಲಸ್ವಾಮಿ, ಜಲಧಿ । ನಿಸರ್ಗ ಋತುಚಕ್ರ ಸ್ಥಾಣು ಕೃಪಾದಧಿ । ಅಗಸ್ತ್ಯರೊಬ್ಬರೇ ।೪॥ ಅವರಿಗೆ

೭೧

ಹೋದೊಡೆ ಶರಣ । ಸಾಧ್ಯ ವಿದ್ಯಾ, ವೇದ ಅಥರ್ವಣ । ಕೃಷಿ ಆರೋಗ್ಯ ಯುದ್ಧ ನಿಪುಣತನ । ನೀತಿ ಶಾಸ್ತ್ರ ಕಲಾದಿ ।೫॥ ಅಗಸ್ತ್ಯಋಷಿ ಲೊಕ ರುಚಿರ । ಸ್ವಯಂ ಶಿವರೂಪ ಅವತಾರ । ತ್ರಿದೇವ, ಪಂಚತತ್ವ ನಿಮಿತ್ತ ಮಾತ್ರ। ಪುತ್ರ ಮಿತ್ರಾ ವರುಣರ ।೬॥ ಅಗಸ್ತ್ಯರಲ್ಲಿ ಬೇಕು ಶ್ರದ್ಧೆ ಅಸೀಮ । ಅನ್ಯ ಯಾರೂ ಸುರರಿಲ್ಲ ಅಗಸ್ತ್ಯರ ಸಮ । ಸರಿಪಡಿಸಲು ಪ್ರಪಂಚ ಅಸಮ । ಅವರಿಗೇ ಶರಣ ಹೋಗಿರಿ ।೭॥ ಆಡೆನು ನಾ ಮನದ ನನ್ನ । ಮಾಡಿಸುವದು ಶಿವತತ್ವವೇ ಕಥನ । ಕೆಟ್ಟ ಕಾಲ ದಾಟಲು, ಸ್ಮರಣ । ಅಗಸ್ತ್ಯರದೇ ತಾರಕ ।೮॥ ಅಗಸ್ತ್ಯರು ಕೂಡಿಸಿ ಇಂದ್ರ-ಮರುತರನ್ನು । ಸ್ಥಾಪಿಸಿದರು ಪರ್ಜನ್ಯ ಚಕ್ರವನ್ನು । ಋತು ಚಕ್ರದ ಅಖಂಡ ಗಾಲಿಯನ್ನು । ನಿರ್ಮಿಸಿದರು ಅಗಸ್ತ್ಯರೇ ।೯॥ ಕುಡಿದು ಸಾಗರವನ್ನು ಅಗಸ್ತ್ಯರು । ಮತ್ತೆ ಮೊದಲಿನಂತೇ ಪ್ರಕಟಿಸಿದರು । ಸ್ವಾಮಿ ಜಲ-ಜೀವನದ ಆದರು । ಸರ್ವಸಾಕ್ಷಿ ಪರಮಾತ್ಮರೇ ।1೧೦॥ ಎಷ್ಟೋ ಪ್ರಕಟಿಸಿದವು ಸರೋವರ । ಹಾಗೇ ಕೆರೆ-ಭಾವಿ ಆದಿ ಮನೋಹರ । ಸ್ವಂತ ಇದ್ದ ಹಾಗೇ ಮಾನಸ ಪುತ್ರ । ಜಲ ಕುಂಭ ನಿರ್ಮಿಸಿದರು ।1೧೧॥ ಸಹಾಯ ಮಾಡದರು ಪ್ರವಾಹ ಹರಿಸಲು । ಭಗೀರಥನಿಗೆ ಹೊಳೆ ಪೃಥ್ವಿಗೆ ತರಲು । ಗಂಗಾ-ಗೋದಾ ಪ್ರವರಾದಿ ನದಿಗಳು । ಶಿವಪ್ರಸಾದದಿಂದ ನಿರ್ಮಿಸಲ್ಪಟ್ಟವು ।1೧೨॥ ಸ್ವಂತ ಹುಟ್ಟಿಸಿ ಕಾವೇರಿಯನ್ನು। ಜಲಸಂಪನ್ನ ಮಾಡಿದರು ದಕ್ಷಿಣವನ್ನು । ತಾಮ್ರಪರ್ಣಿಯಂಥ ಎಷ್ಟೋ ಪ್ರವಾಹಗಳನ್ನು । ಸ್ವಂತ ನಿರ್ಮಿಸಿದರು ।1೧೩॥ ಎಲ್ಲಿ ಎಲ್ಲಿ ನೀರು

೭೨

ಇಹುದು । ಅಲ್ಲಿ ಅಲ್ಲಿ ವಾಸ ಅಗಸ್ತ್ಯರದು । ಅಗಸ್ತ್ಯರ ಸತ್ವ ಪ್ರಭಾವದಿಂದಹುದು । ಸಮಸ್ತರ ಜೀವ-ಜೀವನವೂ॥೧೪॥ ಅಗಸ್ತ್ಯರು ಜಲದೇವರು ಸಿದ್ಧ । ಕೆರೆ, ಕಾಲುವೆ, ಒಡ್ಡು ಆದಿ ಜಲ-ಭಂಡಾರದ । ಕ್ಷೇತ್ರ ಭಾವಿ, ಕೂಪ, ಜಲಪಾತದ । ಅಗಸ್ತ್ಯ ಪೂಜೆಯಿಂ ನಿರ್ಮಿತ ॥೧೫॥ ಆಗುವರು ಮಾಡಿದೊಡೆ ಅಗಸ್ತ್ಯ ಪೂಜನ । ಜಲದೇವ, ಜಲಚರರೂ ಪ್ರಸನ್ನ । ವಸುಂಧರೆಯೂ ಮಾಡುವಳು ಧಾರಣ । ಸರ್ವರಿಗೆ ಸುಖಕಾರಕ ಜಲಾಶಯ॥೧೬॥ ಕುಂಭಜರಿದ್ದರು ಅಗಸ್ತ್ಯ ಸ್ವಂತ । ಅಂತೇ, ಸಕಲ ಕುಂಭ ಪುನೀತ । ಅಮೃತ ಕುಂಭ ರಕ್ಷಣೆ ಪ್ರೀತ್ಯರ್ಥ। ಆಯಿತು ಅಗಸ್ತ್ಯ ಅವತಾರ ॥೧೭॥ ಸಮಗ್ರ ಜಲ ವ್ಯವಸ್ಥಾಪನ । ಪರ್ಜನ್ಯದ ನಿರ್ಮಿತಿ, ಸಂಗೋಪನ । ಮಾಡುವರು ಅಗಸ್ತ್ಯ ಭಗವನ್ । ಜೀವನ-ವಾಹಕರಾಗಿ ॥೧೮॥ ಸ್ಮರಿಸಿರಿ, ತ್ರಿವಾರ ಸ್ಮರಿಸಿರಿ । ಕುಂಭ ಸ್ಥಾಪಿಸಿ ಪೂಜಿಸಿರಿ । ಅಗಸ್ತ್ಯ ಖಂಡಿತ ಪ್ರಕಟಿಸುವರು ರೀ । ಸದಾ ಪಾಲಿಸಲು ॥೧೯॥ ಅಗಸ್ತ್ಯ ಮಾಡುತ್ತಿದ್ದರು ಯಜ್ಞ ಸತತ । ಸೋಮಯಾಗವನ್ನೂ ಅವಿರತ । ಪರ್ಜನ್ಯ ಅಗಸ್ತ್ಯರ ಸುತ್ತ । ಪ್ರಕಟಿಸುತ್ತಿತ್ತು ನಿತ್ಯ ॥೨೦॥ ಶಿವತತ್ವ ಸ್ವರೂಪರು ಅಗಸ್ತ್ಯರು । ಸ್ವಯಂ ಶಿವ ಆಕಾಶರೂಪರೂ । ಮುಗಿಲಲ್ಲಿ ಜಲ ಸ್ಥಾಪಿಸಿದರು । ಅಗಸ್ತ್ಯರೂಪದಿಂ ॥೨೧॥ ಎಲ್ಲಿ ಜಲ-ಜೀವನ ಅಲ್ಲಿ ಅಗಸ್ತ್ಯರು । ಅಗಸ್ತ್ಯರಿದ್ದಲ್ಲಿ ಖಂಡಿತ ನೀರು । ಶಿವ ನಿರ್ಮಿತ ಇಹರು ಅಗಸ್ತ್ಯರು । ಜೀವಗಳನು ರಕ್ಷಿಸಲು ॥೨೨॥ ಅನ್ನ ನಿರ್ಮಿಸುವದು ಕೃಷಿ ಕ್ಷೇತ್ರ । ಅಗಸ್ತ್ಯರ ಮೂಲಕ ದೇವ ಒಕ್ಕಲಿಗರ । ಬೆಳೆಸಲು ಅನ್ನ ಉತ್ಪಾದನೆ ಶ್ರೇಷ್ಠತರ । ಅಗಸ್ತ್ಯ ವಿದ್ಯೆ ಅವಲಂಬಿಸಿರಿ ॥೨೩॥ ಅಗಿವುದು, ಹರಗುವದು, ಜಲ ಸಿಂಚನ । ಬಿತ್ತುವದು,



ಆದಿ ಶ್ರಮ ಜೀವನ -। -ಗಳಿಗೆ ಸ್ವಯಂ ಅಗಸ್ತ್ಯ ಕೃತ ಮಾರ್ಗದರ್ಶನ । ಇಹುದು ಸಹಾಯಕಾರಿ ॥೨೪॥ ಶಿವ ಕೇಳಿದರು ಅಗಸ್ತ್ಯರಿಗೆ ।ಅರ್ಪಿಸಬೇಕು ಪಶು-ಹವಿ ಹೇಗೆ? । ಇಂದ್ರ ಮರುತರ ಕಲಹದಾಗೇ । ಆಗಿದೆ ಜೀವನ ಅಸ್ತ-ವ್ಯಸ್ತ ॥೨೫॥ ಅಗಸ್ತ್ಯ ಅಂದರು, 'ಹೇ ಶಿವ, । ಕೃಷಿಯು ಕೂಡಿದರೆ ಋಷಿತತ್ವ । ಋತ್ವಿಜರಾದರೆ ಕೃಷಿ ಉದ್ಭವ। ಶ್ರಮದ ವ್ಯಯ ಆಗುವದು ವ್ಯರ್ಥ ॥೨೬॥ (ಧಾನ್ಯಬಿತ್ತಿ, ಪೀಕು ಕೈಗೆ ಬರುವತನಕ) ವಧಿಸಿ ಪಶು, ಅನ್ನ ಸ್ವೀಕರಿಸಬೇಕು। ಮತ್ತು ನಿವಾಂತ ಯಜ್ಞ ಮಾಡಬೇಕು । ಹಸಿದಾಗ ಮತ್ತೆ ಕೊಲ್ಲಬೇಕು । ಪುಷ್ಟ ಎಳೆ ಪಶು ನೋಡಿ' ॥೨೭॥ ಶಿವ ಅಗಸ್ತ್ಯರಿಗೆ ಅಂದರು, । ''ಉಪಾಯ ಹೇಳಿರಿ ಸದ್ಗುರು । ಹೇಗೆ ಪಶು, ಮಾನವ ಬಾಳುವರು। ಪರಸ್ಪರರನ್ನು ಪಾಲಿಸಿ ?'' ॥೨೮॥ ಮಹೇಶರಿಗೆ ಅಂದರು ಅಗಸ್ತ್ಯರು, । ''ಆಜ್ಞೆ ಮಾಡಬೇಕು ಮಹೇಶ್ವರರು । ವಾಹಕ ಪ್ರಾಣಿ ಆಗಲಿ ಸಹಾಯಕರು । ಕೃಷಿ ಕ್ಷೇತ್ರಕ್ಕೆ ॥೨೯॥ ಆಗುವವು ಪ್ರಾಣಿ ಸುರಕ್ಷಿತ । ಹೊಲತನಕ್ಕೆ ಸಹಾಯಭೂತ । ಪರಸ್ಪರರಿಗೆ ಉಪಯುಕ್ತ । ಮಾಡಲು ಜೀವನ ಸುಗಮ ॥೩೦॥ ಮಹೇಶ್ವರರು ಮಾಡಿ ವಿಚಾರ । ಆಜ್ಞಾಪಿಸಿದರು ಸುರರಿಗೆ ಸತ್ವರ । 'ನಿಮ್ಮ ವಾಹನಗಳಾಗಲಿ ಸಾಧನ-ತರ''। ಕೃಷಿ-ಕೆಲಸಕ್ಕೆ' ॥೩೨॥ ಅಗಸ್ತ್ಯರ ಯತ್ನದಿಂದ ಘನ । ಆನೆ ಎತ್ತು ಅಶ್ವ ಮಹಿಷಾದಿ (ದೇವರ) ವಾಹನ -।- ಪಶುಗಳಾದವು ಹೊಲತನದ ಸಾಧನ । ಅನ್ನ ನಿರ್ಮಿತಿಗಾಗಿ ॥೩೨॥ ಅಗಸ್ತ್ಯರ ಯೋಜನೆಯಿಂದ ಮಹಾನ್ ನರಪಶುಗಳು (ಎತ್ತು, ಕೋಣ ಇತ್ಯಾದಿ) ಆದವು

ಹೊಲತನಕೆ ಸಾಧನ । ನಾರಿ ಪಶು (ಹಸು-ಎಮ್ಮೆ ಇತ್ಯಾದಿ) ದುಗ್ಧೋತ್ಪಾದನ । ಮಾಡತೊಡಗಿದವು ॥೩೩॥ ಹೊಲತನದ ಕೂಡ ಪಶುಪಾಲನ । ಮಾಡಹತ್ತಿದರು ರೈತ-ಜನ । ಅಗಸ್ತ್ಯರು ವಿಧಿಪೂರ್ವಕ ಕರ್ಣ-।- ಮುದ್ರೆ ಹಾಕಿಸಹತ್ತಿದರು ॥೩೪॥ ಯಾ ಹಿಂಸ್ರ ಪಶು (ಈ ನಿಯಮ) ಪಾಲಿಸವು । ಅವು ದೈತ್ಯರೊಂದಿಗೆ ಮೆರೆದವು । ಅಂತೇ ಹವಿಗೆ 'ಬಲಿ' ಆದವು । ಅಗಸ್ತ್ಯರ ಆಜ್ಞೆಯಿಂದ ॥೩೫॥ ದುರ್ಬಲ ಚಪಲಚಂದ । (ಹೋತು, ಕೋಳಿ, ಚಿಗರೆ ಇತ್ಯಾದಿ) ಹೊಲತನಕೆ ಉಪಯೋಗಿ ಇರದ । ಪ್ರಾಣಿಗಳಾದವು 'ಹವಿ' ಯಜ್ಞದ । ಪೂರ್ವಸಂಚಿತದ ಕಾರಣ॥೩೬॥ ಅಗತ್ಸ್ಯರು ಮಾಡಿದ, ಈ ಯೋಜನ । ಇದ್ದರೂ ಪರೋಪಕಾರಿ ಚೆನ್ನ । 'ಅನ್ಯಾಯವಾಯ್ತು' ಅನ್ನುತ್ತ ಶಿವನ-।- ಕಡೆಗೆ ಹೋದವು ಕೆಲವು ಪಶು ॥೩೭॥ ಶಿವ ಅಂದರು ಅಗಸ್ತ್ಯರಿಗೆ, । ''ಆಗಿರಿ ಸಹಾಯಕ ಎಲ್ಲರಿಗೆ । ಹಿತ ಆಗುವಂತೆ ಪಶು-ಪಕ್ಷಿಗಳಿಗೆ । ಪಾಲಿಸಿ ಸುಖಿಸಿರಿ ॥೩೮॥ ಅಗಸ್ತ್ಯ ಅಂದರು, 'ಹಿಂಸ್ರ-ಪಶುಗಳ -।- ವಸತಿ ಇರಲಿ ಅರಣ್ಯಗಳಲ್ಲಿ ಕೇವಳ । ಸಾಕಿ ಜೀವ-ಮಾತ್ರಗಳ ।' ರಕ್ಷಿಸಬೇಕು ಸುಖಿಯಾಗಲು ॥೩೯॥ ಸಾಕಿದೊಡೆ ಜೀವಗಳನ್ನು । ಒಪ್ಪುವರು ದೇವರೆಂದು ಅವುಗಳನ್ನೂ । ಅವುಗಳಿಗೂ 'ಹವಿ' ಕೊಡುವರು ಚೆನ್ನು । ಹರ್ಷಿಸಿ ನರರು ॥೪೦॥ ಕೊಟ್ಟೊಡೆ ಅವುಗಳು ಕಾಟ । ಶಸ್ತ್ರದಿಂ ಜನ ತೀರಿಸುವರು ಆಟ । ಪೌರುಷ ತೋರಲು ಏಟ । ಹಾಕಿ ಶೀಳುವರು ॥೪1॥ ಅವುಗಳನ್ನು ತಿಳಿಹೇಳಿ ಭಗವನ್ । ಮಾಡಿದರು ತಮ್ಮ ಪ್ರಿಯ ವಾಹನ । ಪ್ರಸ್ಥಾಪಿತ ಮಾಡಲು ಶಕ್ತಿಮಾನ । ಹರ್ಷಿಸಲು ಜೀವ ಸೃಷ್ಟಿ ॥೪೨॥ ಸುಖಿಸಲು ಕೃಷಿಜೀವನ । ಮಾಡಿದರು ಜೀವಸೃಷ್ಟಿಯ ಪುನರುಜ್ಜೀವನ । ಶಿವ

೭೫

ನಿರ್ದೇಶನದಂತೆ ವರ್ತನ । ಇಡುವವು ಜೀವ ಮಾತ್ರ ॥೪೩॥ ನೋಡಿ ಅಗಸ್ತ್ಯರ ಕಾರ್ಯ ಪದ್ಧತಿ । ಬ್ರಹ್ಮರಾದರು ಪ್ರಸನ್ನ ಅತಿ । ನಾನು ನಿರ್ಮಿಸಿದ ಸೃಷ್ಟಿ, ಹೇ ತೀಕ್ಷ್ಣಮತೀ । ನೀ ಸಾಕಿದ್ದೀಯುಕ್ತಿಯಿಂ ॥೪೪॥ ನಿನ್ನ ಕಾರ್ಯದ ಮೇಲೆ ನಾ ಪ್ರಸನ್ನ । ನೀ ಇರುವಿ ಮಾನಸಪುತ್ರ ನನ್ನ । ನಿರ್ಮಿಸು ನೀ ವನಸ್ಪತಿ, ಔಷಧಗಳನ್ನ । ಜ್ಞಾನ ಸಿದ್ಧಿಯಿಂ ನಿನ್ನ ॥೪೫॥ ಅಗಸ್ತ್ಯ ನಿರ್ಮಿಸಿದರು 'ಅಗಸ್ತ್ಯ' ವನಸ್ಪತಿಯನ್ನು । ಇದು ಜೀವಿಸುವದು ಭೇದಿಸಿ ಮಹಾಪರ್ವತಗಳನ್ನೂ । ಜೀವಿಗಳ ಆರೋಗ್ಯ ಆಗುವದು ಚೆನ್ನು । ಈ ಔಷಧಿಯಿಂದ ॥೪೬॥ ಅಗಸ್ತ್ಯರು ಆರಂಭಿಸಿದರು ಸೋಮಯಾಗ । ಯಜ್ಞಸತ್ರ ನಡೆದವು ಯುಗ-ಯುಗ । ದಿವ್ಯ ಸೋಮರಸ ನಿರ್ಮಿಸಿ ಸುಭಗ । ಹರ್ಷಿಸಿದರು ಸರ್ವದೇವರನ್ನು ॥೪೭॥ ಮುಗಿಲು, ಆಕಾಶ ದೇವರು, । ಪಂಚತತ್ವ, ತ್ರಿದೇವ ಸಹಿತ ಎಲ್ಲರೂ । ಸೋಮ ಪ್ರಾಶಿಸಿ ಸಂತುಷ್ಟರಾದರು । ಕೇಳಿದರು 'ಯಜ್ಞ ಕಿಮರ್ಥ?' ಎಂದು ॥೪೮॥ ನಾನು ಕೃಷಿ ವಿದ್ಯೆ ನಿರ್ಮಿಸಿದೆ। ಪಶುಪಾಲನ ಕಲೆ ತೋರಿಸಿದೆ । ವನಸ್ಪತಿಗಾಗಿ ಆಯ್ದೆ । ಅನೇಕ ಅರಣ್ಯ ॥೪೯॥ ಪೃಥ್ವಿಯನು ಸಂತುಲಿತ ಮಾಡಿದೆ। ಪರ್ಜನ್ಯ, ಜಲಾಶಯ ನಿರ್ಮಿಸಿದೆ । ವಿಹಿತ ಕರ್ಮ ಆಚರಿಸಿದೆ । ನನ್ನ ಸೇವೆ ಸ್ವೀಕರಿಸಿರಿ ॥೫೦॥ 'ತಥಾಸ್ತು' ಅಂದವು ಪಂಚತತ್ವ । 'ತಥಾಸ್ತು' ಅಂದರು ತ್ರಿದೇವ । ತ್ರಿಲೋಕ ಅಂದರು, 'ಧನ್ಯ ಭವ । ಹೇ ಕೃಷಿ ದೇವತಾ' ॥೫೧॥ ಜೀವನಕ್ಕೆ ಸ್ಥೈರ್ಯ ಕೊಡಲು । ಗರ್ವ-ಶೋಷಣೆ ನಿವಾರಿಸಲು । ದೈತ್ಯವೃತ್ತಿ ಸಂಹಾರಿಸಲು । ಅಗಸ್ತ್ಯರಿಹರು ಯುದ್ಧ

೭೬

ದೇವತೆ॥೫೨॥ ಯಜ್ಞ ಸತ್ರ ಸಾಧಿಸಲು ನಿರ್ವಿಘ್ನ । ಮಾಡಲು ವಿಕ್ಷೇಪದ ದಮನ । ಹವಿಷ್ಯದ ಸದ್ದೈವ ಯೋಜನ । ಅಗಸ್ತ್ಯರು ಧನುರ್ವೇದ ಪ್ರೇರಿಸಿದರು ॥೫೩॥ ಅಗಸ್ತ್ಯರಿಂದೇ ಧನುರ್ವೇದ । ಲಭಿಸಿತು ಋಷಿಯರಿಗೆ ಶೌರ್ಯಪದ । ಈ ರೂಢಿ ರಾಮ-ಕೃಷ್ಣ-ಪಾಂಡವ ಕಾಲದ -।- ವರೆಗೂ ಉಳಿಯಿತು ಅಗಸ್ತ್ಯರ ಕೃಪೆಯಿಂದ ॥೫೪॥ ಅಗಸ್ತ್ಯರಿಹರು ಮಹಾಸಿದ್ಧರು । ಹಾಗೇ ಅಥರ್ವಣದಲ್ಲೂ ವಿಶ್ವ-ವಿಖ್ಯಾತರು । ಧನುರ್ವಿದ್ಯೆಯ ಶಕ್ತಿ-ಅಸ್ತ್ರಗಳ ಜನಕರು । ಅಗಸ್ತ್ಯರೇ ಇಹರು ॥೫೫॥ ಸರ್ಪಾಸ್ತ್ರ ಬ್ರಹ್ಮ ಶಿರಸಾಸ್ತ್ರ । ಅಗ್ನಿಅಸ್ತ್ರ ಅಕ್ಷಯ ವೇಧಾಸ್ತ್ರ । ಹೀಗೆ ಅನೇಕ ವಿಧ ದಿವ್ಯಾಸ್ತ್ರ-।-ಗಳ ಯೋಜನೆ ಅಗಸ್ತ್ಯರದೇ ॥೫೬॥ (ಶಸ್ತ್ರಕ್ರಿಯೆ ಮಾಡಿ- ಕಾಲುಕೂಡಿಸಿ) ವಿಪ್ಲವೆಯನು ಯುದ್ಧಾರ್ಥ 'ನಿಲ್ಲಿ'ಸಿದರು । ಇಂದ್ರಾದಿ ದೇವರಿಗೆ ಸಹಾಯ ಮಾಡಿದರು । ರಾಮ, ಪಾಂಡವ, ಶರಣಾಗತರೂ । (ಅಗಸ್ತ್ಯರಿಂದ) ಧನುರ್ವಿದ್ಯಾ ಪ್ರವೀಣರಾದರು ॥೫೭॥ ಅಗಸ್ತ್ಯರಿಗೆ ಜ್ಞಾತ ಮಾಯಾಜಾಲ । ಅಥರ್ವಣ ಚಮತ್ಕಾರ ಬಲ । ವೇಧ, ತ್ರಿದೇವ ಶಕ್ತಿಗಳ । ಸಂಪೂರ್ಣ ಯುದ್ಧ ತಂತ್ರ ॥೫೮॥ ಗೊತ್ತು ಶತ್ರು ವಿಘ್ನದ ರೋಧನ। ಹಿಂಸ್ರ ಶ್ವಾಪದಗಳ ಆಕ್ರಮಣ । ಪರ್ವತ-ಪ್ರವಾಹಗಳನ್ನ -।- ನಿಲ್ಲಿಸುವ ಲೀಲೆ, ಸಿದ್ಧಿಯಿಂದ ॥೫೯॥ ಯುದ್ಧ-ಪ್ರಸಂಗದಲ್ಲಿ ದೇವದಾನವರ । ಯೋಜಿಸಿದ್ದರು ಶರಣಾಗತಿಯ ತಂತ್ರ । ಸತ್-ಪಕ್ಷದ ಪ್ರತಿ ಒಲವಿನ ಮಂತ್ರ -।- ಪ್ರಯೋಗ ಸಹಾಯ್ಯಾರ್ಥ ॥೬೦॥ ಸಪ್ತ ಸಾಗರ ಪ್ರಾಶಿಸಿದರು । ಇಂದ್ರ ಮರುತರಿಗೆ ತಿಳಿ ಹೇಳಿದರು। ಸೂರ್ಯ-ಚಂದ್ರ ಶಿವರಿಗೆ ಸಾಹ್ಯ ಮಾಡಿದರು । ತಿಳಿ ಹೇಳಿ ವಿಂಧ್ಯಗೆ ॥೬೧॥ ಗುದ್ದಲಿಯಿಂದ ಪರ್ವತ ಒಡೆದರು ।



ಸರ್ವರಿಗಾಗಿ ಜಲಪ್ರವಾಹ ಹರಿಸಿದರು । 'ವಿಘ್ನಹರ್ತಾ' ಈ ಪದ ಮೆರೆಸಿದರು । ದೇವ-ದಾನವ-ಋಷಿಯರಲ್ಲಿ ॥೬೨॥ ಅಗಸ್ತ್ಯರ ಇಂದ್ರಿಯ ಶಕ್ತಿ ಅಸೀಮ । ಪಚನಶಕ್ತಿಯೂ ಉತ್ತಮ । ತಾಪನ, ತಾಡನ, ಭೇದನ ಅನುಪಮ । ಯುದ್ಧದಲ್ಲೂ ಅಜೇಯ ॥೬೩॥ ಅಗಸ್ತ್ಯರು ಆರೋಗ್ಯ ದೇವರು । ಸಪ್ತಸಾಗರ ಕುಡಿದು ಅರಗಿಸಿದವರು। ಸಮಸ್ತ ದುಷ್ಟ ಶಕ್ತಿಗಳನು ಜೀರ್ಣಿಸಿದ್ದರು । ನಿರೋಗಿ ಹೊಟ್ಟೆಯಲ್ಲಿ ॥೬೪॥ ಅಗಸ್ತ್ಯರಿದ್ದರು ಶಲ್ಯ ಚಿಕಿತ್ಸಕ। ಧನ್ವಂತರಿಸಮ ಸಂಯೋಜಕ । ತ್ರೈಲೋಕದ ವೈದ್ಯರ ಸಹಾಯಕ । ಋಗ್ಣ ಸೇವೆಯಲ್ಲಿ ॥೬೫॥ ಅಗಸ್ತ್ಯ ತಂದರು ಅಮೃತ । ರೋಧಿಸಿದರು ವಿಷ ಘಾತಕಯುಕ್ತ । ನಿರ್ಮಿಸಿದರು ಸರ್ವ ಜೀವ ಮಿಶ್ರಿತ । ಅಲೌಕಿಕ (ಲೋಪ) ಮುದ್ರೆಯನ್ನು ॥೬೬॥ ಶರೀರವ್ಯಾಧಿ ನಿವಾರಕ । ವಾತ-ಪಿತ್ತ-ಕಫ ಸಂತುಲಕ । ಮಂತ್ರ-ತಂತ್ರ ವಿಧಿ ಸಂಶೋಧಕ । ಆರೋಗ್ಯದಾಯಿ ॥೬೭॥ ಅಗಸ್ತ್ಯ ನಿರ್ಮಿಸಿದರು ಸಿದ್ಧಯಂತ್ರ । ಅಗಸ್ತ್ಯ ಯೋಜಿಸಿದರು ಸಿದ್ಧಿ ತಂತ್ರ । ಅಗಸ್ತ್ಯ ರಚಿಸಿದರು ಸಿದ್ಧಮಂತ್ರ । ಬ್ರಹ್ಮ ಮೇಖಲೆಯಿಂದ ॥೬೮। ಪಂಚತತ್ವ ಅಗಸ್ತ್ಯರ ಆಜ್ಞೆ ಪಾಲಿಸುವವು । ಯಥಾಮತಿ ಶಸ್ತ್ರ ಯೋಜಿಸುವವು । ಸರ್ವಶಕ್ತಿಯಿಂ ಸಮರ್ಥ ಆಗುವವು । ಶತ್ರುವಿನಾಶಕ್ಕಾಗಿ ॥೬೯॥ ಯುದ್ಧ ನಿಷ್ಕ್ರಿಯ ಮಾಡುವವು। ಅದ್ಭುತ ಮಂತ್ರ ಪೋಷಿಸುವವು । ಲೋಕಕಲ್ಯಾಣ ಚಿಂತಿಸುವವು । ಸುರಾಸುರ ನರರ ಬಗ್ಗೆ ॥೭೦॥ (ಅಗಸ್ತ್ಯರು) ದುಷ್ಟ ಪ್ರವೃತ್ತಿ ನಿವಾರಿಸಿ । ಸತ್ ಪ್ರವೃತ್ತಿ ಪ್ರಕಟಿಸಿ । ಸಮೃದ್ಧಿಗಾಗಿ ಸುಖ-ಶಾಂತಿ ಸ್ಥಾಪಿಸಿ ।

ಅಭಿವಂದಿಸುವರು ॥೪೧॥ ಅದ್ವೈತ ಮತ್ತು ನಿಷ್ಕಾಮ ಕರ್ಮ । ಇವೆರಡೂ ಅಗಸ್ತ್ಯರ ಧರ್ಮ । ಯುದ್ಧ ದೇವರಾಗಿಹ ಅವರ ಅಸೀಮ -।- ಯತ್ನ, ಜನಪ್ರಿಯ ದರ್ಶಕ ॥೪೨॥ ಅಗಸ್ತ್ಯರ ವರ್ಚಸ್ಸು ಅತುಲ । ಮೂರೂ ಲೋಕಗಳಲ್ಲಿತ್ತು ಪ್ರಬಲ । ದೇವ-ದಾನವ-ಮಾನವ ಎಲ್ಲ -।-ರಲ್ಲಿ ಇತ್ತು ಆದರಯುಕ್ತ ಭಯ! ॥೪೩॥ ಶೋಷಕ ಮತ್ತು ಶೋಷಿತ । ಇಬ್ಬರೂ ಇದ್ದರು ವಂದಿಸುತ । ಅಂತೇ ಸಮತೋಲ ಸಾಧಿಸುತ । ಇತ್ತು ವಿಶ್ವ ಸುಖದಲ್ಲಿ ॥೪೪॥ ಅಗಸ್ತ್ಯರಿಗೆ ಅತಿಪ್ರಿಯ ಸೋಮರಸ । ನಿರ್ಮಿಸುತ್ತಿದ್ದರು ಸೋಮರಸ-ಸರಸ ॥ ಅರ್ಪಿಸುತ್ತಿದ್ದರು ಯಜ್ಞದಲ್ಲಿ ಆ ಅದ್ಭುತ ರಸ ತೇಜಸ । ದೇವ-ಋಷಿಯರಿಗೆ ॥೪೫॥ ದೇವ ಮತ್ತು ದಾನವರ । ಋಷಿ ಮತ್ತು ಸಂಸಾರಿ ಜನರ । ಇದ್ದರು ಅಗಸ್ತ್ಯರು ಸಮಸ್ತರ । ಸತ್ಯ ಶಾಂತಿಪ್ರಿಯ ರಕ್ಷಕ ॥೪೬॥ ಅಗಸ್ತ್ಯ ಸತ್-ತತ್ ಬ್ರಹ್ಮ ಪೂರ್ಣ । ಸಾಕ್ಷಾತ್ ಶಿವತತ್ವ ಘನ । ಅಂತೇ ಪರ(ಮಾತ್ಮ)ತತ್ವದಲ್ಲಿ ಅದ್ವೈತತನ । ನೋಡುತ್ತಿದ್ದರು ॥೪೭॥ ಯಾ ಯಾ ವಿದ್ಯೆ ಅವರಿಗೆ ಅವಗತ । (ಅವನ್ನು) ಋಷಿಕುಲದಲ್ಲಿ ಇದ್ದರು ಬೋಧಿಸುತ । ಗುರುಕುಲ ವಿದ್ಯಾಪೀಠಗಳು ಸತತ । ಪ್ರಸಾರಿತ ಮಾಡುತ್ತಿದ್ದರು ॥೪೮॥ ಅಗಸ್ತ್ಯ ವಿದ್ಯೆ ಇಹುದು ಶುದ್ಧ ವೇದಾಂತ । ಮೊದಲಿನಿಂದ ವೇದ-ಉಪನಿಷತ್ತುಗಳಲಿ ಗ್ರಥಿತ । ಅಗಸ್ತ್ಯರು ಬೋಧಿಸಿದ ಶಿವತತ್ವ-ಅದ್ವೈತ । ಅನುಸರಿಸಿದವು ವೇದಾದಿಗ್ರಂಥ ॥೪೯॥ ಅಗಸ್ತ್ಯರಿಹರು ಸಿದ್ಧ ಋಷಿದೇವ । ದೇವತ್ವ ಸ್ಥಿರಿಸಿತ್ತು ಅವರಲ್ಲಿ ಸದೈವ । ಇಹಲೋಕದಲ್ಲಿ ಚರಿಸಿದರು ಮಾನವ -।-ರೂಪದಲ್ಲಿ ಅವರು ॥೫೦॥ ಕುಲ-ಗೋತ್ರ ಸ್ಥಾಪಿಸಿ ಸರ್ವತ್ರ । ಮಾಡಿದರು ವಿದ್ಯೆಯ ಪ್ರಸಾರ । ಇಹರು ಮೃತ್ಯುಲೋಕದಲ್ಲಿಯ



ಸುರ-।-ಇಂದ್ರರೇ ಅಗಸ್ತ್ಯರು ॥೫೧॥ ಅಗಸ್ತ್ಯ ಕೇವಳ ತ್ರಿಕಾಲಜ್ಞರು । ಭೂತ-ವರ್ತಮಾನ ಭವಿಷ್ಯವೇತ್ತರು । ದೈವಿ, ಸಿದ್ಧ ಕವಿ ಋಷೀಶ್ವರರು । ವೇದ ನಿವೇದಿಸಿದ ॥೫೨॥ ಅಗಸ್ತ್ಯ-ವಿಷ್ಣು-ಲಕ್ಷ್ಮೀ ರೂಪ । ಅವರಲ್ಲಿ ಧನಸಂಚಯ ಯುಕ್ತಿ ಅಮಾಪ । ಮಾತ್ರ ಅವರಿಗೆ ಪ್ರಿಯ ತಪ । ಇಹರು ಅಲಿಪ್ತ ಧನದಿಂದ ॥೫೩॥ ಅಗಸ್ತ್ಯ ಅನುಭವಿಸಿದರು ಶಂಕರಾಚಾರ್ಯ । ಅರಿತಿದ್ದರು ಶಿವತತ್ವಪೂರ್ಣ ಸತ್ಯ । ಅನುಸರಿಸಿ ಮಾಡಿದರು ಅಗಸ್ತ್ಯಮಯ। ಜಂಬೂದ್ವೀಪ (ಭಾರತ)ವನ್ನು ॥೫೪॥ ಅತಿಶ್ರೇಷ್ಠ ಋಷಿ ಅಗಸ್ತ್ಯರು । ಶಾಪಾದಪಿ ಶರಾದಪಿ ನಿಷ್ಣಾತರು । ಮಾತ್ರ 'ಅತಿಉದಾರ' ಈ ಖ್ಯಾತಿ ಇದ್ದವರು । ಸತ್ವರ ಶಾಪಮುಕ್ತ ಮಾಡುವರು ॥೫೫॥ ಅಗಸ್ತ್ಯರಿಹರು ಶಿವರೂಪ । ಶಾಂತ, ಉದಾರ ಕೃಪಾಳು ಅಮಾಪ ॥ ಮಾತ್ರ ಸತ್ಯಕ್ಕಾಗಿ ಅವರ ಸಂತಾಪ । ಧರಿಸುತ್ತಿತ್ತು ಉಗ್ರರೂಪ ॥೫೬॥ ಅಗಸ್ತ್ಯ ದಂಡಿಸಿದರು ವಾತಾಪಿ ಇಲ್ವಲರನ್ನು । ಶಾಪಿಸಿದರು ಮಣಿಮತನನ್ನು । ಭೀಮನಿಂದ ಸೋತ ಕುಬೇರನನ್ನು। ಮಾಡಿದರು ಮುಕ್ತ ॥೫೭॥ ತಾಟಿಕಾ, ಮಾರೀಚ, ಅಗಸ್ತ್ಯಶಾಪ ಭೋಗಿಸಿದರು । ಹೀನ ರಾಕ್ಷಸರಾಗಿ ಮೆರೆದರು। ಭಾಮಿನಿಯನ್ನು ಶಾಪದಿಂದ ಹುಟ್ಟಿಸಿದರು । ಮೃತ್ಯುಲೋಕದಲ್ಲಿ ॥೫೮॥ ಅಗಸ್ತ್ಯ ಶಾಪದಿಂ ಶುಕನು ಆದ ರಾಕ್ಷಸನು। ವಜ್ರದಂಷ್ಟ್ರನ ತಿಳಿದು ಕಪಟವನ್ನು -।- ಉಃಶಾಪಕೊಟ್ಟು ಉದ್ಧರಿಸಿದರು ಅವನನ್ನು । ಶ್ರೀರಾಮ ದರ್ಶನದ ಮೂಲಕ ॥೫೯॥ ಅಗಸ್ತ್ಯರು ಸುಟ್ಟರು ದಾನವರನ್ನು । ರಕ್ಷಿಸಿದರು ಸಮಸ್ತ ದೇವರನ್ನು । ಶಾಪ-ಶಸ್ತ್ರಗಳ ಬಳಿಕೆಯನ್ನು । ಮಾಡಿದರು ದುಷ್ಟರ ಹನನಕ್ಕಾಗಿ ॥೬೦॥ ಅಗಸ್ತ್ಯರು ಶಾಪಿಸಿದರು ನಹುಷನನ್ನು । ಪೃಥ್ವಿಯ

ಮೇಲೆ ಹೆಬ್ಬಾವು ಆದ ಅವನು । ಮಾತ್ರ ಉಃಶಾಪದಿಂ ಉದ್ಧರಿಸಿದರು ಅವನನ್ನು । ಶಾಪಮುಕ್ತ ಮಾಡಿದರು
ಶ್ವೇತನನ್ನೂ ।॥೯೧॥ ಅಗಸ್ತ್ಯರು ಅಥರ್ವ ವಿದ್ಯಾಪತಿ । ಭೂತ, ಪ್ರೇತ, ಪಿಶಾಚ್ಯಾದಿಗಳ ಅಧಿಪತಿ । ಅವುಗಳನು
ನಷ್ಟ ಮಾಡುವ ಶಕ್ತಿ । ಅಗಸ್ತ್ಯ ಕೃಪೆಯಿಂದ ಸಾಧ್ಯ ।॥೯೨॥ ಅಗಸ್ತ್ಯರ ಕೃಪೆಯಿಂದ ಅಶುಭಯೋಗ-ಕ್ಷಣ । ಆದಿ,
ಮಾಡುವವು ಪಲಾಯನ । ಅಗಸ್ತ್ಯರ ತಂತ್ರದಿಂ ತಕ್ಷಣ । ನಾಶ ಖಂಡಿತ ।॥೯೩॥ ಭಾನಾಮತಿ, ಮಾಟ ಆದಿ
ಉಪದ್ರವ-।-ಕಾರಕ ದುರಿತ ಮಂತ್ರವ । ನಿಷ್ಕ್ರಿಯ ವಾ ನಷ್ಟ ಮಾಡುವ । ಶಕ್ತಿ ಅಗಸ್ತ್ಯರಲ್ಲಿಹುದು ।॥೯೪॥ ಭೂತ,
ಪ್ರೇತ, ವಿಷ ಆದಿ ದೋಷ । ಅನ್ನ-ಪೇಯ-ಮಂತ್ರ ಪಾಶ-।- ಇತ್ಯಾದಿ ದುರಿತ-ರಿಪು ಶಕ್ತಿಗಳ ನಾಶ । ಸಾಧ್ಯ-ಕೇವಳ
ಅಗಸ್ತ್ಯರ ಸ್ಮರಣೆಯಿಂದ ।॥೯೫॥ ಅಗಸ್ತ್ಯವಿದ್ಯೆ ಆಗಲು ಪ್ರಾಪ್ತ । ಮಾಡಬೇಕು ತಪ-ಭಕ್ತಿ ಯುಕ್ತ । ಶ್ರದ್ಧೆ ಬೇಕು
ನಿತಾಂತ । (ಇವೆಲ್ಲ ಇದ್ದೊಡೆ) - ಅಗಸ್ತ್ಯ ಕೃಪೆ ನಿಶ್ಚಿತ ।॥೯೬॥ ಅಗಸ್ತ್ಯ ವಿದ್ಯೆಯದಾದೊಡೆ ಪ್ರಾಪ್ತಿ । ಆಗುವನು
ಸಿದ್ಧ, ದೊರೆವುದು ಕೀರ್ತಿ । ಬರುವದು ಔದಾರ್ಯವೂ ಅತಿ । ಅಲೌಕಿಕ ಲಾಭ ।॥೯೭॥ ಅಗಸ್ತ್ಯಪರ್ಯಾವರಣ
ವ್ಯವಸ್ಥಾಪಕ । ಅಲ್ಲ, ಪರ್ಯಾವರಣದ ಜನಕ । ಪರ್ಜನ್ಯ ಸ್ಥಿರತೆಯ ಯೋಜಕ । ಇಂದ್ರ-ಮರುತಕೃತ ।॥೯೮॥
ಅಗಸ್ತ್ಯ ಕೃಪೆಯಿಂ ಸಾಧ್ಯ ಆರೋಗ್ಯ, ಧನ । ಅಶುಭ ಬಾಧೆಯ ಪಲಾಯನ । ಸುಖಶಾಂತಿಯ ಆಗಮನ । ಸಮಾಜದಿ
ಪ್ರತಿಷ್ಠೆಯ ಪ್ರಾಪ್ತಿ ।॥೯೯॥ ಅಗಸ್ತ್ಯಕೃಪೆಯಿಂ ಶತ್ರು ನಾಶನ । ವಿಷಬಾಧೆಯ ಸತ್ವರ ಗಮನ । ಸಾಧ್ಯ



ಸಂಪತ್ತಿ-ಧಾನ್ಯ-ಧನ । ಅಗಸ್ತ್ಯ ಉಪಾಸಕಂಗೆ ।॥1೦೦೦॥ ಅಗಸ್ತ್ಯ ಕೃಪೆಯಿಂ ಚತುಷ್ಪಾದಗಣ । ಮಾಡುವವು
ಮಾನವ ಆಜ್ಞೆಯ ಪಾಲನ । ಆಗುವರು ಪಂಚಗವ್ಯ ಸಂಪನ್ನ । ಜನರು ಸದಾ ।॥೧೦೦೧॥ ಲಾಭ ಪುತ್ರ-ಪೌತ್ರ-ಮಿತ್ರರ।
ಆಗುವದು ಸುಖರೂಪ ಸಂಸಾರ । ನಿಃಪಾತ ವೈರಿಗಳ ಸತ್ವರ । ಅಂತೇ ಅಗಸ್ತ್ಯರಿಗೆ ಹೋಗಿರಿ ಶರಣ ।॥೧೦೦೨॥ ಇಟ್ಟು
ಉದ್ದೇಶ ಶುಭ-ಚೆನ್ನ । ಮಾಡಿದೊಡೆ ಈ ಅಧ್ಯಾಯದ ವಾಚನ । ನಿ:ಸೀಮ ಭಕ್ತಿಯಿಂದ ಮನನ । ಉದ್ದೇಶ ಸಫಲ
ಆಗುವದು ॥ ೧೦೦೩॥ ಆಯಿತು ಆರನೇ ಅಧ್ಯಾಯ ಪೂರ್ಣ । ಮಾಡುತಿಹರು ಅಗಸ್ತ್ಯದೇವರು ಶ್ರವಣ ।
ವಾಚಕರಾಗುವರು ಸುಖ-ಸಂಪನ್ನ । ಲಭಿಸಿ ಅಗಸ್ತ್ಯ ಕೃಪೆ ।॥೧೦೦೪॥ ಇದಲ್ಲ ಕಥಾ ಅಧ್ಯಾಯ ಕೇವಳ । ಇಹುದು
ಇದು ಅಗಸ್ತ್ಯಸ್ತೋತ್ರ ವಿಮಲ । ಓದಿದರೆ ಮನ ಮಾಡಿ ಸ್ಥಿರ-ನಿಶ್ಚಲ । ಮುಗಿವವು ಸರ್ವ ದೋಷ ।॥೧೦೦೫॥
ಮಾಡಿದೊಡೆ ಅಧ್ಯಾಯದ ಪಠನ । ದೊರೆವುದು ಅಗಸ್ತ್ಯವಿದ್ಯೆ ಘನ । ಆಗುವದು ಸಂಸಾರದ ಸಂಘರ್ಷಣ । ಸುಲಭ,
ಸುಸಹ್ಯ ।॥೧೦೦೬॥ ಭಕ್ತರಿಂದ ಸತ್ಯ ಸಂಕಲ್ಪ ವದಿಸಿ । ಅವುಗಳನು ಸತ್ವರ ನಿವಾರಿಸಿ ।ಅಗಸ್ತ್ಯರು ಸರ್ವಸ್ಥಳಗಳಲಿ
ಚರಿಸಿ । ಕೊಡುವರು ಅನುಭೂತಿ ।॥೧೦೦೭॥ ವೇದ, ಶಾಸ್ತ್ರ, ಕಾವ್ಯ ಪುರಾಣ । ಮಾಡುವವು ಸಪ್ರೇಮ ಮಹಿಮಾಗಾನ।
ಪೂರೈಸುವರು ಅಧಿಕ ವಾ ನ್ಯೂನ । ಮಹಾಯೋಗಿ ಅಗಸ್ತ್ಯರೇ ।॥೧೦೦೮॥ ಇಲ್ಲಿ ಅಗಸ್ತ್ಯ ಆಜ್ಞೆ ಪಾಲಿಸಿ । ಹಾಡುತ್ತೇನೆ
ಕಾಲಲಿ ತಲೆಬಾಗಿಸಿ । ಇದು ಅಲ್ಲ ನನ್ನ ಸ್ವಂತ ಮತಿ । ಅಗಸ್ತ್ಯ ಕೃಪೆಯಿಂದೇ ಬರೆದಿದ್ದೇನೆ ।॥೧೦೦೯॥ ಅಗಸ್ತ್ಯರು

ಆಜ್ಞಾಪಿಸಿದಂತೆ । ನಿರೂಪಿಸಿದ್ದೇನೆ ಈ ಕತೆ । ಲೌಕಿಕಕ್ಕಾಗಿಲ್ಲ ನನ್ನ ಯಾವ ಮಾತೇ-।-ಈ 'ನಿಧಾನ'ವು ಅಲೌಕಿಕ ಅಗಸ್ತ್ಯರದೇ ॥೧೧೦॥ ಅಗಸ್ತ್ಯರನ್ನೇ ಸಂಕಲಿಸಿ ಮನದಲ್ಲಿ । ಅವರ ಕಥೆ ಹೇಳಿದ್ದೇನೆ ಇಲ್ಲಿ । ವಂದಿಸಿ ಊರಿದ್ದೇನೆ ಈ ಅಮೃತವಲ್ಲಿ । ಶ್ರೀ ಸಿದ್ಧೇಶ್ವರರ ಸಾಕ್ಷಿಯಿಂದ ॥೧೧೧॥

**ಇತಿ ಷಷ್ಠೋಽಧ್ಯಾಯ : ಸಮಾಪ್ತ :**

**॥ ಓಂ ಶ್ರೀ ದೇವ, ಋಷಿ, ಮುನಿ, ಸಿದ್ಧ ಅಗಸ್ತ್ಯಾರ್ಪಣಮಸ್ತು ॥**

**ಅಸ್ತು । ಶುಭಂ ಭವತು । ಶುಭಂ ಭವತು । ಶುಭಂ ಭವತು ॥**

**ಆರನೇ ಅಧ್ಯಾಯ ಸಮಾಪ್ತ**



॥ ಓಂ ॥

# ಅಗಸ್ತ್ಯಮಹಾತ್ಮ್ಯೆ

## ಏಳನೇ ಅಧ್ಯಾಯ

॥ ಓಂ ಶ್ರೀ ಗಣೇಶಾಯ ನಮಃ ॥ ಓಂ ಸರಸ್ವತ್ಯೈ ನಮಃ ॥ ಓಂ ಶ್ರೀ ಅಗಸ್ತ್ಯೈ ನಮಃ ॥

ಓಂ ಶ್ರೀ ಪರಮಾತ್ಮನೇ ನಮಃ ॥ ಓಂ ಶ್ರೀ ಗಣೇಶಾಯ ನಮಃ । ಓಂ ಶ್ರೀ ಸರಸ್ವತ್ಯೇ ನಮಃ । ಓಂ ಶ್ರೀ ಕುಲಸ್ವಾಮಿನೀ ಕರವೀರ ನಿವಾಸಿನೀ ಅಂಬಾಮಾತಾಯೈ ನಮಃ । ಓಂ ಶ್ರೀ ಗುರುವೇ ನಮಃ ॥ ಓಂ ಶ್ರೀ ಸಕಲದೇವತಾ ಋಷಿಗಣಾಯೈ ನಮಃ । ಓಂ ಶ್ರೀ ಅಗಸ್ತ್ಯೇ ನಮಃ ।

ಇನ್ನು ಈ ಸಪ್ತಮೋಽಧ್ಯಾಯ । ಅಗಸ್ತ್ಯ ಕಥೆಯ ಕಳಸಾಧ್ಯಾಯ । ಪ್ರತ್ಯಕ್ಷ ಪ್ರಕಟ ಆಗುತ್ತಿಹರು ಅಗಸ್ತ್ಯ । ಭಕ್ತರಿಗೆ ದರ್ಶನ ಕೊಡಲು ॥೧॥ ಅಗಸ್ತ್ಯರಿಹರು ಪರಮಾತ್ಮಾವಿಷ್ಕಾರ । ಲೌಕಿಕದಂತೆ ಮಿತ್ರ ವರುಣರ ಪುತ್ರ । ಪ್ರಕಟಿಸಿದರು ಮಾನ-ಮಾನಸ ಸರೋವರ -।-ದಲ್ಲಿ ಶಿವತತ್ವ ಸ್ವರೂಪ ॥೨॥ ಅನಂತ ಮುಗಿಲಲ್ಲಿಹುದು ಕೈವಲ್ಯ ಶಿವ-ತತ್ವ । ಅಲ್ಲಿಂದ ಸ್ಪಂದಿತ ಅನಂತ ನಭಗಳ ವಿಶ್ವ । ಆ ವಿಶ್ವದಲ್ಲಿ ಬ್ರಹ್ಮಾಂಡೋದ್ಭವ । ಸೂರ್ಯನೊಡನೆ ॥೩॥ ಮಾಡಲು

ಕೌತುಕ ಬ್ರಹ್ಮಾಂಡದಿ । ಪರಮ ಕೈವಲ್ಯ ಪ್ರಕಟಿಸಿತು ಶಿವ-ತತ್ವದಿ । ಶಿವತತ್ವ ಪ್ರಕಟವಾಯ್ತು ವಿಷ್ಣುತತ್ವದಿ । ಅದರಿಂದ ಬ್ರಹ್ಮತತ್ವವು (ಪರಬ್ರಹ್ಮವು) ॥೪॥ ಅಸ್ತಿತ್ವದ ಭಾವನೆ ಶಿವ-ತತ್ವದಿ । ಆಕಾಶಭಾವನೆ ಶಿವ-ತತ್ವದಿ । ಸಂಪೂರ್ಣ ಸೃಷ್ಟಿ ಪ್ರಕಟಿಸಿತು ಶಿವತತ್ವದಿ । ಮಾಯಾರೂಪ ॥೫॥ ಶಿವರೂಪದಲ್ಲಿ ಆದಿ-ಅಂತ । ನಡುವೆ ಮಾಯೆಯ ಆಟ-ಭ್ರಾಂತ । ಧಾರಣಾ ತತ್ವದಿ ವಿಷ್ಣು ಅನಂತ । ಮಾತ್ರ ನಿಮಿತ್ತ ಬ್ರಹ್ಮ ॥೬॥ ಸೃಷ್ಟಿಚಕ್ರ ನಡೆಸಲು । ಭೂತ ಮಾತ್ರರ ಪ್ರಕಟಿಸಲು । ಬ್ರಹ್ಮರು ಲೋಕಋಷಿ ಹುಟ್ಟಿಸಲು । ಸಿದ್ಧರಾದರು ಮಾನಸಪುತ್ರ ॥೭॥ ಮಾತ್ರ ಅಗಸ್ತ್ಯತತ್ವ ಅದಕ್ಕೂ ಭಿನ್ನ । ಶಿವತತ್ವದಿಂದ ಸಿದ್ಧ ತಾನೇ ತನ್ನ । ಶಿವರೂಪ ಸಾಕ್ಷಾತ್ ಪ್ರಕಟನ । ಮಾನಸದಲ್ಲಿ ಆಯಿತು ॥೮॥ ತ್ರಿದೇವ ಒಪ್ಪಿಸಿದರು ಕಾರ್ಯ । ತಪ-ವೈರಾಗ್ಯ, ಸಿದ್ಧ ಮುನಿವರ್ಯ । ಕಾರ್ಯಾನ್ವಿತರಾದರು ಅಗಸ್ತ್ಯ । ಮತ್ತೆ ಮತ್ತೆ ಪ್ರಕಟವಾಯ್ತು ಪರ ತತ್ವ ॥೯॥ ಅನಿಸಿತು ಪ್ರಕಟ ಆದನು ಗಭಸ್ತಿ । ಅನ್ನಿಸಿತು ಇದು-ಅನ್ನ-ಶಕ್ತಿ । ಪ್ರಕಟಿಸಿದವು ವಾಯು-ಜಲ ಎರಡೂ ಸಂಗತಿ । ಪೃಥ್ವಿತತ್ವ ಸಾಕಲು ॥೧೦॥ ಬ್ರಹ್ಮರಿಂದ ಸೃಷ್ಟಿ ಲೀಲೆ ಕಲ್ಪಿಸಿತು । ಶಿವ-ಪಾರ್ವತಿಯರ ಕ್ರೀಡೆ ನಡೆಯಿತು । ಆ ಕ್ರೀಡೆ ಸಹಿಸಲು ಅಗಸ್ತ್ಯರದಾಯ್ತು । ಸಮರ್ಥ ಅವತಾರ ॥೧೧॥ ಮಾನ, ಮಾಂದಾರ್ಯ ಕುಂಭೋಜ । ಈ ನಾಮ ಕೇವಳ ಹೊಳೆದ ಸಹಜ । ಮಾಯಾ ಪರ್ವತ ಮೇಘ ಭಂಜ -।- ಆಗಿ ಶಿವ-ಪಾರ್ವತಿ ಕ್ರೀಡೆ ಕಂಡಿತು ॥೧೨॥ ಮುಂದೆ ಕಂಡಿತು ಅಗಸ್ತ್ಯರ । ಅಲೌಕಿಕ ಮಹಿಮೆ ಅಪಾರ । ದೈವಿ ಮಾನವಿ ಆಯ್ತು ಆವಿಷ್ಕಾರ । ಪ್ರತ್ಯಕ್ಷ ಮೂರ್ತಿಮಂತ ಪರತತ್ವ ॥೧೩॥ ನಿಮಿತ್ತವಶಾತ್ ಪ್ರೇರಣೆ ದೇವೇಂದ್ರರ । ಸ್ವಯಂಭೂತ ತತ್ವ ಮಿಂಚಿತು

೮೫

ಅಗಸ್ತ್ಯರ । ಸಹಾಯ ಲಭಿಸಿತು ತ್ರಿದೇವರ । ಆವ್ಹಾನಿಸಿತು ಪಂಚತತ್ವವ ॥೧೪॥ ಬ್ರಹ್ಮದೇವ ನಿರ್ಮಿಸಿದರು ದೇವಲೋಕ । ಋಷಿಲೋಕ, ಮೃತ್ಯುಲೋಕ । ದಾನವ, ಮಾನವ ಜೀವ - ಹೀಗೆ ಪ್ರತ್ಯೇಕ । ಮಾತ್ರ ಸಂಘರ್ಷ ಬೆಳೆಯಿತು ॥೧೫॥ ಸಂಘರ್ಷ ನಿಲ್ಲಿಸಿ, ಸೃಷ್ಟಿಯನು ಸರಿಪಡಿಸಲು । ಸೂರ್ಯಾಗ್ನಿ, ಮರುತ, ಇಂದ್ರ, ತ್ರಿದೈವತೆಗಳು । ಪಾರ್ವತಿ, ಲಕ್ಷ್ಮೀ, ಸರಸ್ವತಿ ಆದಿ ಶಕ್ತಿಗಳು । ಒಕ್ಕಟ್ಟಾದವು ॥೧೬॥ ಊರ್ವಶಿಯನು ಇಂದ್ರಪ್ರೇಷಿತ । ಮಿತ್ರ-ವರಣರನ್ನು ಮಾಡಿ ನಿಮಿತ್ತ । ಆದವು ಸರ್ವಶಕ್ತಿ ಕಾರ್ಯಾನ್ವಿತ । ಶಿವತತ್ವ ಪ್ರೇರಿತ ॥೧೭॥ ಶಿವ ನಿರ್ಮಿಸಿದರು ಸಿದ್ಧಿ-ವಿನಾಯಕರನ್ನು । ಮಹಾವಿಖ್ಯಾತ ಕಾರ್ತಿಕೇಯನನ್ನು । ಶಕ್ತಿಮಾತೆ ಆದಳು ಕಾರ್ಯರತ, ಅವಳನ್ನೂ-।-ಪ್ರತ್ಯಕ್ಷ ವಿಷ್ಣು-ಲಕ್ಷ್ಮೀ ಪಾಲಿಸುವರು ॥೧೮॥ ಜೋಡಿಸಿ ಪಂಚಾಯತನಕ್ಕೆ ಸಿದ್ಧಿಯಂತ್ರ । ತಕ್ಕೊಂಡು-ಸೃಷ್ಟಿ ವ್ಯವಸ್ಥಾಪನೆಗಾಗಿ ಸ್ವಅವತಾರ । ಮಹೇಶ ತೋರಿದರು ಸಿದ್ಧಿ ಬ್ರಹ್ಮಪರ । ನಾನಾ ಶಕ್ತಿ ಕೂಡಿಸಿ ॥೧೯॥ ಸಿದ್ಧ ಶಿರೋಮಣಿ ಅಗಸ್ತ್ಯರು । ಸಿದ್ಧಿ ಪ್ರದಾಯಿ ಆದಿನಾಥರಿದ್ದರು । ಗಣೇಶನ ಕೂಡ ಪ್ರಕಟಿಸಿದರು । ಸಿದ್ಧಿಯನ್ನು ಅಕ್ಕರೆಯಿಂದ ॥೨೦॥ ಪರ್ಯಾವರಣ ಅಸಮತೋಲ । ಆಯ್ತು ವಿಚಲಿತ ವಿಶ್ವ ಸಕಲ । ಶಿಸ್ತು ಋತುಚಕ್ರದ್ದೂ ವಿಚಲ । ಆಗಿದ್ದಿತು ಮಾನವಕೃತ ಕರ್ಮಗಳಿಂದ ॥೨೧॥ ನರರಿಂದ ಸಮೀಪಿಸಿತು ಸರ್ವನಾಶ । ದಾನವ ವೃತ್ತಿಯದಾಯಿತು ಪ್ರವೇಶ । ಅಂತರ್ಬಾಹ್ಯ ಹೊತ್ತಿತು ಸಂಘರ್ಷ । ಅಗಸ್ತ್ಯರಿಗೆ ಶರಣು ಹೋಗಬೇಕಾಯಿತು ॥೨೨॥ ಕಳೆದವು ಲಕ್ಷಾವಧಿ ವರ್ಷ । ಸೂಕ್ಷ್ಮರೂಪ ಧರಿಸಿಹರು ಋಷೀಶ । ವಿದ್ಯೆ ಆಗಿಹವು ವೇದವಶ । ವಿಶ್ರಮಿಸಿ

೮೬

ಮಲಗಿಹವು ವಿದ್ಯಾಪೀಠ ।೨೩॥ ವಿಶ್ವದಲಿ ಅಗಸ್ತ್ಯರ ಸ್ಥಾನ । ತಿಳಿಯಿರಿ ನಿಶ್ಚಿತ ಬದಿ-ನೀರಿನ । ಪ್ರವರಾತೀರದಿ ಅಕೋಲೆಯಲ್ಲಿ ಚಿರಂತನ । ಇಹುದು ವಾಸ ಅಗಸ್ತ್ಯರ ।೨೪॥ ಅನನ್ಯ ಭಾವದಿಂ ಹೋದಲ್ಲಿ ಶರಣ । ಸಾಧ್ಯ ಅಗಸ್ತ್ಯ ಶಕ್ತಿಯ ದರ್ಶನ । ಪ್ರತ್ಯಕ್ಷ ಪ್ರಕಟಿಸಿ ಮಾಡಿದರು ಕಥನ । ಸಿದ್ಧೇಶ್ವರರ ಮುಂದೆ ।೨೫॥ ಅಂತೇ ಹೇಳಿಹೆನು ಅಗಸ್ತ್ಯ ಮಹಿಮೆಯನ್ನ । ಅಗಸ್ತ್ಯರಲ್ಲಿ ಆಗಿ ಸಪ್ತರ್ಷಿ ವಿಲೀನ । ನಾಲ್ಕೂ ದಿಕ್ಕುಗಳಲಿ ಕೊಡುತಿಹರು ದರ್ಶನ । ಅಚಲ ಸ್ಥಾನದಲ್ಲಿದ್ದು ಅಗಸ್ತ್ಯರು ।೨೬॥ ಸಪ್ತರ್ಷಿಯರ ಶಕ್ತಿಯ ಮೀಲನ । ಆಗಿದೆ ಅಗಸ್ತ್ಯರೂಪದಲ್ಲಿ ಸಂಪೂರ್ಣ । ಈ ಸಪ್ತಮಾಧ್ಯಾಯದಿ ಅದರ ಸಶಕ್ತ ದರ್ಶನ । ಆಗುವದು ಅಂತೇ ।೨೭॥ 'ತಮಿಳನಾಡು' ಈ ರಾಜ್ಯದೊಳಗೆ । 'ನಾಡಿ' ಅನ್ನುತ್ತಾರಂತೆ ಸಿದ್ಧನಿಗೆ । ಸಿದ್ಧ ಶಿರೋಮಣಿ ಅಗಸ್ತ್ಯರಿಗೆ । 'ದೇವರು' ಅನ್ನುವರು ।೨೮॥ ಶ್ರೀ ಪುಣ್ಣದಹೀಸರ, ಶ್ರೀ ತಾಳಾಗೀಯ, ಶ್ರೀ ಮಚ್ಛಮುನೀಸಹ ಷೋಡಶ ಸಿದ್ಧಮುನಿ । ಅದರಲ್ಲಿ ಶ್ರೀ ತೈರಅಮ್ಮರ, ಶ್ರೀ ಕರುಉರಾರ, ಶ್ರೀ ಪಾಂಬಾಟ್ಟಿ ಸಿತ್ತರ ಮುನಿ । ಶ್ರೀ ಪೋರಕ್ಕರ, ಶ್ರೀ ಪುದಂಬೈಸಿತ್ತರ, ಶ್ರೀ ರಾಮದೇವವರ ಮುನಿ । ಅಗಸ್ತ್ಯರನ್ನು ಪೂಜಿಸುವರು ।೨೯॥ ಶ್ರೀ ಪೋಹರ, ಶ್ರೀ ಪಂಗನೇರ, ಶ್ರೀ ತಮಿಳಮುನಿ ಶ್ರೀ ಶ್ರೀ ಪುಲಸ್ತ್ಯೈರ, ಶ್ರೀ ಪುಸಮುಲರ, ಶ್ರೀ ಸತ್ತ್ಯೇನಾದರ, ಶ್ರೀ ಸಿಬ್ವಾಕಿಯ್ಯರ । ಹೀಗೆ ಮುನಿ ಅಗಸ್ತ್ಯ ಮಾರ್ಗದಲಿ ಹೋಗುವರು ।೩೦॥ ಹೀಗಿಹುದು ಸಿದ್ಧರ ಬಡಿವಾರ । ಹಬ್ಬಿಹುದು ಎಂಬತ್ನಾಲ್ಕು ಸಿದ್ಧರ । ನಾಥರಿಂದ ಘೋಷಿತ ಪೂರ್ವಜರ । ಸರ್ವಸಿದ್ಧಸ್ಥಾನಗಳಲ್ಲಿ ।೩೧॥ ಶ್ರೀ ಸಿದ್ಧೇಶ್ವರರ ನಂತರ । ಎಲ್ಲರೂ ಸಿದ್ಧ ದೀಕ್ಷಿತ ಋಷಿವರ ।



ಸಿದ್ಧಶಕ್ತಿ ಪ್ರಾಪ್ತ ಪುರಸ್ಕಾರ । ಬಳಿಸುವರು ಲೋಕಕಲ್ಯಾಣಕ್ಕಾಗಿ ।೩೨॥ ಇದೇ ರೂಢಿ ಇಹುದು ಸರ್ವತ್ರ । ದೇಶದಲ್ಲಿ ಶಾಖೆಗಳಿದ್ದರೂ ಅಪಾರ । ಇಹರು ಋಷಿ ಅಗಸ್ತ್ಯರೇ ಎಲ್ಲರ । ಸಿದ್ಧಶಿರೋಮಣಿ ।೩೩॥ ಹತ್ತೂದಿಕ್ಕಿಗೆ ಆಶ್ರಮ, ತಪಸ್ಯಾಸ್ಥಾನ । ಅಗಸ್ತ್ಯವಿದ್ಯೆಯ ಪ್ರಸಾರಣ । ಸತ್ಕಾರ್ಯ-ಯಶ-ಸಾಧಿಸುವ ಯತ್ನ । ಬಂದಿವೆ ಅಗಸ್ತ್ಯ ಪರಂಪರೆಯಿಂದ ।೩೪॥ ವರ್ತಮಾನ (ಸಧ್ಯ)ದಲ್ಲಿ ಅಗಸ್ತ್ಯರು । ಸೂಕ್ಷ್ಮರೂಪದಲ್ಲಿ ನಿತ್ಯ ವಾಸಿಸುವರು । ಸರ್ವಸ್ಥಾನಗಳಲಿ ಕಾರ್ಯ ಮಾಡುತಿಹರು । ಸೂಕ್ಷ್ಮ ಶಕ್ತಿರೂಪದಲ್ಲಿದ್ದು ।೩೫॥ ಸಧ್ಯ ಸಾಕ್ಷಾತ್ಕಾರಿ ಸ್ಥಾನ ಮಾತ್ರ। ಇಹುದು 'ಅಕೋಲೆ' ಆಶ್ರಮದಲ್ಲಿ ಚಿರ । ಪಡೆಯಿರಿ ಪ್ರತ್ಯಕ್ಷ ಅನುಭವ-ಸಾಕ್ಷಾತ್ಕಾರ। ಈ ಆಶ್ರಮಕೆ ಹೋಗಿ।೩೬॥ ಕಾಶೀ ನಿವಾಸದಲ್ಲಿ ಅಗಸ್ತ್ಯರು । ಲೋಪಾಮುದ್ರೆಯಸಹ ತಪಿಸುತಿಹರು । ಶಿವಕಾರ್ಯ ಭಾರ ವಹಿಸುತಿಹರು । ಇಹುದು ಈ ಸ್ಥಾನದ ಮಹಿಮೆ ಶ್ರೇಷ್ಠ ।೩೭॥ ಇಹುದು ರುದ್ರಪ್ರಯಾಗ, ಅಗಸ್ತ್ಯರ ಪರಿಸರ। ಅಲ್ಲಿಯ ಆಶ್ರಮವು ವಿಖ್ಯಾತ ಅಗಸ್ತ್ಯರ । ಮಂದಾಕಿನಿ ತೀರದ ಮೇಲೆ ಪವಿತ್ರ । ಉತ್ತರದಲ್ಲಿ ರಾಜ್ಯ ಆಳುವ।೩೮॥ ಪೋಥಿಯೈಲ ಗಿರಿಯ ವಾಳೂಮ ಪುಣ್ಯಮೂರ್ತಿ । ತಾಮ್ರಪರ್ಣಿಯ ಉಗಮ, ಜಲಪಾತದ ಕೀರ್ತಿ । ದಕ್ಷಿಣ ದಿಕ್ಕು ಪಡೆದಿದೆ ಖ್ಯಾತಿ । ಅಗಸ್ತ್ಯ ಪಟ್ಟಿಯ ಬಳಿ ।೩೯॥ ಬಂಗಾಲದ ಮಹಾಗಂಗಾ ತೀರದಲ್ಲಿ -।-ಇಹುದು ಅಥರ್ವವಿದ್ಯೆಯ ಮಾಟ, ಜಾದುಗಿರಿ, ತಾಳಿ-।-ಪಡೆದಿದೆ 'ಮಹಾಕಾಲಿ-ಕೋಲಕತಾವಾಲಿ' -।- ಈ ಪ್ರಸಿದ್ಧ ಬಿರುದನ್ನು ।೪೦॥ ಕುರುಕ್ಷೇತ್ರದಲ್ಲಿ ನೋಡಿರಿ ನಮ್ಮ । ಪಹವಾ ಗ್ರಾಮದಲ್ಲಿ ಅಗಸ್ತ್ಯಾಶ್ರಮ, -।-ಸರಸ್ವತಿಯ

ತೀರದಲ್ಲಿ ಪರಮ । ಪಿಂಡದಾನದಿಂ ಉದ್ಧಸುವರು ಗೋತ್ರಜರನ್ನು ॥೪೧॥ ಪ್ರಭಾಸ, ಹಟಕೇಶ್ವರ ಪುಷ್ಕರ । ಈ ಸ್ಥಾನಗಳಿಹವು ವಿಖ್ಯಾತ-ಅಪಾರ । ಪಶ್ಚಿಮ ದಿಕ್ಕು ಅಗಸ್ತ್ಯರ -।-ಪಾಲನೆಯಲ್ಲಿ ಸುರಕ್ಷಿತ ॥೪೨॥ ಕೈಲಾಸ ಮಾನಸ-ಸರೋವರ । ಹಿಮಾಲಯದ ಹೃದ್-ಮಂದಿರ । ಶಿವಾಜ್ಞೆ ಅಂಕಿತ ಅಗಸ್ತ್ಯರ-।-ವಾಸ ಮಹೇಶ್ವರ ಬಳಿ ॥೪೩॥ ನರ್ಮದಾ ತೀರದಿ ಅಗಸ್ತ್ಯೇಶ್ವರ । ಮಹಾನದಿ ಅಗಸ್ತಿಯಾಣಪಲ್ಲಿಯ ಮಂದಿರ । ಕಾವೇರಿ, ಪತ್ನಿ ಅಗಸ್ತ್ಯರ-।-ಕಾರ್ಯದಿ ಅನುಗಾಮಿನಿ॥೪೪॥ ಸಿಂಧೂ ತೀರದ ಮೇಲೆ (ನಡೆದಿಹ) ಸಂಶೋಧನ ।(ದಿಂದ ತಿಳಿವುದು) ಅಗಸ್ತ್ಯ ಲೋಪೆಯ ವಿವಾಹೋತ್ತರ ಸ್ಥಾನ । ಮುಂದೆ ಕಾಶಿಯಲ್ಲಿ ಆಯ್ತು ವಾಸಪೂರ್ಣ । ವಿದರ್ಭದಲ್ಲಿ ಮಾವನ ಮನೆ ॥೪೫॥ ಅಗಸ್ತ್ಯ ಜನರಲ್ಲಿ ವಾಸಿಸುವರು । ಗೋತ್ರಜರನ್ನು ಪಾಲಿಸುವರು । ಅಹಂಕಾರ ನಷ್ಟ ಮಾಡುವರು । ದೈತ್ಯವೃತ್ತಿ ಕಳೆದು ॥೪೬॥ ಆಗ್ನೇಯ-ಆಶಿಯಾ ಸಪ್ತ ಖಂಡಗಳಲಿ । ಪ್ರವಾಹಗಳ ಉಗಮಸ್ಥಾನಗಳಲಿ । ಅಗಸ್ತ್ಯರು ಶಕ್ತಿ-ತೋರಿ ಎಲ್ಲ ಕಡೆಯಲ್ಲಿ । ಸಾಗರ ಪೂರ್ವವತ್ ಮಾಡಿದರು ॥೪೭॥ ಹೀಗೆ ಇಹವು ಅಸಂಖ್ಯಸ್ಥಾನ । ಸೂಕ್ಷ್ಮರೂಪ ಅಗಸ್ತ್ಯ ಮಾಡುವರು ಭ್ರಮಣ । ಕಾಪಾಡಲು ತ್ರೈಲೋಕದ ಪರ್ಯಾವರಣ । ಭ್ರಮಂತಿ ಅವರದು ॥೪೮॥ ಆಕಾಶದಲ್ಲಿದ್ದ ತಾರೆ-ಸಿದ್ಧ ಅಗಸ್ತ್ಯರ । ಸ್ವರ್ಗ, ದೇವಲೋಕ, ಗ್ರಹ-ನಕ್ಷತ್ರ । ರಕ್ಷಿಸಿ, ಮಾಡಿ ಪ್ರಸಾರ ನಿರಂತರ-।-ಕರುಣೆಯ, ಬೆಳಗುತಿಹುದು ॥೪೯॥ ಇಹವು ಎಲ್ಲವೂ ಉತ್ತಮ ಸ್ಥಾನ । ಕೊಡುವವು ಸರ್ವರಿಗೂ ನಿತ್ಯ ಪ್ರಚೀತಿಯನ್ನ । ಮಾತ್ರ ಪ್ರವರಾ-ಗೋದಾ ಪರಿಸರ ಅತಿ ಘನ । ಮಹತ್ತಮ ಎಲ್ಲರಲ್ಲಿ ॥೫೦॥



ಸಧ್ಯದ 'ಇಗತಪುರಿ'ಯು ಅಗಸ್ತ್ಯಪುರಿಯ । ಇಹುದು ಅಪಭ್ರಂಶ ರೂಪ ಸ್ಥಾನೀಯ । ಸಂಪೂರ್ಣ ಪ್ರದೇಶ, ಪ್ರವರಾ-ಗೋದೆಯ-।-ನೀರಿನಿಂದ ಆಗಿದೆ ಪುನೀತ ॥೫೧॥ ಇದು ಅಗಸ್ತ್ಯರ ಚಿರಂತನ ಸ್ಥಾನ । ಇಲ್ಲೇ ಮಾಡಿಹರು ಅನೇಕ ಯುಗ ತಪಸಾಧನ । ವಿದ್ಯಾಪ್ರಸಾದ ಕೊಟ್ಟು ನಿತ್ಯ ನವೀನ । ಪ್ರೇರಿಸುತಿಹರು ಅನನ್ಯ-ಭಕ್ತಿ ॥೫೨॥ ಕೃಷಿವಿದ್ಯಾಪರ್ಯಾವರಣ । ಬಿತ್ತಿ ಕಾರ್ಯ ಆರೋಗ್ಯಪ್ರವಣ । ಸಾಧಿಸಿದರು ವಿದ್ಯೆಯ ವಿಕಾಸವನ್ನ । ಇಲ್ಲಿ ಅಗಸ್ತ್ಯರು ॥೫೩॥ ಇಹುದು ಪ್ರವರಾ-ಗೋದಾ ಸನ್ನಿಧ । ಅಗಸ್ತ್ಯರ ಅಸ್ತಿತ್ವ-ಅನುಭೂತಿಪ್ರದ । ಮಾತ್ರ ಬೇಕು ಶ್ರದ್ಧೆ ಶುದ್ಧ । ಭಕ್ತರ ಹೃದಯದಲ್ಲಿ ॥೫೪॥ ಕಾಲಪ್ರವಾಹದಲ್ಲಿ, ಕಲಿಯುಗದ ।ನಿಷ್ಠೆ, ಶ್ರದ್ಧೆ ಬಿದ್ದಿತು ಸಂದೇಹದಿ । ಹುಟ್ಟಿಸಿತು ವಿತರ್ಕ-ಭ್ರಮ ಆದಿ । ನೋಡಿ ಇದನು, ಲುಪ್ತರಾದರು ಅಗಸ್ತ್ಯ ॥೫೫॥ ಶ್ರದ್ಧೆ ಇಟ್ಟು, ಆಗಿ ಜಾಗೃತ । ಆದೊಡೆ ಅಗಸ್ತ್ಯರಿಗೆ ಶರಣಾಗತ । ಆಗುವದು ಕೃಪಾಪ್ರಸಾದ ಪ್ರಾಪ್ತ । ಲೋಕಕಲ್ಯಾಣಕ್ಕಾಗಿ ನಿಶ್ಚಿತ ॥೫೬॥ ಬ್ರಹ್ಮಗಿರಿ, ಪಂಚವಟಿ, ಅನಕಾಯಿ ಆದಿ ಪರಿಸರದಲ್ಲಿ । ರತ್ನಗಡ, ಘೋಕೇಶ್ವರ ಅಕೋಲೆ ಗೋದಾಗ್ರಾಮ ತಥಾ ನೇವಾಸೆಯಲ್ಲಿ । ಸಂಚರಿಸುವ ತಾಪಸಿ ಅಗಸ್ತ್ಯರು ಕಾಣುವರು ತ್ರಿಕಾಲಗಳಲಿ-।-ದೈನಂದಿನ ಕಾರ್ಯದಲ್ಲಿ ಮಗ್ನ ಇದ್ದ ॥೫೭॥ ಸ್ಥಾಪಿಸಿದರು ಅಕೋಲೆ ಗ್ರಾಮದಿ । ಅಗಸ್ತ್ಯರು ಸಿದ್ಧೇಶ್ವರ ಪಂಚಾಯತನ ಗುಡಿ । ಅಲ್ಲಿ ಶಕ್ತಿಶಾಲಿ ಆಶ್ರಮ ಮಾಡಿ । ನಿರಂತರ ಕಾರ್ಯ ಸಾಧಿಸಲು ॥೫೮॥ ಪ್ರವರಾ-ಅಮೃತ ವಾಹಿನಿ । ಗೋದಾ ಪವಿತ್ರ ಲೋಕ

ಜನನಿ । ಈ ಇಬ್ಬರ ಜೊತೆ ಋಷಿಯರ ಮುಕುಟಮಣಿ । ಅಗಸ್ತ್ಯರ ವಿದ್ಯೆಯ ಲಾಭ ॥೫೯॥ ಅಂತೇ ಇಹುದು ಈ ಪರಿಸರದ ಮಹಿಮಾನ । ಅಕೊಲೆ ಅಗಸ್ತಿ ಆಶ್ರಮ ಸ್ಥಾನ । ಸರ್ವಸ್ಥಾನಗಳಲ್ಲಿ ಇಹುದು ಮಹಾಘನ । ಶಿವಸಿದ್ಧರೂಪ ಅಗಸ್ತ್ಯರ ॥೬೦॥ ಸಿದ್ಧ ತಪಿಸುವರು ಲೋಕಕಲ್ಯಾಣಕ್ಕಾಗಿ । ಯಾಚಕನು ಸಿದ್ಧನೆಡೆ ಹೋಗಬೇಕು ಬಾಗಿ (ನಮ್ರನಾಗಿ) । ಅಂದರೇ ಪ್ರಕಟಿಸುವ ಶಕ್ತಿ ನಿಶ್ಚಿತ ಸಿದ್ಧಯೋಗಿ । ತ್ರಿಶಕ್ತಿ ರೂಪದಲ್ಲಿ ॥೬1॥ ಅಗಸ್ತ್ಯರ ಸಂಚಾರ ದಶದಿಶಕೆ । ಮಹಾಶಕ್ತಿ ದೊರೆವುದು ಮಹದಾಕಾಶಕ್ಕೆ । (ಬನ್ನಿರಿ) ಚೇತನೆಗಾಗಿ ಅಕೋಲೆ ಗ್ರಾಮಕ್ಕೆ । ಪ್ರತ್ಯಕ್ಷ ಧ್ಯೇಯ ಸಾಧಿಸಲು ॥೬೨॥ ಪ್ರಾರ್ಥಿಸಿ ಶಿವನನ್ನು ಅಗಸ್ತ್ಯರು । ಅಮೃತವಾಹಿನಿ (ಪ್ರವರಾನದಿ) ಯ ತೀರ ಬೇಡಿದರು । ಹಾಗೇ ಪುಣ್ಯ-ಪವಿತ್ರ ಗೋದಾ ಮಾತೆಯರೂ । ಸಹಾಯ್ಯ ಮಾಡಿದರು ॥೬೩॥ ಅಗಸ್ತ್ಯರು ಇಲ್ಲಿ ವಿಚಾರಿಸಿ ನಿಶ್ಚಿತ । ಸ್ಥಾಪಿಸಿದರು ಅಗಸ್ತ್ಯಯಂತ್ರ ಸಮರ್ಥ। ಸಕಲ ಶಕ್ತಿಗಳ ಸಹ ಸ್ವಂತ । ತಪ ಆಚರಿಸಿದರು ಇಲ್ಲಿ ॥೬೪॥ ಮಹಿಮೆ ಈ ತೀರ್ಥ ಸ್ಥಳದ । ಇಹುದು ಏಕಮೇವಾದ್ವಿತೀಯದ । ಋಷಿಸುರಾಸುರ ನರ ತ್ರಿಲೋಕದ। ಬರುವವರು ಕೃಪಾಯಾಚನೆಗಾಗಿ ಇಲ್ಲಿ ॥೬೫॥ (ಅಮೃತ ವಾಹಿನಿ) ಪ್ರವರಾ ಮತ್ತು (ದಕ್ಷಿಣ-ಗಂಗಾ) ಗೋದಾವರಿ। (ಈ ಎರಡೂ) ನದಿ ಕೂಡಿಹವು ಭಗಿನೀ ಪರಿ ।ಸಿದ್ಧ ಅಗಸ್ತ್ಯ ಕೊಡುವರು ಶಕ್ತಿ ಗುಣಕಾರಿ । (ಗೋದಾ-ಪ್ರವರಾ) ಸಂಗಮ ಕ್ಷೇತ್ರದಲ್ಲಿ ॥೬೬॥ ಅಂತೇ ಅಗಸ್ತ್ಯಾಶ್ರಮದಿಂದ -।-ಮುಂದಿನ ಪರಿಸರದಿಂದ । (ಮುಳಾ-ಪ್ರವರಾ-ಗೋದಾ) ತ್ರಿವೇಣಿ ಸಂಗಮದ (ಪ್ರದೇಶ) ಇಹುದು ಅಗಸ್ತ್ಯಕ್ಷೇತ್ರ ॥೬೭॥ ಅಗಸ್ತ್ಯ ದುರ್ಗ,



ಅಗ್ನಿ ಆಯಿ (ತಾಯಿ) ಪರ್ವತಿ (ಸಣ್ಣ ಪರ್ವತ) ಯಲ್ಲಿ । ಇರುತ್ತಾರೆ ಅಗಸ್ತ್ಯರು ತಪ ಮಗ್ನದಲ್ಲಿ । ಸರ್ವಸಿದ್ಧರಿಗೆ ಕೊಡುತ್ತಾರೆ ಸನ್ನೆ (ಸಂಕೇತ)ಎಲ್ಲಿ । ಯೋಗಬಲದಿಂದ ಜ್ಞಾನ ॥೬೮॥ ಹೀಗಿಹುದು 'ಅಗಸ್ತ್ಯಪುರಿ' ಕ್ಷೇತ್ರ । ಮೈಲುಗಣತಿ ವಿಸ್ತೀರ್ಣ ಸುಂದರ । ಮಾತ್ರ ಈ ಪರಿಸರದ ಕೇಂದ್ರ । (ಇಹುದು) ಸಿದ್ಧ್ಯೇಶ್ವರದ ಅಗಸ್ತ್ಯ ಆಶ್ರಮ ॥೬೯॥ ರತ್ನಗಡ ಇಹುದು ಮಹಾನಿಧಿ ।ನೇವಾಸೆಯು ನಿವಾಸನಿಧಿ । ಶಿವ ಸಮರ್ಥರು ಅಮೃತವಾಹಿನಿ (ಪ್ರವರಾ) ನದಿ । ಅಗಸ್ತ್ಯರ ಪ್ರಾರ್ಥನೆ ಮನ್ನಿಸಿ ನಿರ್ಮಿಸಿಹರು ॥೭೦॥ ಇವೆಲ್ಲ ಕಾರಣಗಳಿಂದ ಈ ಕ್ಷೇತ್ರ । ಆಗಿದೆ ಅಲೌಕಿಕ ಮತ್ತು ಪವಿತ್ರ । ಅಮೃತಕ್ಕಾಗಿ ಸರ್ವ ನಾರಿ-ನರ । ಬರುತ್ತಾರೆ ಇಲ್ಲಿ ಅಗಸ್ತ್ಯರ ಭೆಟ್ಟಿಗೆ ॥೭೧॥ ಈ ಕ್ಷೇತ್ರದಿ 'ಅಗಸ್ತ್ಯಪೂಜಾ' ಫಲ । ಇಹುದು ಸರ್ವಾಧಿಕ ಮತ್ತು ಅತುಲ । ಮಾತ್ರ ಉದ್ದೇಶ ಬೇಕು ಲೋಕಹಿತದ ಸಬಲ । (ಅಂದರೇ) ಅನುಭೂತಿ-ನಿಶ್ಚಿತ ॥೭೨॥ ಅಗಸ್ತ್ಯರಿಹರು ಸಿದ್ಧದೇವ । ಋಷಿ-ಮುನಿ ಮತ್ತು ಮಾನವ । ಆಜ್ಞೆ ಪಾಲಿಸಲು ಶಿವತತ್ತ್ವ । (ಅವರಿಗೆ) ಕೊಡುವವು ಸದಾ ಸರ್ವಶಕ್ತಿ ॥೭೩॥ ಅಗಸ್ತ್ಯರು ರಚಿಸಿದ್ದಾರೆ ಸೂಕ್ತ। ಪವಿತ್ರವೇದಮಂತ್ರಯುಕ್ತ । ರಚಿಸಿದ್ದಾರೆ ಯಂತ್ರ, ಉಪಯುಕ್ತ । ಶಕ್ತಿ ಪ್ರಕಟಿಸಲು ॥೭೪॥ ಅಗಸ್ತ್ಯ ನಿರ್ಮಿಸಿಹರು ಔಷಧಿ । ಶೋಧಿಸಿಹರು ಶಲ್ಯ ಚಿಕಿತ್ಸೆಯ ವಿಧಿ । ತಾಳವು ಮಹಾವಿಷ ಸರ್ಪ-ಚೇಳು ಆದಿ-।-ಗಳ ಅಗಸ್ತ್ಯರ ಮುಂದೆ ॥೭೫॥ ಸ್ಥಾಪಿಸಿ ಪರ್ಜನ್ಯ, ಪರ್ಯಾವರಣ । ಅಗಸ್ತ್ಯರು ಮಾಡಿದರು ನಿಯಮನ । ಯೋಜಿಸಿದರು

ಜಲ-ವ್ಯವಸ್ಥಾಪನ । ಕೃಷೀವಲ, ಪಶು, ಪಕ್ಷಿಗಳಿಗೆ ॥೭೬॥ ಅಗಸ್ತ್ಯರಿಹರು ಗರ್ವ ಸಂಹಾರಕ । ದುಷ್ಟ ಪ್ರವೃತ್ತಿ ವಿದಾರಕ । ಶೋಷಕ, ಶತ್ರು ನಾಶಕ । ಕೃಪಾವಂತ ಮಹಾಯೋಗಿ ॥೭೭॥ ಅಗಸ್ತ್ಯರಿಹರು ಪ್ರತ್ಯಕ್ಷ ಪರತತ್ವ । ತ್ರಿದೇವ ಮತ್ತು ಪಂಚತತ್ವ । ಅಂತರೀಕ್ಷ, ಗ್ರಹ ಸ್ಥಿರಿಸುವ ದೇವ । ಎಲ್ಲರೂ ವಿನಂತಿಸುವರು ॥೭೮॥ ಅಗಸ್ತ್ಯರು ಸರ್ವಭೂತರ ಪ್ರತಿ ನಮ್ರ । ಇಹರು ಪ್ರಾಣಿಮಾತ್ರರ ಮಿತ್ರ । ಖಲ, ಗರ್ವಿ, ಶೋಷಕರ ಪ್ರತಿ ಉಗ್ರ । ಶಿವನ ತ್ರಿತೀಯ ನೇತ್ರ॥೭೯॥ ಅಂತೇ ಅಗಸ್ತ್ಯರಿಗೆ ಹೋಗುವಾಗ ಶರಣಾರ್ಥ । ಇರಬೇಕು ವಿನಮ್ರ, ಶುಚಿರ್ಭೂತ । ತೋರಬೇಕು ಸ್ಪಷ್ಟ ಮನ-ಹೃದ್ಗತ । ಅಗಸ್ತ್ಯರ ಮುಂದೆ ॥೮೦॥ ಸ್ನೇಹ ಇಂದ್ರ ಅಗಸ್ತ್ಯರದಿತ್ತು ಅದ್ವೈತ । ಚೆನ್ನಾಗಿ ಇತ್ತು ಇದು ಸರ್ವಶ್ರುತ । ಅಪ್ಪಶಿವರಿಂದ ಇದು ಕಥಿತ । ಸರ್ವರಿಗೂ ॥೮೧॥ ಸಪ್ತರ್ಷಿಯರ ಸಹವರ್ತಮಾನ । ಇದ್ದಿತು ಸಹಾಯಕಾರಿ ಯಮಗೆ ಅಗಸ್ತ್ಯಗಣ । (ಕಾರಣ) ಯಮನಿದ್ದ ಅಗಸ್ತ್ಯರಿಗೆ ಶರಣ । ಅಗಸ್ತ್ಯರಿಹರು ಅವಿನಾಶಿ॥೮೨॥ ಪರಶುರಾಮ ಅಗಸ್ತ್ಯರಕಡೆ ಹೋದರು । ಕ್ಷತ್ರೀಯರ ಹತ್ಯೆಯ ಪ್ರಾಯಶ್ಚಿತ್ತ ಕೇಳಿದರು । ಅವರಿಗೂ 'ಮಾರ್ಗದರ್ಶನ' ಮಾಡಿದರು । ಮತ್ತು 'ಪುನೀತ' ॥೮೩॥ ಸಗೋತ್ರಿ ಇದ್ದರೂ ರಾವಣ । ಅಹಂಕಾರ ಹರಿಸಿದರು ಅವನ । ರಾಮನಿಗೇ ಆಯ್ತು ಅಗಸ್ತ್ಯರ ಮಾರ್ಗದರ್ಶನ । ಮತ್ತು ಸಹಾಯ್ಯ ॥೮೪॥ ರಾವಣನು ಮಾಡಿದಾಗ ಸೀತಾಪಹರಣ । ಜಟಾಯುನನ್ನು ಕಳಿಸಿದರು ಬಾಣ-।-ವತ್ ಸೀತೆಯ ಸಹಾಯಾರ್ಥ ತಕ್ಷಣ । ಅಗಸ್ತ್ಯರು ಭವಿಷ್ಯ ಗೊತ್ತಿದ್ದೂ ॥೮೫॥ ಅಗಸ್ತ್ಯ ಮತ್ತು ಹನುಮಾನರ । ಸಂಬಂಧ, ಗುರು-ಶಿಷ್ಯ ಬಂಧು-ಮಿತ್ರರ । ಇದ್ದರೂ, ಈ



ಪೂರ್ಣಶಿವರೂಪರ-।-ಸಹಾಯ ಇದ್ದಿತು, ವಿಷ್ಣುವಿಗೆ ಲೋಕಹಿತಾರ್ಥ ॥೮೬॥ ದ್ರೋಣ, ಕೃಷ್ಣ, ಬಲರಾಮರೂ। ಅಗಸ್ತ್ಯರ ಉಪದೇಶ ಪಡೆದರು । ವ್ಯಾವ್ಹಾರಿಕ ಚರ್ಚೆ ಮಾಡುತ್ತಿದ್ದರು । ನಾನಾ ವಿಧದ ॥೮೭॥ ಮಹರ್ಷಿ ವಾಲ್ಮೀಕಿ ಮತ್ತು ವ್ಯಾಸ । ಪೌರಾಣಿಕ ಕಾವ್ಯ ಬರೆದರು ವಿಶೇಷ । ಪಡೆಯುತ್ತಿದ್ದರು ಸಹಾಯ, ಆಶಿಷ । ಅಗಸ್ತ್ಯರಿಂದ ಅವರೂ॥೮೮॥ ಅಗಸ್ತ್ಯರ ಬಗ್ಗೆ ಋಗ್ವೇದದ ಮತ-।-'ಋಷಿರುಗ್ರಃ ನೃಪಪ್ರಶಸ್ತಃ' । ಆದರು ಮಾನವರೂಪ-ಪುರೋಹಿತ । ಖೇಲರಾಜನ ಸಹಾಯ್ಯಕ್ಕಾಗಿ ॥೮೯॥ ಖೇಲರಾಜ ಪತ್ನಿ ವಿಪ್ಲೆಯ । ಹೋದ ಕಾಲಿನ ಬದಲಿ, ಚಿನ್ಮಯ (ಸುವರ್ಣಮಯ) । ಕಾಲು ಕೂಡಿಸಿ, ಅಶ್ವಿನಿಯ ಸಹಾಯ-।-ತಕ್ಕೊಂಡು ನಿಲ್ಲಿಸಿದರು ಯುದ್ಧಕ್ಕಾಗಿ ॥೯೦॥ ಅಗಸ್ತ್ಯರ ಬಗ್ಗೆ ಹೇಳುವದು ರಾಮಾಯಣ । 'ಸಾಧುಹಿತಕ್ಕಾಗಿ ಈ ಜನಪ್ರಿಯ ಸಂತನ-ಜೀವನ'। ಸ್ಕಂದಪುರಾಣದ ಅಗಸ್ತ್ಯ-ವರ್ಣನ-।-'ಜನರಕ್ಷಣೆಗಾಗಿ ತನ (ಮನ ಧನ)' ॥೯೧॥ ಈ ಕೃಪಾಳು ಬುದ್ಧಿವಂತನು ಲೋಕಹಿತಕ್ಕಾಗಿಯೇ ಚಿಂತಿಸುವನು । ಜನತಾ ಜನಾರ್ದನನ ಹರ್ಷಕ್ಕಾಗಿಯೇ ತಪಿ (ಪೂಜಿ)ಸುವನು' । ಹೀಗೆ ಮಾಡಿದೆ ಬ್ರಹ್ಮಾಂಡ ಪುರಾಣವು ವರ್ಣನೆಯನ್ನು। 'ಜನರ ತಾರಕ (ದಾಟಿಸುವ ಮತ್ತು ತಾರೆಯಾಗಿ) ರಾಗಿ ಬೆಳಗುತ್ತಿಹರು'। ಇದನ್ನು ಬಣ್ಣಿಸಿದೆ ವಾಯು ಪುರಾಣ ॥೯೨॥ ''ಸರ್ವ ಭೂತ ಹಿತೇ ರತಃ । ತ್ವಂ ಲೋಕಾನಾಂ ಗತಿಃ। ತ್ವಂನ ತ್ರಾತಾ ವಿಧಾತಾ ಚ ಲೋಕಾನಾಂ ಲೋಕಭಾವನಃ'' ಹೀಗೆ ವರ್ಣನೆ ಇದೆ ಮಹಾಭಾರತದಲ್ಲಿ ॥೯೩॥

ಬ್ರಾಹ್ಮಣಗ್ರಂಥ ಅನ್ನುವವು, ‘ಶಾಂತಿಪ್ರಿಯರು’ । ಉಪನಿಷತ್ತು ಅನ್ನುವವು ‘ವಿದ್ಯಾವ್ಯಾಸಂಗಿ ಅವರು। ತಜ್ಞ ಗುರುವರ್ಯ್ಯರಿಹರು ,। ‘ಅಗಸ್ತ್ಯ ಋಷಿವರರು’ ।೯೪॥ ಅಗಸ್ತ್ಯರೆಂದರೆ ‘ದೂರ ದೃಷ್ಟಿಯ ಋಷಿವರರು । ಪುರೋಹಿತ, ಕವಿ, ಯಜ್ಞ ಯಜಮಾನರು । ಸಾಮವೇದ ರಚಿಸಿ, ಸಂಗೀತ ಹಾಡಿದರು । ಅಥರ್ವವೇದದ ಜಾದುಗಾರರು ।೯೫॥ ಉಗ್ರ ತಪಸ್ವಿ ಮಹಾಮತಿ । ಉಪದೇಶಕ, ತತ್ವಚಿಂತಕ ಕುಶಲ ಮಧ್ಯಸ್ತಿ । ಮಹಾಶಕ್ತಿಶಾಲಿ, ದಿವ್ಯಧನುರ್ಧಾರಿ ಅತುಲ ರಥಿ । ಮಹಾಜಾಲ ನಿರ್ಮಿಸಿದ ಯೋಗಿ ।೯೬॥ ಮಾಡಿದರು ಸರ್ವತ್ರ ತೀರ್ಥಾಟನ । ನಿರ್ಮಿಸಿದರು ವ್ಯೋಮ-ಗಗನ । ಮಹಾತೇಜಸ್ವಿ ಸಿದ್ಧಿ ವಿದ್ಯಾಸ್ಥಾನ । ಸ್ಥಾಪಿಸಿದರು. ಎಲ್ಲಕಡೆ ।೯೭॥ ಅಗಸ್ತ್ಯ ಸರಿಪಡಿಸಿದರು ‘ಪರ್ಜನ್ಯ’ ಪರ್ಯಾವರಣ । ಹಾಗೇ, ವ್ಯವಸ್ಥಾಪಿಸಿದರು ಲೋಕ-ಜೀವನ । ನಗರ-ವಸತಿ ನೆಲೆಸಿದರು ನವೀನ । ಎಲ್ಲ ಮಾನವರಿಗಾಗಿ ।೯೮॥ ಹೀಗಿಹರು ಸರ್ವಸಾಕ್ಷಿ ಸರ್ವಜ್ಞರು । ಸಿದ್ಧ ಋಷಿ-ಮುನಿ ಯೋಗಿ ಅಗಸ್ತ್ಯರು । ಮಹಾಭಾರತೋತ್ತರ ಕಾಲದಲ್ಲಿ ವಿಖ್ಯಾತರಾದರು । ವೇದ ವಿದ್ಯಾ-ವ್ಯಾಸಂಗದಿಂದ ।೯೯॥ ಶಂಕರಾಚಾರ್ಯರು ಪಡೆದರು ಆಶೀರ್ವಚನ । ಮಾಡುವಾಗ ಅದ್ವೈತ ಸಂಶೋಧನ । (ಮಾಡುವಾಗ ‘ಶಾಂಕರ ಭಾಷ್ಯ’ದ ಲೇಖನ) ಮಾಡಿ ಭಾರತ ತುಂಬೆಲ್ಲ ಶಿವತತ್ವ ಪ್ರಸಾರಣ । ಬೆಳೆಸಿದರು ಅಗಸ್ತ್ಯ ವಿದ್ಯೆ ।।೧೦೦॥ ಚಂದ್ರಗುಪ್ತ, ಚಾಲುಕ್ಯ, ಯಾದವ । ಪಾಂಡವಾದಿ ಜನ, ಸಮುದಾಯ ಸರ್ವ । ವಿಶೇಷವಾಗಿ ದಕ್ಷಿಣ (ಭಾರತ)ದ ಭೂಮಿಯವ । ಅಗಸ್ತ್ಯರನ್ನು ಪೂಜಿಸುವನು ।।೧೦೧॥ ಅಗಸ್ತ್ಯರು ಶಿವಶಕ್ತಿ ಸಿದ್ಧ ಮಾಡಿದರು । ಅದರ ಸೌಖ್ಯ



ಜನರಲ್ಲಿ ವಿವರಿಸಿದರು । ಯಂತ್ರ, ಮಂತ್ರ, ತಂತ್ರಗಳ ಪ್ರಸಾರ ಮಾಡಿದರು । ಜನಮನದ ಇಚ್ಛೆ ಪೂರೈಸಲು ।।೧೦೨॥ ಅಗಸ್ತ್ಯಪೂರದ ‘ಅಕೋಲೆ’ ಗ್ರಾಮದಿ । ಅಮೃತವಾಹಿನಿ (ಪ್ರವರಾ) ತೀರದ ಆಶ್ರಮದಿ । ರಾಮ, ಪಾಂಡವರ ನಂತರ ಯಾತ್ರಿಕ-ಪಥಿಕ-ಆದಿ । ವ್ಯಕ್ತಿಗಳು ಅಗಸ್ತ್ಯರನ್ನು ಸಂದರ್ಶಿಸಿದರು ।।೧೦೩॥ ಯಾದವ ಕಾಲದಲ್ಲಿ ನಿಧಿ ನಿವಾಸ (ನೇವಾಸೆ)ದಲ್ಲಿ ಅಗಸ್ತ್ಯರು ಜ್ಞಾನೇಶ್ವರರಿಗೆ ಪ್ರೇರಿಸಿದರು । (ನೇವಾಸೇ ಈ ಊರಲ್ಲಿ ಸಂತ ಶ್ರೇಷ್ಠ  ಜ್ಞಾನೇಶ್ವರರು ‘ಜ್ಞಾನೇಶ್ವರಿ’ ಈ ‘ಗ್ರಂಥರಾಜ’ವನ್ನು ಹೇಳಿ ಬರೆಸಿದರು) ಆದೇಶ ಪಡೆದು ಮೋಹಿನಿರಾಜರು । ದೇವರ್ಷಿ ನಾರದರಿಗೆ ಶ್ರೇಯ ಕೊಟ್ಟರು ।।೧೦೪॥ ಮಹಾಲಯ (ಶಿವ) ಮೋಹಿನಿರಾಜರು ಅದ್ವೈತದ ಮಹತಿ ಜ್ಞಾನದೇವರಿಗೆ ಕೇಳಿದರು । ಗೀತೆಯ ಅರ್ಥ ಬರೆಸಿದರು ನಾರದರ ಸಾಕ್ಷಿಯಲ್ಲಿ ।।೧೦೫॥ ಶಿವಸ್ವರೂಪ ಶಿವಛತ್ರಪತಿಯರು । ಜಟಾಯು ತೀರ್ಥ, ಪಟ್ಟಾಗಡದಿಂದ ಬಂದರು । ಶಿವಸ್ವರೂಪ ಅಗಸ್ತ್ಯರನ್ನು ಸಂದರ್ಶಿಸಿದರು । ಅಕೋಲೆ ಆಶ್ರಮದಲ್ಲಿ ।।೧೦೬॥ ಶಿವಾಜಿಗೆ ಪ್ರೇರಿಸಿ ಅಗಸ್ತ್ಯ ಋಷಿಯರು । ಲೋಕೋಪಯೋಗಿ ಕಾರ್ಯ ಮಾಡಿಸಿದರು । ಅವರನ್ನು ಸ್ಮರಿಸಿ ಶಿವರಾಜರೂ-।-ಶಿವಾಸ್ಪದ ರಾಜ್ಯ ಸ್ಥಾಪಿಸಿದರು ।।೧೦೭॥ ಪುಣ್ಯಶ್ಲೋಕ ಅಹಿಲ್ಯಾ ದೇವಿಯರು । ತ್ರ್ಯಂಬಕೇಶ್ವರ ಪ್ರಾಂತದ ಅಧಿಪತಿಯವರು । ನೋಡಿ, ಅಗಸ್ತ್ಯ ಪರಿಸರ ಪ್ರಾರ್ಥಿಸಿದರು ।ಅಗಸ್ತ್ಯ ಋಷಿ ಶ್ರೇಷ್ಠರನ್ನು ।।೧೦೮॥ ಮಾಡಿ ಅಗಸ್ತ್ಯ ಕಾರ್ಯದ ಸ್ಮರಣ । ವ್ಯವಸ್ಥೆ ಮಾಡಿದರು ನೀರಿನ ।

ನೀರಿನಂತೆ ಸುರಿದರು ಧನ । ಭಾವಿ, ಪಾವಟಿಗೆ ಇತ್ಯಾದಿ ಕಟ್ಟಲು ॥೧೦೯॥ ಅಗಸ್ತ್ಯರಿದ್ದರೂ ವಿಶ್ವ-ದೇವ । 'ಅಕೋಲೆ' ಗ್ರಾಮದಿ 'ಮನೆಯವ' ಸ್ಥಾನೀಯ ಜನರ ಜಗಳಾಟವ । ಬಿಡಿಸುವರು ಅಗಸ್ತ್ಯರೇ ॥೧೧೦॥ ಕ್ಷೇತ್ರೀಯ ಇರಲಿ ವಾ ಬಾಹ್ಯಿಕ । ದುಃಖದ ವಾ ವೃತ್ತಿ ಪರ ಆಕ್ರಮಕ। ಬೇಡಿದರೆ ಅಗಸ್ತ್ಯರಿಗೆ ನಿಃಶಂಕ । ನಿವಾರಿಸುವರು ಖಂಡಿತ ॥೧೧೧॥ ಇರಲಿ ದುಃಖ ಲೌಕಿಕ ವಾ ಪಾರಲೌಕಿಕ । ಭೌತಿಕ ಅಥವಾ ಆದಿ ಭೌತಿಕ । ವ್ಯಾಧಿ, ಗೃಹಪೀಡೆ ಘಾತಕ । ಆಗುವವು ಸಮಾಪ್ತ ಈ ಗ್ರಂಥ ವಾಚನದಿಂದ ॥೧೧೨॥ ಅಗಸ್ತ್ಯ ವಿಶ್ವವಂದ್ಯ ದೇವರು । ನಾನಾ ದೇಶಗಳ ರೂಪಗಳಲಿ ಕಾಣುವರು। ಲಿಂಗರೂಪದಲ್ಲಿ ಪ್ರಕಟಿಸುವರು । ಶಿವರೂಪರಾಗಿ ॥೧೧೩॥ ಆಶ್ರಮಕೆ 'ಅಕೋಲೆ' ಗ್ರಾಮದ । ಅಗಸ್ತ್ಯ ಬರುತ್ತಾರೆ ಶಿಷ್ಯರ ಕೂಡ । ಬರುತ್ತಾರೆ (ಅಗಸ್ತ್ಯರ ಭೆಟ್ಟಿಗೆ) ಋಷಿಗಳು ದೇಶ-ವಿದೇಶದ । ಇದ್ದೂ ಒಕ್ಕಲಿಗರ ವಸತಿ ಎಲ್ಲ ॥೧೧೪॥ ಪೋಥಿಯಿಲ ವಿಂಧ್ಯ ಹಿಮಾಲಯ । ಸಾತಪುಡಾ, ಗಿರನಾರ, ಸಹ್ಯ । ಇತ್ಯಾದಿ ಎಲ್ಲ ಗಿರಿಗಳಲಿ ಅಗಸ್ತ್ಯ-।-ಪುರಿ ಮೆರೆವುದು ಶಿರೋಭೂಷಣದಂತೆ ॥೧೧೫॥ ಈ ಸ್ಥಾನದ ಹಿರಿಮೆ ಅಪಾರ । ಈ ಕ್ಷೇತ್ರ ಸದಾ ಶುದ್ಧ-ಪವಿತ್ರ । ಬಾಧಿಸದು ಇಲ್ಲಿ ದೋಷ ಯಾತರ । ಪ್ರತ್ಯೇಕ ಕ್ಷಣವು ಮಂಗಲ ॥೧೧೬॥ ಬೇಡಿದೊಡೆ ಏನಾದರೂ। ಶ್ರದ್ಧೆ ಇಟ್ಟು ಯಾರ್ಯಾರೂ । ನಿಶ್ಚಿಂತರಾಗಿ ಹೋಗುತ್ತಾರೆ ಎಲ್ಲೆಲ್ಲರೂ । ಉದ್ದೇಶ ಶುದ್ಧ ಇದ್ದೊಡೆ ॥೧೧೭॥ ಇಹುದು ಸಿದ್ಧ ಈ ಕಳಸಾಧ್ಯಾಯ । ಮಹಾಶಕ್ತಿ ಪ್ರಕಟಿಸುವರು ಅಗಸ್ತ್ಯ । ಸಿದ್ಧಿ ಪ್ರಸನ್ನ ಅವರ ಕೃಪೆಯ । ಕಾರ್ಯಸಫಲವಾಗಲು ॥೧೧೮॥ ಶ್ರೀ ಗಣೇಶ, ವಿಷ್ಣು, ಶಕ್ತಿಸಹ ಶಿವ । ಶಿವಾವತಾಕಾರಿ ಅಗಸ್ತ್ಯ ಸದೈವ । ಪ್ರತ್ಯಕ್ಷ



ಬ್ರಹ್ಮದೇವರು ಅಶುಭವ । ದೂರಿಸುವರು ವಿಧಲಿಖಿತ ಕೂಡ ॥೧೧೯॥ ರಾವ-ರಂಕ, ಎಲ್ಲರೂ ಸಮಾನ । ಭೂತಮಾತ್ರ ಬಂದೊಡೆ ಶರಣ । ಮಾಡುತ್ತಾರೆ ಅಗಸ್ತ್ಯರೇ ನಿವಾರಣ । ಸ್ವಂತ ಸ್ವಹಸ್ತದಿಂದ ॥೧೨೦॥ ಆಗಿದೆ ಜನರಿಗೆ ದೇವರ ವಿಸ್ಮರಣ । ಚದರಿ ಹೋಗಿದೆ ವ್ಯವಸ್ಥಾಪನ । ಆಗದೆ ದೈತ್ಯ ವೃತ್ತಿಯ ವರ್ಧನ । ಮರೆತಿದೆ ಬ್ರಹ್ಮ ತತ್ವವನ್ನು ॥೧೨೧॥ ಪುನಃಪ್ರಸ್ಥಾಪಿಸಲು ಪರ್ಯಾವರಣ । ಜಲಪ್ರಣಾಲಿಯ ಸಂವರ್ಧನ । ಮಾಡಲು ಋತುಚಕ್ರದ ನಿಯಮನ । ಪ್ರಾರ್ಥಿಸಿರಿ ಅಗಸ್ತ್ಯರನ್ನು ॥೧೨೨॥ ಇದ್ದರೂ ತ್ರಿದೇವ ಪರಮಾತ್ಮತತ್ವ । ಋಷಿ-ಮುನಿ ಸಿದ್ಧ ಸದೈವ । ಇದ್ದರೂ ಅವೆಲ್ಲರ ಚಿರಂತನ ಪ್ರಭಾವ। ಆವಾಹನ ಆವಶ್ಯಕ ಲೌಕಿಕಕ್ಕಾಗಿ ॥೧೨೩॥ ಅಂತೇ ಎಲ್ಲರೂ ಕೂಡಿ ಆವಾಹನ । ಮಾಡಬೇಕು, ಸಿದ್ಧ ಗುರು, ಅಗಸ್ತ್ಯರ ಸ್ಮರಣ । ಹೋಗಿ ಅನನ್ಯ ಭಾವದಿಂ ಶರಣ । ಜೀವನ ಸುಖಮಯ ಆಗಲು॥೧೨೪॥ ನನ್ನದೇ ಹೇಳುತ್ತಿಲ್ಲ ನಾನು । ನಿವೇದಿಸಿದ್ದೇನೆ ಅಗಸ್ತ್ಯರದೇ ಸಂದೇಶವನ್ನು । ನಮ್ಮಿಬ್ಬರಲ್ಲಿಯ ಸಂವಾದವನ್ನು । ಕೇಳಿದ್ದಾರೆ ಶಿವತತ್ವ ಸಿದ್ಧೇಶ್ವರರು ॥೧೨೫॥ಇನ್ನು ಕೇಳಿರಿ ಈ ಗ್ರಂಥದ ಸಂಕ್ಷೇಪ । ನೆನಪು ಇಡಲು ಅಗಸ್ತ್ಯ ಕಥೆಯ ಸ್ವರೂಪ । ಪ್ರಕಟಿಸಲು ವಿದ್ಯಾ-ಶಕ್ತಿ-ಸಿದ್ಧಿ ಅಮಾಪ । ಕಾರ್ಯ ಮುಕ್ತಾಯವಾಗಲು ॥೧೨೬॥ ಪ್ರಥಮಾಧ್ಯಾಯದಿ ಜನ್ಮಕಥೆ ಅಗಸ್ತ್ಯರ । ಅದ್ಭುತ ಕೃತಿ, ಪರಮತತ್ವ ದೇವರ । ಕುಂಬೋಜ ಮಿತ್ರಾವರುಣಿ ಊರ್ವಶೀಯ ಪುತ್ರ । ಹುಟ್ಟಿದ ತ್ರೈಲೋಕ ಬೆಳಗಲು ॥೧೨೭॥ 'ಮಾನ' ಕುಂಭದಲ್ಲಿ ಹುಟ್ಟಿದ । ಅಂತೇ-ಮಾನಸಂಜ್ಞೆ ಪಡೆದ । ಮಾನ, ಮಾನಸ, ಮಾನ್ಯನೆಂದು ಖ್ಯಾತನಾದ । ಸಕಲ ಲೋಕಗಳಲಿ ॥೧೨೮॥ ಮಾಂದಾರ ಕ್ಷೇತ್ರದಲಿ

ಜನಿಸಿದ । ಅಂತೇ 'ಮಾಂದಾರ್ಯ' ನಾಮ ಧರಿಸಿದ । ಮಾತ್ರ ಪಾರ್ವತಿಯಿಂದ ಆಮಂತ್ರಿಸಿದ । ಕರ್ತವ್ಯ ಸಂಪನ್ನ ಅಗಸ್ತ್ಯ ॥೧೨೯॥ ಹೀಗಿಹುದು ಅಗಸ್ತ್ಯ ಜನ್ಮ ಕಥೆ । ದಿವ್ಯ ಪುತ್ರ ಪ್ರಾಪ್ತಿಗಾಗಿ ಹಾಡಿದ ಗೀತೆ । ಶ್ರದ್ಧೆಯಿಂ ಓದುವ, ಕೇಳುವ ಇಟ್ಟರೆ ಪ್ರಥೆ । ನಿಶ್ಚಿತ ದಿವ್ಯಪುತ್ರ ಪ್ರಾಪ್ತಿ ॥೧೩೦॥ ದ್ವಿತೀಯಾಧ್ಯಾಯದಲ್ಲಿ ಇಂದ್ರ-ಮರುತರ ಕಥೆ-ಸಂಘರ್ಷದ । ಅಮೋಘ ವಾಕ್ ಪಟುತ್ವದಿಂದ । ಅಗಸ್ತ್ಯರು ಕೌಶಲ್ಯದಿಂದ ಮಧ್ಯಸ್ತಿಕೆ ಮಾಡಿದ । ತಂಟೆ ಮುಕ್ತಾಯ ಆದ ॥೧೩೧॥ ಶತ್ರು ಭಾವ ನಿವಾರಿಸಿ ಮಿತ್ರ ಮಾಡಿದರು । ಸೃಷ್ಟಿ ಚಕ್ರ ನಿಯಮಿತಿಸಿದರು । ಪರ್ಜನ್ಯದಿ ಸಮನ್ವಯ ಸಾಧಿಸಿ ನಿರ್ಮಿಸಿದರು । ಶಿತೋಷ್ಣ ಚಕ್ರ ॥೧೩೨॥ ಓದಿ ಈ ಅಧ್ಯಾಯ ಅದ್ಭುತ । ಶತ್ರು ಆಗುವನು ಮಿತ್ರವತ್ । ಮರೆತು ಸಂಘರ್ಷ, ಆಗುವದು ಪ್ರಾಪ್ತ-।- ಸರ್ವತ್ರ ಶಾಂತಿ ॥೧೩೩॥ ತೃತೀಯಾಧ್ಯಾಯದಲ್ಲಿಯೂ ವಿವಿಧ ಕತೆ ಸುರಸ । ಸಮುದ್ರ ಪ್ರಾಶನ, ಗರ್ವಹರಿತನಾದ ನಹುಷ । ಅಮೃತಮಂಥನ, ಅಮೃತವಾಹಿನಿಯ ಅಗಸ್ತ್ಯವಶ -।- ಇತ್ಯಾದಿ ಅತಿ ಅದ್ಭುತ ॥೧೩೪॥ ಸಂಕಟಗಳನು ನಿವಾರಿಸಲು । ಶತ್ರುಗಳ ಗರ್ವಹರಿಸಲು । ಸುಖ-ಸಮೃದ್ಧಿ ಭೋಗಿಸಲು । ಕಥಾವಾಚನ ಕೃಪಾದಾಯಿ ॥೧೩೫॥ ಚತುರ್ಥದಿ ವಿವಾಹಕತೆ ಶಿವ ಪಾರ್ವತಿಯ। ಅಗಸ್ತ್ಯಕೃತ ಉತ್ತರ-ದಕ್ಷಿಣ ಸಮನ್ವಯ । ಅಗಸ್ತ್ಯರ ತತ್ಪರತೆ ಕಾರ್ಯಸಿದ್ಧಿಯ -।- ಬರುವದು ಪ್ರತ್ಯಯ ॥೧೩೬॥ ಅಗಸ್ತ್ಯರು ವಿಂಧ್ಯಾದ್ರಿಯ ದುರಾಗ್ರಹ ದೂರಿಸಿ । ನಿಸರ್ಗಸೃಷ್ಟಿಯ ಸಮತೋಲ ಸಾಧಿಸಿ । ಮಾಡಿದರು 'ಕಾವೇರಿ' ನದಿ ಹುಟ್ಟಿಸಿ । ಜಲ-ವ್ಯವಸ್ಥಾಪನೆ ॥೧೩೭॥ ಪ್ರಪಂಚ, ವ್ಯವಹಾರ, ಪಾರಮಾರ್ಥದಿ । ಕೃಷಿಕ್ಷೇತ್ರವಾ ಅನ್ಯ



ಕ್ಷೇತ್ರದಿ । ಸಾಧಿಸಲು ಸುವ್ಯವಸ್ಥೆ ಸಮತೋಲ ಆದಿ । ಈ ಅಧ್ಯಾಯದ ವಾಚನ ಕೃಪಾದಾಯಿ ॥೧೩೮॥ ಪಂಚಮ ಅಧ್ಯಾಯದಿ ಅಗಸ್ತ್ಯ ವಿದ್ಯೆಯ ವರ್ಣನ । ಅಗಸ್ತ್ಯರ ಪವಿತ್ರ ಆಶ್ರಮಸ್ಥಾನ । ಅಗಸ್ತ್ಯರ ಸಿದ್ಧ-ಗೋತ್ರ ಸ್ಥಾಪನ। ಇತ್ಯಾದಿಗಳ ಸವಿಸ್ತರ ಮಾಹಿತಿ ॥೧೩೯॥ ಅಗಸ್ತ್ಯ ಲೋಪಾವಿವಾಹದ । ಅಲೌಕಿಕ ಗೋತ್ರ, ಗೋತ್ರಜ ರಕ್ಷಣದ। ಲೋಪಾ ನಿರ್ಮಾಣದ ದೃಢಸ್ಯೂತ ಜನ್ಮದ । ರೋಮಹರ್ಷಕ ಕತೆ ॥೧೪೦॥ ಉದ್ಧರಿಸಿದರು ಗೋತ್ರಜರನ್ನು । ಮಾಡಿದರು ಅಪಾರ ವಿದ್ಯಾ ಪ್ರಸಾರವನ್ನು । ಸ್ವೀಕರಿಸಿದರು-ಲೋಕಜೀವನವನ್ನು । ಸಾಧಿಸಿದರು ಪುರುಷಾರ್ಥ॥೧೪೧॥ ಪುರುಷಾರ್ಥ ಸಾಧಿಸಲು ನಿರ್ವಿಘ್ನ । ಮಾಡಲು ಗೃಹಸ್ಥಾಶ್ರಮ ಸಫಲ ಸಂಪನ್ನ । ಮಾಡಲು ಸುಪುತ್ರ ಸುವಿದ್ಯಾದಿ ಪ್ರಾಪ್ತನ । ಕೃಪಾಲಾಭ ಅಗಸ್ತ್ಯರ ॥೧೪೨॥ ಷಷ್ಠಾಧ್ಯಾಯದಲ್ಲಿ ಅಗಸ್ತ್ಯ ವರ್ಣನ । ವಿವಿಧ ಶಕ್ತಿ, ದೇವಾಧಿಕರ ಲಕ್ಷಣ । ಹೇಗಿಹನು ಸ್ವಾಮಿ ಕಾರ್ಯಪ್ರವಣ । ಉಪಕಾರಕ ಮಾನವರಿಗೆ ॥೧೪೩॥ ದೇವತೆಯರ ಮಾಡಿದೊಡೆ ಪೂಜನ । ಹೋದೊಡೆ ದೇವರಿಗೆ ಅನನ್ಯರಾಗಿ ಶರಣ । ಸಾಧ್ಯ ಅಲೌಕಿಕ ಸಿದ್ಧಿ-ಸಮೃದ್ಧಿಯ ಪ್ರಾಪ್ತನ। ಸುಖೋಪಭೋಗ ಅಗಸ್ತ್ಯಕೃಪೆಯಿಂದ ॥144॥ ಅಗಸ್ತ್ಯ ವ್ಯವಸ್ಥಾಪನ । ಭೂಲೋಕ ಜೀವಮಾತ್ರಕೆ ಚಿನ್ನ ।ಸಧ್ಯದ (ಚದರಿದ) ಅಸ್ತಾವ್ಯಸ್ತದ ಜೀವನ । (ದುಃಖ ಸಂಕಟಗಳ ಕಾರಣ) ತ್ರಸ್ತ ಆಗಿದೆ ॥೧೪೫॥ ನಿವಾರಿಸಲು ದುಃಸಹ ಜೀವನ । ಉಪಕಾರಕ ಸಿದ್ಧ ಅಗಸ್ತ್ಯರ ಅನುಶಾಸನ ।ಮಾಡಿ ಅವರಿಗೇ ಆವಾಹನ ಸ್ಮರಣ ।

ಸುಖ-ಭೋಗಿಸಿರಿ ॥೧೪೬॥ ಈ ಅಧ್ಯಾಯದಿ ಹೇಳಲಾಗಿದೆ ಮಹಾತ್ಮ್ಯ । ಗುಣ-ಲೌಕಿಕ ವಿದ್ಯೆ ಅಗಸ್ತ್ಯ । ಶ್ರೇಷ್ಠ ರೂಢಿ, ತತ್ವಜ್ಞಾನ ದಿವ್ಯ । ಆವಾಹನದ ಬೋಧ ॥೧೪೭॥ ಮಾಡಲು ಪರ್ಯಾವರಣ ಶುದ್ಧ । ನಿವಾರಣೆ ಭಯಾನಕ ಕೃಷ್ಣ ಕೃತ್ಯದ । ಮಾಡಲು ಕೃಷಿ ಜೀವನ ಸಮೃದ್ಧ । ಷಷ್ಠಾಧ್ಯಾಯ ಓದಿರಿ ॥೧೪೮॥ ಈ ಕಳಸಾಧ್ಯಾಯದಲ್ಲಿ ಅಗಸ್ತ್ಯ ಮಹಿಮೆ। ಅಕೋಲೆ ಅಗಸ್ತ್ಯಪುರಿ ಮಹಿಮೆ। ಅಗಸ್ತ್ಯವಿದ್ಯೆ ಜನಹಿತ ಕಾರ್ಯ ಮಹಿಮೆ -।-ಸಂಪೂರ್ಣ, ವರ್ಣಿಸಲಾಗಿದೆ॥೧೪೯॥ ಅಗಸ್ತ್ಯ ಕೇವಳ ಪರಮತತ್ವ। ಋಷಿ, ತಪಸ್ವಿ ಯೋಗಿ, ಸಿದ್ಧ-ದೇವ । (ಇವರ) ಯೋಜನೆಯನ್ನು ಶಾಶ್ವತ ಲೋಕಹಿತದ ಯಾವ । ಗೌರವಿಸಿಹರು ಸ-ಕೌತುಕ ಶಿವ ॥೧೫೦॥ ಇಲ್ಲಿ ಪ್ರತ್ಯಕ್ಷ ಶಿವತತ್ವವೇ ನೆಲೆಸಿದೆ । ಲೋಕ ಹಿತಾರ್ಥ ತಳಮಳಿಸುತ್ತಿದೆ । ಬ್ರಹ್ಮತತ್ವವೇ ಅಗಸ್ತ್ಯರೂಪದಲ್ಲಿ ತಾಳಿದೆ । ಅನನ್ಯನ ಕರೆಗಾಗಿ ॥೧೫೧॥ ಪ್ರೇರಿಸಲು ಸಮಸ್ತ ಜನರಲ್ಲಿ ಇದನು । ಅಗಸ್ತ್ಯರೇ ಯೋಜಿಸಿದರು ನನ್ನನ್ನು । 'ಪುತ್ರ-ಕ್ಷೇತ್ರ ಅಮೃತವಾಹಿನಿಯವನು' । ಎಂದು, ಬಹುದಾ ಹಿಡಿದರು ನನ್ನ ಕೈ ॥೧೫೨॥ ವಿನಂತಿಸುವೆ ನಾ ನಿಮ್ಮನ್ನ ।ಹೋಗಿರಿ ಅಗಸ್ತ್ಯರಿಗೆ ಶರಣ । ಮಾಡಿಸಲು ಸಮಸ್ತ ಜೀವನ । ಸುಖಿ ಪ್ರಾಣಿ ಮಾತ್ರರ ॥೧೫೩॥ ತಿಳಿಯದಿರಿ ಇದೆಲ್ಲ ಆಡಂಬರ-।-ವಾ ಢೋಂಗ, ಬಂದೀತು ಗಂಡಾಂತರ । ಕಾಡೀತು ಭಯಂಕರ ಕೋಪ ಅಗಸ್ತ್ಯರ । ಅಂತೇ ನಾನು ವಿನಮ್ರನಾದೆನು ॥೧೫೪॥ ಮನುಜರು ದೇವರ ಪ್ರೇರಕರು । ದಾನವರಂತೆ ಉನ್ಮತ್ತರಾಗಿ ಯಾರು । ಜೀವನದಲ್ಲಿ ವರ್ತಿಸಿದರೆ, ಮಾಡುವರು। ಘಾತಸ್ವಂತದ್ದೇ ಸರ್ವಥಾ ॥೧೫೫॥ ಅಂತೇ ಜ್ಞಾತ ಆಯಿತು ಹ್ಯಾಗೆ । ಅಗಸ್ತ್ಯ ಪ್ರೇರಿತ



ಆಜ್ಞೆಯ ಬಗ್ಗೆ । ಕಥನ ಮಾಡಿಹೆನು ಹಾಗೇ । ಕತೃು-ಕರ್ತಾರ ಅಗಸ್ತ್ಯರೇ ॥೧೫೬॥ ಸಿದ್ಧರಾಗಿರಿ ಬಿಟ್ಟು ಸಂಶಯ। ಉದ್ಧರಿಸಲು ಜೀವನ ನಿಮ್ಮಯ । ಕೈಯಲ್ಲಿ ಇದ್ದೂ ಚಿಂತಾಮಣಿ ದಿವ್ಯ । ಅಂಧರಾಗದಿರಿ ವ್ಯರ್ಥ ॥೧೫೭॥ ಬಂದಿದ್ದರೂ ಕೈಗೆ ಅಮೃತ । ಒಗೆದೀರಿ ಸುಮ್ಮನೇ 'ವಿಷ' ಅಂತ । 'ದೈವ ಕೊಟ್ಟದ್ದನ್ನು ಕರ್ಮ ಮಾಡಿತು ವ್ಯರ್ಥ' । ಹೀಗೆ ಆಗ ಕೂಡದು ಭಕ್ತರೇ ॥೧೫೮॥ ಆಗಲು ಈ ಗ್ರಂಥ ಪಾರಾಯಣದ-।- ರೀತಿ, ಸುಲಭ ಮತ್ತು ಫಲಪ್ರದ । ಅಗಸ್ತ್ಯರು ಹೇಳಿದ್ದಾರೆ ಬಿಡಲು (ಆಡಂಬರ) ನಾದ -।-ಮಂತ್ರ, ತಂತ್ರ, ಕರ್ಮಕಾಂಡಗಳ ॥೧೫೯॥ ಮಹಾಕಾಲಿ ಮತ್ತು ಕಾಲಭೈರವ । ಶಿವಪಾರ್ವತಿ ಅಗಸ್ತ್ಯರಿಗೆ ವಶ ಸದೈವ ।ಮಹೇಶರು ಬಿಟ್ಟು ಉಗ್ರರೂಪ, ತಾಂಡವ । ಆಗಿಹರು ಸುಲಭ ಎಲ್ಲರಿಗೂ ॥೧೬೦॥ ಮಾಡಬಹುದು ಈ ಗ್ರಂಥದ ವಾಚನ । ಆಬಾಲ ವೃದ್ಧ, ಸ್ತ್ರೀ-ಪುರುಷ ಸರ್ವಜನ । ಕೂಡ, ಧರ್ಮ, ಪಂಥ ಜಾತಿಗಳ ಇಲ್ಲ ಬಂಧನ । ಸರ್ವರಿಗೂ ಮುಕ್ತ ॥೧೬೧॥ ತಿಥಿ, ಮಾಸ, ವರ್ಷ, ವಾರ, ನಕ್ಷತ್ರ । ನೋಡಬೇಕಾಗಿಲ್ಲ ಸಮಯ-ಪ್ರಹರ । ಕಾರಣ, ಶಿವತತ್ವ-ನಿಧಿ ಸರ್ವಕಾಲ ಸರ್ವರ । ಸಹಾಯಕ ಹರ್ಷದ ಮಿತ್ರ ॥೧೬೨॥ ಮಾತ್ರ ವಾಚಕನ ಮನ ಬೇಕು ಶುದ್ಧ । ಭಾವ ಬೇಕು ಅನನ್ಯ ವಿನಮ್ರದ । ಹೇತು ಬೇಕು ಸ್ವಚ್ಛ, ಲೋಕಹಿತಕಾರಕದ । ಸಮರ್ಪಿತರಾಗಬೇಕು ನಿಃಶಂಕ ಅಗಸ್ತ್ಯರಲ್ಲಿ ॥೧೬೩॥ ಶರೀರ ಮಾಡಬೇಕು ಶುಚಿರ್ಭೂತ । ಬಟ್ಟೆ ಉಡಬೇಕು ಸ್ವಚ್ಛಧೂತ । ಸ್ಥಲವೂಬೇಕು ಸುಪ್ರಕಾಶ ಸುಗಂಧಿತ । ಅಗಸ್ತ್ಯ ಮಹಾತ್ಮ್ಯೆ ಓದುವಾಗ ॥೧೬೪॥ ಮಾಡಿರಿ ಮನದಲ್ಲಿ ಫಲ-ಹೇತು ನಿಃಶಂಕ-।-ವ್ಯಕ್ತ, ಅಗಸ್ತ್ಯರ ಸಮ್ಮುಖ-।-ಸಂಕಲ್ಪ, ಹೇತು ಮನದಲ್ಲಿಯ

ಪ್ರತ್ಯೇಕ। ಸ್ಥಾಪಿಸಿ ಮೂರ್ತಿ ಅಗಸ್ತ್ಯರ ॥೧೬೫॥ ಸಂಕಲ್ಪ, ಪ್ರತಿಮೆಯ ಸ್ಥಾಪನ । ಪ್ರತಿಮೆಯ, ಗ್ರಂಥದ ಪೂಜನ। ಮಾಡಿರಿ ಸ್ವ-ಹಸ್ತದಿಂ ಚೆನ್ನ । ಯಥಾಶಕ್ತಿ, ಯಥಾಮತಿ ॥೧೬೬॥ ಮಣ್ಣಿನ, ವಾ ತಾಮ್ರದ ಕಲಶ ತಕ್ಕೊಳ್ಳಿರಿ । ಸಹಜ ದೊರೆವ ಪೇಯಜಲ ತುಂಬಿರಿ । ಅಗಸ್ತ್ಯ (ವನಸ್ಪತಿ) ವಾ ಆಮ್ರ (ವಾ ಋತು ಕಾಲೋದ್ಭವ) ಪರ್ಣದಿಂ ಅಲಂಕರಿಸಿರಿ । ಸುಗಂಧದಿಂ ಶೋಭಿಸಿರಿ ಚಂದ ॥೧೬೭॥ ಮೃತ್ತಿಕಾಸನದಲ್ಲಿ ಧಾನ್ಯಮಿಶ್ರಿತ । ಮಾಡಿರಿ ಶುಭಕಲಶ ಸ್ಥಾಪಿತ। ಅದರ ಮುಂದೆ ಕುಳಿತು ಸ್ವಸ್ಥ ಚಿತ್ತ । ಪೂಜೆ ಆರಂಭಿಸಿರಿ ॥೧೬೮॥ ಕುಂಭ (ಕಲಶ) ದಲ್ಲಿ ಋತುಕಾಲೋದ್ಭವ ಫಲ ವಾ ಅಡಿಕೆ ಇಡಿರಿ । ಕಲಶದ ಮೇಲೆ ತಾಮ್ರದ ತಟ್ಟೆ ಸ್ಥಾಪಿಸಿರಿ । ಅದರ ಮೇಲೆ ಧಾನ್ಯ ಹರಡಿರಿ । (ಅದರ ಮೇಲೆ) ಅಗಸ್ತ್ಯ ಪ್ರತಿಮೆ ಸ್ಥಾಪಿಸಿರಿ ॥೧೭೦॥ ಅಗಸ್ತ್ಯ ಮುದ್ರೆ ಅಂದರೆ ಮಣ್ಣಿನ-।- ಶಿವಲಿಂಗ ವಾ ಮಳಲಿನ । ಸುತ್ತು ಇಡಿರಿ ಸಪ್ತರ್ಷಿ, ಯೋಪಾಮುದ್ರೆ, ನವಗ್ರಹಗಳನ್ನ । ಮತ್ತು ದಿಕ್‌ಪಾಲ, ಕಾಲಭೈರವ, ಸಿದ್ಧೇಶ್ವರ, ಕಾಲಿ॥೧೭೦॥ ಪಾರ್ವತಿ, ನಾರದ, ಸ್ಕಂದ, ಇಂದ್ರ-ಮರುತರನ್ನ । ಅಗ್ನಿ, ಸೂರ್ಯ, ಚಂದ್ರ, ಮಿತ್ರಾ ವರುಣ-।ವಿಷ್ಣು-ಲಕ್ಷ್ಮಿ ಸರಸ್ವತಿ, ಬ್ರಹ್ಮ, ಊರ್ವಶಿ, ವೃಷಭ, ಸೋಮ ಇವರ ಸ್ಥಾಪನ । ಮಾಡಿ ಸ್ಥಾಪಿಸಿರಿ ಶ್ರೀ ಗಣೇಶನನ್ನು ಸ್ವತಂತ್ರ ॥೧೭೧॥ ಪ್ರತಿಮೆ ರಚಿಸಿರಿ ಅಡಿಕೆಯ, ವಾ ಹರಳಿನ । ಮಾಡಿ ಶುಚಿರ್ಭೂತ ಚೆನ್ನ । ಪಂಚಗವ್ಯ (ಋತು ಕಾಲೋದ್ಭವ) ಫಲ-ಪುಷ್ಪಗಳನ್ನ । ಅರ್ಪಿಸಿ ಮನೋಭಾವಭಕ್ತಿಯಿಂದ ಪೂಜಿಸಿರಿ ॥೧೭೨॥ ಪ್ರಥಮ ಗಣೇಶ, ಅಗ್ನಿಪೂಜನ । ಅಗಸ್ತ್ಯಾದಿ ಸರ್ವ ಪ್ರತಿಮೆಗಳ ಅರ್ಚನ । ಹಾಗೂ ಕೊನೆಗೆ ಗ್ರಂಥದ ಪೂಜನ । ಮಾಡಿರಿ



ಯಥಾವಿಧಿ ॥೧೭೩॥ ಅನನ್ಯಭಾವದಿಂ ಆಗಿ ಸಂಶಯ ರಹಿತ । ಮಾಡಿ, ಪುಷ್ಪ-ಫಲ ಅರ್ಪಿತ । ಪೂಜಿಸಿ ಸಂಕಲ್ಪ ಸಹಿತ । ಗ್ರಂಥವಾಚನ ಮಾಡಬೇಕು ॥೧೭೪॥ ಪ್ರತಿಮೆಯ ಮುಂದೆ ಅಗ್ನಿ ಇಡಿರಿ । ಮೃತ್ತಿಕಾ ಕುಂಭ।(ಕಲಶ) ತುಂಬಿರಿ। ಋತುಕಾಲೋದ್ಭವ ಸಮಿಧಾ, ಘೃತ, ಕರ್ಪೂರ, ಅರ್ಪಿಸಿರಿ । ಹೀಗೆ ವಿಧಿಪೂರ್ವಕ ಅಗ್ನಿಪೂಜೆ ಮಾಡಿರಿ ॥೧೭೫॥ ಸೋಮರಸ (ಸೋಮವಲ್ಲಿಯಿಂದ ಮಾಡಿದ ಒಂದು ತರಹದ ಪುರಾತನ ಪೇಯ) ವಾ ದುಗ್ಧ । ಮುಂದೆ ಇಟ್ಟು ಶುದ್ಧ । ನಮಿಸಿ ಭಕ್ತಿ-ಭಾವದಿಂದ । ಅರ್ಚನೆ ಮಾಡಿರಿ ॥೧೭೬॥ ಆರಂಭದಲ್ಲಿ ಕುಲ, ಗ್ರಾಮದೇವತಾ ಪೂಜನ । ಶ್ರೀಗುರು, ಮಾತಾ, ಪಿತಾ, ಪ್ರಿಯಜನ । ಇವರನ್ನು ವಂದಿಸಿ, ತಕ್ಕೊಳ್ಳಿರಿ ಆಶೀರ್ವಚನ । ವಂದಿಸಿರಿ ಗೋಮಾತೆಯನ್ನೂ ॥೧೭೭॥ ಪೂಜೆಯ ನಂತರ ಮಾಡಿರಿ ಗ್ರಂಥ ವಾಚನ । ಉಚ್ಚಮಧುರ, ಶುದ್ಧ ಪ್ರವಣ । ಸ್ಪಷ್ಟ ಇರಬೇಕು ಉಚ್ಚಾರಣ । ಸಾಮಗಾಯನದಂತೆ ಸುಸ್ವರ ॥೧೭೮॥ ಕಥಾ ಗ್ರಂಥ ಕೇಳಲು ಕರೆಯಿರಿ ಪ್ರಿಯಜನ। ಯಥಾಶಕ್ತಿ ಮಾಡಿರಿ ಉತ್ಸವಚೆನ್ನ । ಕೊಟ್ಟು ಸೋಮರಸ, ದುಗ್ಧಾದಿ ರಸಾಯನ । ಹರ್ಷಿಸಿರಿ ಸರ್ವರನ್ನು ॥೧೭೯॥ ಪಾರಾಯಣ ಮಾಡಿರಿ ಏಕಾಸನದಲ್ಲಿ । ಶಕ್ತಿ ಇರದಿರೆ ತ್ರಿಸತ್ರ -ಮೂರು ದಿನಗಳಲ್ಲಿ । ಮೂರು, ಮೂರು, ಒಂದು ಈ ಕ್ರಮದಲ್ಲಿ । ಯಥಾವಕಾಶ ॥೧೮೦॥ ಯಥಾಶಕ್ತಿ ಅರ್ಪಿಸಿರಿ ಪ್ರಸಾದ-ಭೋಜನ । ಅಕ್ಕಿ ಅಥವಾ ಪ್ರಾಪ್ತಧಾನ್ಯ ಕಾಳಿನ । ಸಂತೋಷಿಸಿರಿ ಸರ್ವಜನ । ಪಶು-ಪಕ್ಷಿಗಳಿಗೂ ಅರ್ಪಿಸಿರಿ ॥181॥ ಪ್ರಸಾದ ನೈವೇದ್ಯ ಅರ್ಪಿಸಿರಿ ನೀರಲ್ಲಿ ।

ಇಷ್ಟದೇವತಾ, ಹೊಲ-ತೋಟಗಳಲ್ಲಿ । ನಂತರ ಸೇವಿಸಿರಿ ಸ್ವ ಉದರದಲ್ಲಿ । ಇಷ್ಟ ಪ್ರಾಪ್ತಿಗಾಗಿ ॥೧೮೨॥ ಫಲಪ್ರಾಪ್ತಿಗಾಗಿ ಮಾಡದಿರಿ ಅವಸರ । ಸಂಶಯ ತೋರದಿರಿ ತಿಲಮಾತ್ರ । ನಿಶ್ಚಿತ ಫಲ ಲಾಭ-ಯಥಾಕಾಲ ಪ್ರಹರ। ಇಹರು ಸಾಕ್ಷಿ ಸಿದ್ಧೇಶ್ವರರು ॥೧೮೩॥ ಓಂ ಋಷಿ-ಮುನಿ-ಸಿದ್ಧ-ಯೋಗಿ ದೇವ ಅಗಸ್ತ್ಯರು ಆಜ್ಞಾಪಿಸಿದ್ದನ್ನೇ-।-ನಾನು ಎಲ್ಲ ವಿಸ್ತಾರಸಹಿತ ನಿವೇದಿಸಿದ್ದೇನೆ । ಹೇಳಿಲ್ಲ ಸ್ವಂತದ ತಿಲಮಾತ್ರ ಏನೇ । ಇದಕೆ ಸಿದ್ಧೇಶ್ವರರೇ ಸಾಕ್ಷಿ ॥೧೮೪॥ ಮೂಲ ಶಿವತತ್ವವೇ ಪ್ರಕಟಿಸಿಹುದು । ಜನಹಿತಕ್ಕಾಗಿ ಅಗಸ್ತ್ಯರೂಪ ತಾಳಿ, ಇದು । ತ್ರಿದೇವ, ಪಂಚತತ್ವಾದಿ ಶಕ್ತಿ ಏಕತ್ರ ಬಂದು । ಮಾತ್ರ ಆಗಿಹುದು ವಿಸ್ಮರಣೆ ನಮಗೆ ॥೧೮೫॥ ಇನ್ನಾದರೂ ಹೋಗೋಣ ಅನನ್ಯ ಶರಣ । ಮೂಲ ಪರತತ್ವಕೆ ಮಹಾಘನ । ಆಗಿದ್ದರೆ ಹೆಚ್ಚು-ಕಡಿಮೆ ಇದನ-।-ಸಂಬಾಳಿಸುವರು ಅಗಸ್ತ್ಯರೇ ॥೧೮೬॥ ಓದುವಾಗ ನಿದ್ದೆ ಬಂದೊಡೆ । ವೇಗ ಕಡಿಮೆ ಮಾಡಬೇಕಾದೊಡೆ । ಯಾವದೇ ಕಾರಣದಿಂ ವಿಘ್ನ ಬಂದೊಡೆ । ಕ್ಷಮಿಸಲಿ ಅಗಸ್ತ್ಯರು ಭಾವಿಕನನ್ನು ॥೧೮೭॥ ಅಕ್ಷರ-ಶಬ್ದ-ತಪ್ಪಿದರೆ-ಬಿಟ್ಟರೆ । ಲಕ್ಷ್ಯ ವಿಚಲಿತ ಆದರೆ । ಸಂಬಾಳಿಸಲಿ ಪ್ರೇಮಳ ಅಗಸ್ತ್ಯರೇ । ಕೃಪಾಳುತನದಿಂದ ॥೧೮೮॥ ಇಹರು ಅಗಸ್ತ್ಯ ಸಮರ್ಥ-ಶಾಪಾದಪಿ ಶರಾದಪಿ । ಮಾತ್ರ ನಮಗಾಗಿ ಇಹರು ಮಾತೃರೂಪಿ । ಬಂದಿಹೆವು ಚರಣದಿ ಶರಣ ನಾವು ಪಾಪಿ । ಅನನ್ಯ ಭಕ್ತಿಯಿಂದ॥೧೮೯॥ ಪರಮತತ್ವ ಮತ್ತು ಋಷಿದೇವ । ವ್ರತಿ ತಪಸ್ವಿ' ಸಿದ್ಧನಾಥ, ಮಾನವ । ಇತ್ಯಾದಿ ಇಕ್ಕಟ್ಟಾಗಿ ಕೂಡಿ ಸರ್ವ । ದಯಪಾಲಿಸಿಹರು ಓದಲು ॥೧೯೦॥ ಆಗಿಹರು ಅಗಸ್ತ್ಯ ಪ್ರಸನ್ನ । ಇದುವೇ ಪರಮಭಾಗ್ಯನನ್ನ ।



ಅಗಸ್ತ್ಯರೊಬ್ಬರೆ ತಾರಕರು ಇನ್ನ । ಸಾಕಲಿ ನಮ್ಮೆಲ್ಲರನ್ನು ॥೧೯೧॥ ವೇದ, ಮಹಾಕಾವ್ಯ ಪುರಾಣ । ಹಾಡಿಹವು ಮಹಿಮಾ ವೈಭವದ ಗಾನ । ಹೇಳಿದ್ದರೆ ನಾನು ಅಧಿಕ ಉಣೆಯನ್ನ । ಅಗಸ್ತ್ಯ ಆಜ್ಞೆಯಿಂದೇ ಅದನು ॥೧೯೨॥ ಸ್ವಂತ ಮನದ ಹಾಕಿಲ್ಲ ನಾನು । ಹೇಳಿದ್ದನ್ನೇ, ಅಷ್ಟೇ, ಬರೆದಿಹೆನು । ಅದನ್ನೆಲ್ಲ ಅಗಸ್ತ್ಯರಿಗೇ ಅರ್ಪಿಸಿದ್ದೇನೆ ನಾನು। ನನ್ನದೇನೂ ಉಳಿದಿಲ್ಲ ಇನ್ನು ॥೧೯೩॥ ಇತಿ, ಸಪ್ತಮೋಧ್ಯಾಯ ಸಮಾಪ್ತ । ಓಂ ದೇವ, ಋಷಿ-ಮುನಿ-ಸಿದ್ಧ, ಭಗವಾನ ಅಗಸ್ತ್ಯಾರ್ಪಣಮಸ್ತು । ಅಸ್ತು । ಶುಭಂ ಭವತು । ಶುಭಂ ಭವತು ॥ ಶುಭಂ ಭವತು ॥

॥ ಏಳನೇ ಅಧ್ಯಾಯ ಸಮಾಪ್ತ ॥

**॥ ಅಗಸ್ತ್ಯ ಮಹಾತ್ಮ್ಯ ಸಮಾಪ್ತ ॥**

# ಓಂ ಶ್ರೀದೇವ, ಋಷಿಮುನಿ ಅಗಸ್ತಿ ಮಹಾರಾಜರ ಆರತಿ

ಮೂಲ ಮರಾಠಿ : ಶ್ರೀ ಅನಿಲ ಸಹಸ್ರಬುದ್ದೇ  ಕನ್ನಡ ಅನುವಾದ : ಶ್ರೀ ಶ್ರೀಕಾಂತ ರ. ಫಾಟಕ

ಜಯದೇವ ಜಯದೇವ ಜಯ ಶ್ರೀ ಶಿವರೂಪಾ ।
ಅಗಸ್ತ್ಯ ಮುನಿ ಶ್ರೇಷ್ಠಾ ।
ನಿಮ್ಮಯ ಸೂಕ್ತದ ಬಲದಿಂ । ನಿಮ್ಮಯ ಸಿದ್ಧಿಯ ಬಲದಿಂ-
ಸೃಷ್ಟಿಯು ಸುಖರೂಪಾ ॥

ಇಂದ್ರರ- ಮರುತರ ನೀವು ಮೈತ್ರಿಯ ಮಾಡಿಸಿ ಈ- ।
ಸ್ಥಾಪಿಸಿದಿರಿ ಋತುಚಕ್ರವ ನಿತ್ಯದ ನಿಯಮಿತದಿ ॥
ಅಪೂರ್ವ ಸಿದ್ಧಿಯ ಮೂಲಕ ಸಾಗರ ಕುಡಿದಿಯರೀ ।
ರಾಕ್ಷಸರಿಂ ಸುರ-ನರರ ರಕ್ಷಣೆ ಮಾಡಿದಿರಿ ॥ ಜಯದೇವ....

೧೦೬

ವಿಂಧ್ಯನ ವಿನಮ್ರ ಮಾಡಿ, ರವಿ-ಶಶಿ ಸಾಕಿದಿರೀ ।
'ಪೋಥಿಯಿಲೀ'- ಯಲಿ ಕುಳಿತು, ಹಿಮಗಿರಿ ಸಾಕಿದಿರೀ ।
ಸಾಧಿಸಿದಿರಿ ತೋಲಿಸಿ ಭೂ, ಶಿವ-ಗಿರಿಜೆಯ ಐಕ್ಯ ।
ನಹುಷನ ದಂಡಿಸಿ ನೀವು ಇಂದ್ರನ ಸಾಕಿದಿರಿ ॥ ಜಯದೇವ....

ತರಲೂ ಭಾಗೀರಥಿಯನು ಸಹಾಯ ನೀಡಿದಿರಿ ।
ಸುಜಲಾಂ-ಸುಫಲಾಂ ಅವನಿಯ - ಭೂತಲ ಮಾಡಿದಿರಿ ॥
ಸೋಲಿಸಿ ಶುರ-ಪದ್ಮನ್ನ ಗರ್ವವ ಹರಿಸಿದಿರಿ ।
ದಕ್ಷಿಣ ತೊಯ್ಯಿಸಿದೀರೀ ವರಿಸೀ -ಕಾವೇರೀ ॥ ಜಯದೇವ....

ಲೋಪಾಮುದ್ರೆಯ ವರಿಸೀ ಗೋತ್ರಜ ಉಳಿಸಿದಿರಿ ।
ವಾತಾಪಿಯ ಜೀರ್ಣಿಸಿ ತನ ಪೌರುಷ ತೋರಿದಿರಿ ॥
ಯೋಜಿಸಿ ಶರವಿದ್ಯೆನು ಸತ್ಯವ ಸಾಕಿದಿರಿ ।
ವಿದ್ಯೆ ಅಥರ್ವದ ಮೂಲಕ ಸ್ವಾಸ್ಥ್ಯೆಯ ಸಾಕಿದಿರಿ ॥ ಜಯದೇವ...

೧೦೭

'ಅಮೃತ ವಾಹಿನಿ', 'ಗೌತಮಿ', 'ಗೋದಾವರಿ' ಪುನಿತ ।
ತಾಮ್ರಪರ್ಣಿಯ ನಿರ್ಮಿಸಿ, ಕೌತುಕ ತೋರಿದಿರಿ ॥
ಅದ್ವೈತಾಮೃತ ಸುರಿದು, ಶಿವತತ್ ಉಳಿಸಿದಿರಿ ।
ದಂಡಿಸಿ 'ಮನಮಯ' ದೈತ್ಯನ,ಜೀವವ ಸಾಕಿದಿರಿ ॥ಜಯದೇವ...

ನೀವಿದ್ದರು ಅತಿ ಉಗ್ರರು, ಉದಾರ ಯೋಗಿ ಗುರು।
ಅರಿತೂ ಮಾನಸ ಭಾವವ ಕೃಪೆ ದಯಪಾಲಿಸಿರಿ ।
ನಿಮ್ಮಯ ಬಲದಿಂ ಸುಲಭನ ಜಲ-ವನಿತಾ-ಪುತ್ರ।
ಕೃಷಿಧನ ಪಶು-ಪಕ್ಷೀಧನ ದಾಸರ ಸಾಕುವಿರಿ ॥ಜಯದೇವ...

ಇದ್ದಿರಿ 'ಅಗಸ್ತ್ಯ ಪುರಿ'ಯಲಿ ಚಿರ ರೂಪದಿ ಸೂಕ್ಷ್ಮ।
ರಕ್ಷಿಸುವಿರಿ ವಿಶ್ವವನೇ ದುರಿತವ ಪರಿಹರಿಸಿ ॥
ಬಂದೆನು ಚರಣದಿ ಶರಣ ಅನನ್ಯ ಮನದಿಂದ ।
ಬೇಡುವೆ ಸಾಕಿರಿ 'ಅನಿಲ'ನ ಮಾನಸ ಪೂರೈಸಿ ॥ಜಯದೇವ..

೧೦೮